
ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಹುಯಿಲಗೋಳ ನಾರಾಯಣರಾಯರು

ಪ್ರೊ. ಸಂಪದಾ ಸುಭಾಷ್

ಕನ್ನಡ ಪುಸ್ತಕ ಪ್ರಾಧಿಕಾರ

# ಮುಯಿಲಗೋಳ
# ನಾರಾಯಣರಾಯರು

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಹುಯಿಲಗೋಳ ನಾರಾಯಣರಾಯರು

ಪ್ರೊ:ಸಂಪದಾ ಸುಭಾಷ್

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**HUYILAGOLA NARAYANARAYARU** A Monograph on Huyilagola Narayanarayaru in Kannada Written by: Prof. Sampada Subhash Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xv + 116
Copies : 1000
Price : ₹ 60.00

ಮೊದಲ ಮುದ್ರಣ : ೨೦೧೨
ಪುಟಗಳು : xv + ೧೧೬
ಪ್ರತಿಗಳು : ೧೦೦೦
ಬೆಲೆ : ₹ ೬೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**
ಸಂಪಾದಕ

# ಲೇಖಕರ ಮಾತು

ಕನ್ನಡ ಕಟ್ಟಿದವರು ಮಾಲಿಕೆಯಡಿ ಕನ್ನಡ ನಾಡು ನುಡಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅನೇಕ ಮಹನೀಯರ ಸ್ಮರಣೆ ಮುಂದಿನ ಜನಾಂಗಕ್ಕೆ ಪ್ರಚಾರಪಡಿಸುವ ಸದುದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರು ನಾಡಿನ ಮೂಲೆಮೂಲೆಗಳಲ್ಲಿ ಕನ್ನಡಕ್ಕಾಗಿ ದುಡಿದವರ ಬಗೆಗೆ ಪುಸ್ತಕ ರೂಪದಲ್ಲಿ ಅವರ ಸಮಗ್ರ ಚರಿತ್ರೆಯನ್ನು ಕುರಿತಂತೆ ಈ ಪುಸ್ತಕ ಪ್ರಕಾಶನಗೊಳಿಸುತ್ತಿರುವುದು ಸಂತಸದ ವಿಷಯ.

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ನಾಡಗೀತೆಯನ್ನು ಮಹಾತ್ಮಗಾಂಧೀಜಿಯವರ ಸಮ್ಮುಖದಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಹೇಳಿ ಅವರಿಂದ ಮೆಚ್ಚುಗೆ ಗಳಿಸಿದ ಕವಿ ಹುಯಿಲಗೋಳ ನಾರಾಯಣರಾಯರು. ಕನ್ನಡ ನಾಡು ನುಡಿಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಇವರು ನೀಡಿದ ಕೊಡುಗೆ ಅಪಾರ. ಅವರು ಕಾವ್ಯ, ನಾಟಕ, ವೈಚಾರಿಕ ಪ್ರಬಂಧ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಬೆಳಗಿದವರು. ಅಂತಹ ಅಪೂರ್ವ ವ್ಯಕ್ತಿಯ ಸ್ಮರಣೆಯನ್ನು ಮಾಡುವುದರ ಜೊತೆಗೆ ಕನ್ನಡಾಭಿಮಾನ ಬೆಳೆಯುತ್ತದೆ.

ಮೇರು ವ್ಯಕ್ತಿತ್ವದ ಕವಿ ಹುಯಿಲಗೋಳ ನಾರಾಯಣರಾಯರು ಗದಗಿನವರು. ಅವರ ಆರಾಧ್ಯ ದೈವ ಶ್ರೀ ವೀರನಾರಾಯಣ, ಕುಮಾರವ್ಯಾಸನು ತನ್ನ 'ಗದುಗಿನ ಭಾರತ'ದಲ್ಲಿ ಹೇಳಿದಂತೆ ವೀರನಾರಾಯಣನೆ ಕವಿ. ತಾನು ಲಿಪಿಕಾರನು ಎಂದು ಹೇಳಿರುವಂತೆ ನಾರಾಯಣರ ಸಾಹಿತ್ಯ ಸ್ಫೂರ್ತಿಗೆ ಗದುಗಿನ ವೀರನಾರಾಯಣ ಆರಾಧ್ಯದೈವ. [ಲಿಪಿಕಾರ]. ಇವರು ವೃತ್ತಿಯಿಂದ ನ್ಯಾಯವಾದಿಯಾಗಿದ್ದರೂ ಪ್ರವೃತ್ತಿಯಿಂದ ಸಾಹಿತಿಗಳು. ನಾಡಿನ ಹಲವಾರು ಸಾಹಿತಿಗಳ ಸಂಪರ್ಕದಿಂದ ಅವರೂ ಕೂಡ ಸಾಹಿತಿಗಳಾದರು. ಅವರನ್ನು ಪ್ರೀತಿಯಿಂದ ಬಂಧುಗಳು, ಗೆಳೆಯರು 'ನಾನಾ' ಎಂದು ಕರೆಯುತ್ತಿದ್ದರು. ಸರಳ ನಿರಾಡಂಬರ ವ್ಯಕ್ತಿಯಾಗಿದ್ದ ಹುಯಿಲಗೋಳ ನಾರಾಯಣರಾಯರು ಶುಭ್ರ ಖಾದಿ ಧೋತರ, ಖಾದಿ ಅಂಗಿ, ಕೊರಳನ್ನು ಬಿಗಿಯಾಗಿ ಸುತ್ತಿಕೊಂಡಿದ್ದ ತುಂಬುತೋಳಿನ ಖಾದಿ ಜೋಧಪುರಿ

ಕೋಟು, ತಲೆಗೆ ಅಂದವಾಗಿ ಸುತ್ತಿದ ಖಾದಿ ರುಮಾಲು. ಹೆಗಲ ಮೇಲೊಂದು ಬಿಳಿಯವಸ್ತ್ರ ಇವು ಇವರ ವೇಷಭೂಷಣಗಳಾಗಿದ್ದವು.

ತಮ್ಮ ಜೀವನದುದ್ದಕ್ಕೂ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ನಾಡಹಬ್ಬ ಪುಸ್ತಕ ಬಿಡುಗಡೆ, ಕಾವ್ಯ ವಾಚನ, ಸಾಹಿತ್ಯ ಸಮ್ಮೇಳನಗಳಲ್ಲಿ ಸದಾ ಭಾಗಿಯಾಗಿರುತ್ತಿದ್ದರು. ಗದುಗಿನ ತ್ರಿಕೂಟೇಶ್ವರ ದೇವಾಲಯ, ವೀರನಾರಾಯಣ ದೇವಾಲಯಗಳ ಟ್ರಸ್ಟ್ ಕಮೀಟಿ ಸದಸ್ಯರಾಗಿ ಸೇವೆ. ಗದುಗಿನ ಜುಮ್ಮಾ ಮಸೀದಿಗೆ ಉತ್ಪನ್ನ ಬರುವಂತೆ ಮಾಡಿದ್ದರು. ಗದುಗಿನಲ್ಲಿ ವಿದ್ಯಾದಾನ ಸಮಿತಿಯನ್ನು ಸ್ಥಾಪಿಸಿದ್ದು ಇತಿಹಾಸ. ಯಂಗ್ ಮೆನ್ಸ್ ಫುಟ್‌ಬಾಲ್ ಅಸೋಸಿಯೇಷನ್ ಸ್ಥಾಪಿಸಿ ಆ ಮೂಲಕ ಶಿಕ್ಷಣ ಸಂಸ್ಥೆಗೆ ಹಣ ಕೂಡಿಸಿದರು. ಈಗ ಆ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ. ಹವ್ಯಾಸಿ ನಾಟಕ ತಂಡ ಕಟ್ಟಿ ಅದರಿಂದ ಬಂದ ಹಣವನ್ನು ಶಿಕ್ಷಣ ಸಂಸ್ಥೆಗೆ ನೀಡಿದ್ದು ಅವರ ಉದಾರ ಗುಣ.

ಅವರು ನಾಟಕ, ಗದ್ಯ, ಪದ್ಯ, ಪ್ರಬಂಧ ಸಾಹಿತ್ಯ ಬರೆದು ಸಾಹಿತ್ಯ ಕ್ಷೇತ್ರದಲ್ಲಿ ತುಂಬಾ ಹೆಸರನ್ನು ಮಾಡಿದವರು. ಅನೇಕ ಸ್ವಾಗತ ಗೀತೆಗಳನ್ನು ಬರೆದು ಸಾಹಿತ್ಯ ಸಮ್ಮೇಳನ ವಿಶೇಷ ಸಭೆ ಸಮಾರಂಭಗಳಲ್ಲಿ ಹಾಡಿ ಜನರಿಂದ ಮೆಚ್ಚುಗೆಯನ್ನು ಪಡೆದರು.

ಮಹಾತ್ಮಾ ಗಾಂಧೀಜಿ, ಲೋಕಮಾನ್ಯ ತಿಲಕ, ಶ್ರೀ ವೀರ ಸಾವರಕರ, ನಿಟ್ಟೂರು ಶ್ರೀನಿವಾಸರಾಯರು. ಕೆ. ಹನುಮಂತಯ್ಯ, ಆಲೂರ ವೆಂಕಟರಾಯರು, ಗರೂಡ ಸದಾಶಿವರಾಯರು, ಕುವೆಂಪು, ಅ.ನ.ಕೃ., ಜಿ. ಪಿ. ರಾಜರತ್ನಂ, ಹರ್ಡಿಕರ ಹೀಗೆ ಹುಯಿಲಗೋಳರ ಸಂಪರ್ಕದಲ್ಲಿ ಬಂದ ಮಹಾನುಭಾವರ ಸಂಖ್ಯೆ ಅಗಣಿತ.

ಈ ಗ್ರಂಥ ಬರೆಯುವಲ್ಲಿ ಸಂಪೂರ್ಣ ಸಹಕಾರ ನೀಡಿದ ಡಾ. ಜಿ. ಡಿ. ಜೋಷಿ, ಶ್ರೀಮತಿ ರಾಧಾ ಕುಲಕರ್ಣಿ, ನನ್ನ ಪತಿ ಶ್ರೀ ಸುಭಾಷ್ ಬಕಾಲಿ ಹಾಗೂ ಅಣ್ಣ ಸೋಮಶೇಖರ್ ಮತ್ತು ಗದುಗಿನ ಇವರ ಬಂಧು ಬಳಗ ನನ್ನ ಬರವಣಿಗೆಗೆ ನೆರವು ನೀಡಿದ್ದಾರೆ. ಅಕ್ಷರ ಸಂಯೋಜನೆ ಮಾಡಿದ ಶ್ರೀಮಂಜುನಾಥ ಪಿ. ಉಳ್ಳಾಗಡ್ಡಿ, ಅಂದವಾಗಿ ಮುದ್ರಿಸಿದ ಮೆ॥ ಪ್ರಿಂಟ್ ಪಾರ್ಕ್ ಅಫ್‌ಸೆಟ್ ಮುದ್ರಣಾಲಯ ಬೆಂಗಳೂರುರವರಿಗೆ ಹಾಗೂ ಪ್ರಕಟಣೆಗೆ ಪ್ರೋತ್ಸಾಹ ನೀಡಿದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯನವರಿಗೂ, ಪುಸ್ತಕ ಪ್ರಾಧಿಕಾರದ ಎಲ್ಲ ಸದಸ್ಯರಿಗೂ, ಆಡಳಿತಾಧಿಕಾರಿಗಳಾದ ಬಿ ಎಚ್ ಮಲ್ಲಿಕಾರ್ಜುನ ಹಾಗೂ ಸಿಬ್ಬಂದಿ ವರ್ಗಕ್ಕೆ ನಾನು ಚಿರಋಣಿ.

**ಪ್ರೊ. ಸಂಪದಾ ಸುಭಾಷ್**

## ಪರಿವಿಡಿ


೧. ಹುಯಿಲಗೋಳ ನಾರಾಯಣರಾಯರ ಜೀವನ ೩

೨. ಹುಯಿಲಗೋಳ ನಾರಾಯಣರ ಸಾಧನೆಗಳು ೧೧

೧ ಶಿಕ್ಷಣ ಕ್ಷೇತ್ರ

೨ ಧಾರ್ಮಿಕ ಕ್ಷೇತ್ರ

೩. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಕಾರ ಸೇವೆ ೧೫

೪. ಸಾಹಿತ್ಯ ಕ್ಷೇತ್ರ ೨೩

೫. ನಾರಾಯಣರಾಯರು ಕುಮಾರವ್ಯಾಸನ ಜೀವನ ಸಾಹಿತ್ಯದ ಬಗ್ಗೆ ಲೇಖನಗಳು ೫೯

೬. ನಾಟಕ ಸಾಹಿತ್ಯ ೭೫

೭. ರಂಗಭೂಮಿಯ ಬಗ್ಗೆ ಸುಶಿಕ್ಷಿತರ ಔದಾಸೀನ್ಯ ೮೯

೮. ಚಳುವಳಿ ಹಾಗೂ ಹೋರಾಟ ೯೭

೯. ಗಣ್ಯ ವ್ಯಕ್ತಿಗಳ ಒಡನಾಟ ೧೦೩

ಉಪಸಂಹಾರ ೧೦೭



'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡಿ'ನ
ಹುಯಿಲಗೋಳ ನಾರಾಯಣರಾಯರು

# ಹುಯಿಲಗೋಳ ನಾರಾಯಣರಾಯರು

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಉದಯರಾಗದ ಮೂಲಕ ನಾಡಿನ ಜನಮಾನಸದಲ್ಲಿ ಚಿರಸ್ಥಾಯಿಯಾದ ಮೇರು ವ್ಯಕ್ತಿತ್ವದ ಕವಿ ಹುಯಿಲಗೋಳ ನಾರಾಯಣರಾಯರು.

ಕನ್ನಡ ನಾಡು–ನುಡಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ. ಅವರು ಕಾವ್ಯ, ನಾಟಕ, ವೈಚಾರಿಕ ಪ್ರಬಂಧ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸಿ ಕನ್ನಡ ಸಾಹಿತ್ಯ ಲೋಕವನ್ನು ಬೆಳಗಿಸಿದವರು. ಅಂತಹ ಅಪೂರ್ವ ವ್ಯಕ್ತಿಯ ಕುರಿತು ಕನ್ನಡ ಪುಸ್ತಕ ಪ್ರಾಧಿಕಾರ 'ಕನ್ನಡ ಕಟ್ಟಿದವರು' ಎಂಬ ಮಾಲಿಕೆಯಲ್ಲಿ ಅವರ ಸ್ಮರಣೆಯನ್ನು ಮಾಡುವುದರ ಜೊತೆಗೆ ಕನ್ನಡಾಭಿಮಾನ ಬೆಳೆಸುತ್ತದೆ.

**ವಂಶಜರು:**

ಶ್ರೀ ಹುಯಿಲಗೋಳ ನಾರಾಯಣರಾಯರು ವಂಶಜರು ಮೂಲತಃ ಬಳ್ಳಾರಿಯವರು ಇವರಿಗೆ ಬಳ್ಳಾರಿ ಎಂದೆ ಕರೆಯುತ್ತಿದ್ದರು. ಇವರ ಪೂರ್ವಜರಾದ ಹನುಮಂತರಾಯರು ಬ್ರಿಟೀಷರ ಆಳ್ವಿಕೆಯಲ್ಲಿ ಕಮೀಷನರ್ ಕಚೇರಿಯಲ್ಲಿ ಗುಮಾಸ್ತರಾಗಿದ್ದರು. ಅವರು ನಿಷ್ಠೆಯಿಂದ ಸೇವೆಯನ್ನು ಸಲ್ಲಿಸಿದ ಪರಿಣಾಮವಾಗಿ ೧೮೨೩ರಲ್ಲಿ ಲೆಫ್ಟನೆಂಟ ಕ್ಯಾಂಬೆಲ್ ಎಂಬ ಅಧಿಕಾರಿಗಳು ಇವರಿಗೆ ಹುಯಿಲಗೋಳ ಕಳಸಾಪುರ, ಹಾಗೂ ನಾಗಾವಿ ಹಳ್ಳಿಗಳನ್ನು ಇನಾಮಾಗಿ ಕೊಟ್ಟರು. ನಂತರದ ದಿನಗಳಲ್ಲಿ ಬಳ್ಳಾರಿಯನ್ನು ಬಿಟ್ಟು ಹುಯಿಲಗೋಳದಲ್ಲಿ ನೆಲೆಸಿದರು. ಅಲ್ಲಿ ತಮ್ಮ ಕುಲದೇವತೆಯಾದ ಲಕ್ಷ್ಮೀನಾರಾಯಣನ ದೇವಸ್ಥಾನವನ್ನು ಕಟ್ಟಿಸಿದರು. ಆಗಿನಿಂದ ಇವರಿಗೆ "ಹುಯಿಲಗೋಳ" ಎಂಬ ಅಡ್ಡಹೆಸರು ಬಂದಿತು.

ಹುಯಿಲಗೋಳ ಮನೆತನದವರು ಹತ್ತಿರದಲ್ಲಿರುವ ವ್ಯಾಪಾರಿ ಕೇಂದ್ರವಾದ ಗದುಗಿಗೆ ಬರುತ್ತಿದ್ದು. ನಂತರದ ದಿನಗಳಲ್ಲಿ ಪ್ರಸಿದ್ಧ ವೀರನಾರಾಯಣ ದೇವಸ್ಥಾನದ ಸಮೀಪದಲ್ಲಿರುವ ಹಾಳುದಿಬ್ಬ ಅವರ ವಾಸಸ್ಥಳವಾಯಿತು. ಶ್ರೀ ಜನಮೇಜಯ

ಸರ್ಪಯಾಗ ಮಾಡಿದ ಸ್ಥಳವೇ ಹಾಳದಿಬ್ಬ ಎಂಬ ಪ್ರತೀತಿಯಿದೆ. ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ವೀರನಾರಾಯಣನೇ ಕವಿ ತಾನು ಲಿಪಿಕಾರನು ಎಂದು ಹೇಳಿರುವಂತೆ ನಾರಾಯಣರಾಯರ ಸಾಹಿತ್ಯ ಸ್ಫೂರ್ತಿಗೆ ಗದುಗಿನ ವೀರನಾರಾಯಣರೆ ಆರಾಧ್ಯ ದೈವ. (ಲಿಪಿಕಾರ)

ಬಾಲ್ಯ:

ಗದುಗಿನಲ್ಲಿ ೧೮೮೪ ಅಕ್ಟೋಬರ್ ೪ರಂದು ಜನಿಸಿದರು. ತಂದೆ ಕೃಷ್ಣರಾಯರು ಆಗಿನ ಕಾಲದಲ್ಲಿ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಶಿಕ್ಷಕ ವೃತ್ತಿಯಲ್ಲಿದ್ದರು. ತಾಯಿ ರಾಧಾಬಾಯಿ(ಬಹಿಣಕ್ಕ)ಪ್ರಸಿದ್ಧ ಉಮಚಗಿ ಮನೆತನದ ರಾಮಣ್ಣ ನಾಯಕರ ಒಬ್ಬಳೇ ಮಗಳು. ಇವರ ಹಿರಿಯ ಮಗನೇ ನಾರಾಯಣರಾಯರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ನಂತರ ಅಜ್ಜ ರಾಮಣ್ಣ ನಾಯಕರ ಆಶ್ರಯದಲ್ಲಿ ಬೆಳೆದರು. ಅಜ್ಜಿ ಮತ್ತು ತಾಯಿ ಪುರಂದರದಾಸರ ಪದಗಳನ್ನು ಹೇಳುತ್ತಿದ್ದರು. ಚಿಕ್ಕಮ್ಮ ಶೇಷಕ್ಕ ಕುಮಾರವ್ಯಾಸ ಭಾರತವನ್ನು ಪಠಣ ಮಾಡುತ್ತಿದ್ದರು. ಹೀಗೆ ಸುಸಂಸ್ಕೃತವಾದ ಪರಿಸರದ ಪ್ರಭಾವ ಅವರ ಮೇಲೆ ಗಾಢವಾದ ಪರಿಣಾಮ ಬೀರಿ ಶತಮಾನದ ಶ್ರೇಷ್ಠನಾಡ ಕವಿಯಾಗಿ ರೂಪಗೊಳ್ಳುವಲ್ಲಿ ಪೋಷಕವಾದರು.

ವಿದ್ಯಾಭ್ಯಾಸ:

ತಂದೆ ಕೃಷ್ಣರಾಯರು ಗೋಕಾಕದಲ್ಲಿ ಕೆಲಸ ಮಾಡುತ್ತಿದ್ದರಿಂದ ನಾರಾಯಣರ ಪ್ರಾಥಮಿಕ ಶಿಕ್ಷಣ ಅಲ್ಲಿಯೇ ಆರಂಭವಾಯಿತು. ಅನಂತರ ಗದಗ, ಧಾರವಾಡಗಳಲ್ಲಿ ಮುಂದುವರೆಯಿತು.. ೧೯೦೨ರಲ್ಲಿ ಧಾರವಾಡದ ಸರಕಾರಿ ಮಾಧ್ಯಮಿಕ ಶಾಲೆಯಿಂದ ಮ್ಯಾಟ್ರಿಕ್ ಈಗಿನ (ಎಸ್.ಎಸ್.ಎಲ್.ಸಿ) ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಬಾಲ್ಯದಲ್ಲೇ ಸೂತ್ರದ ಗೊಂಬೆಯಾಟ, ಕಿಳ್ಳಿಕ್ಯೆತರಆಟ, ಸಣ್ಣಾಟ, ಬಯಲಾಟ, ದೊಡ್ಡಾಟಗಳನ್ನು ನೋಡುವ ಹವ್ಯಾಸ ಬೆಳೆದಿತ್ತು. ಹೀಗಾಗಿ ಮಾಧ್ಯಮಿಕ ಶಾಲೆಯಲ್ಲಿ ಇರುವಾಗಲೇ 'ಇಂದ್ರಜೀತವಧೆ'. 'ಗರುಡ ಗರ್ವಭಂಗ', ಎಂಬ ನಾಟಕವನ್ನು ತಾವೇ ಮಾರ್ಪಡಿಸಿಕೊಂಡು ಬರೆದು ಆಡಿದ ನಾಟಕಗಳಾಗಿದ್ದವು.

ಹಲವು ಪ್ರಾಂತಗಳಾಗಿ ಹರಿದು ಹಂಚಿಹೋಗಿದ್ದ ಕನ್ನಡ ನಾಡಿನಲ್ಲಿ ಜ್ಞಾನಾರ್ಜನೆಗಾಗಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಪುಣೆ, ಮುಂಬಯಿಗಳಿಗೆ ಹೋಗುತ್ತಿದ್ದರು. ನಾರಾಯಣರೂ ರ್‍ಯಾಂಗಲರ್ ಪರಾಂಜಪೆಯವರು ಪ್ರಿನ್ಸಿಪಾಲರಾಗಿದ್ದ ಪುಣೆಯ ಫರ್ಗೂಸನ್ ಕಾಲೇಜನ್ನು ಸೇರಿದರು. ಆಗ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತರಾದರು. ತರುಣರಾಗಿದ್ದ ಅವರಲ್ಲಿ ಸ್ವಾಭಾವಿಕವಾಗಿಯೇ ರಾಷ್ಟ್ರಪ್ರೇಮದ ಸೆಳೆತ ಕಾಣಿಸಿಕೊಂಡಿತು. ಪುಣೆಯಲ್ಲಿ

ಮರಾಠಿ ಭಾಷೆಯು ಕೇಂದ್ರಬಿಂದು ವಾದುದರಿಂದ ಅಲ್ಲಿ ಕನ್ನಡಕ್ಕೆ ಸ್ಥಾನವಿರಲಿಲ್ಲ. ಕಾಲೇಜಿನ ಗ್ರಂಥಾಲಯದಲ್ಲಿ ಕನ್ನಡದ ಪುಸ್ತಕಗಳಿರಲಿಲ್ಲ. ನಾರಾಯಣರಾಯರು ಪ್ರಾಚಾರ್ಯರಿಗೆ ಮನವಿ ಮಾಡಿ ಕನ್ನಡ ಪುಸ್ತಕಗಳನ್ನು ಖರೀದಿಸಲು ಕಾರಣರಾದರು. ಕನ್ನಡಿಗರಲ್ಲಿ ಭಾಷಾ ಪ್ರೇಮವಿಲ್ಲದಿರುವುದನ್ನು ಕಂಡು ತುಂಬಾ ಮನಸ್ಸಿಗೆ ನೋವಾಯಿತು. ಕನ್ನಡ ಭಾಷೆಗೆ, ಮತ್ತು ಕನ್ನಡದ ಪುಸ್ತಕಗಳಿಗೆ ಅಪಮಾನ ಮಾಡಬಾರದೆಂದು ಕಳಕಳಿಯ ಮನವಿ ಮಾಡಿದ್ದರು.

ಒಮ್ಮೆ ಕನ್ನಡ ವಿದ್ಯಾರ್ಥಿಗಳ ಸಂಘವು ಗಜಾನನೋತ್ಸವವನ್ನು ಆಚರಿಸಲಾರಂಭಿಸಿದ ನಂತರ ಮರಾಠಿ ವಿದ್ಯಾರ್ಥಿಗಳು 'ಕನ್ನಡದಲ್ಲಿ ಏನಿದೆ' ? ಎಂದು ಅಪಹಾಸ್ಯ ಮಾಡಲು ನಾರಾಯಣರಾಯರು ಆಗಲೇ ಕನ್ನಡ ಪದ್ಯವನ್ನು ಕಟ್ಟಿ ಹಾಡಿದ್ದರಂತೆ. ೧೯೦೭ರಲ್ಲಿ ಸಂಸ್ಕೃತ ಮತ್ತು ಇಂಗ್ಲೀಷ ಭಾಷೆಗಳನ್ನು ಆಯ್ದುಕೊಂಡು ಬಿ.ಎ.ಪದವಿಯನ್ನು ಪಡೆದರು. ಈ ವೇಳೆಗೆ ಮಲೇರಿಯಾ ರೋಗ ಕಾಣಿಸಿಕೊಳ್ಳಲು ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಲು ಧಾರವಾಡದಲ್ಲಿ ನೆಲೆಸಿದರು. ಆ ಅವಧಿಯಲ್ಲಿ ವಿಕ್ಟೋರಿಯಾ ಹೈಸ್ಕೂಲಿನಲ್ಲಿ (ಈಗಿನ ವಿದ್ಯಾರಣ್ಯ ಹೈಸ್ಕೂಲ್) ಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು. ಆಗ ಅಲ್ಲಿ ವರಕವಿ 'ದ.ರಾ.ಬೇಂದ್ರೆ'ಯವರು ವಿದ್ಯಾರ್ಥಿಯಾಗಿದ್ದರು. ಆಗ ಶೇಕ್ಸಪಿಯರ್ ಕವಿಯ "The Merchant of Venice" ನಾಟಕವನ್ನು ವಿದ್ಯಾರ್ಥಿಗಳಿಂದ ಆಡಿಸಿದ್ದರು. ಬೇಂದ್ರೆಯವರ ಜಾಣ್ಮೆಯನ್ನು ಮೊದಲೇ ಅರಿತ ನಾರಾಯಣರಾಯರು ಅವರನ್ನು ಗದುಗಿನಲ್ಲಿ ತಾವು ಸ್ಥಾಪಿಸಿದ ವಿದ್ಯಾದಾನ ಸಮಿತಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕ ಮಾಡಿಕೊಂಡರು. ಬೆಳೆಯುವ ಪೈರು ಮೊಳಕೆಯಲ್ಲಿ ನೋಡು, ಎಂಬಂತೆ ಬಾಲ್ಯದಲ್ಲಿಯೇ ಅವರಿಗೆ ಸಾಹಿತ್ಯದ ಕಡೆಗೆ ಒಲವು ಮೂಡಿತು. ಅನೇಕ ಗ್ರಂಥ ಅಭ್ಯಾಸ ಮಾಡುವುದು ಹಾಗೂ ಕವನಗಳನ್ನು ಬರೆಯಲು ಪ್ರಾರಂಭಿಸಿದರು.

೧೯೦೮ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಮೊಟ್ಟಮೊದಲು ಸಾಹಿತ್ಯ ಸಮ್ಮೇಳನಕ್ಕೆ ನಾರಾಯಣರಾಯರು ಹೋಗಿದ್ದರು. ನಂತರ "ಕನಸು" ಎಂಬ ಕವನ ಪ್ರಕಟವಾಯಿತು. ೧೯೧೦ರಲ್ಲಿ 'ವಜ್ರಮುಕುಟ' ಎಂಬ ನಾಟಕವನ್ನು ರಚಿಸಿದರು. ಮುಂದೆ ಮುಂಬಯಿಯ ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ. ಪದವಿಯನ್ನು ಪಡೆದು ಗದುಗಿನಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು.

**ಆಸಕ್ತಿ :** ನಾರಾಯಣರಾಯರು ಭಕ್ತಿಯ ಪರಿಸರದಲ್ಲಿ ಬೆಳೆದವರು. ಬಾಲಕನಾಗಿರುವಾಗಲೇ ಕುಮಾರವ್ಯಾಸ ಭಾರತದ ಶ್ರವಣ ದಾಸರ ಪದಗಳನ್ನು ಹೇಳುವುದರಲ್ಲಿ ಆಸಕ್ತಿ ಮೂಡಿಸಿಕೊಂಡರು. ಅವರ ತಾಯಿ ಮತ್ತು ಅಜ್ಜಿಯ

ದಿನನಿತ್ಯದ ಹಾಡುಗಳನ್ನು ಕೇಳಿ ತಿಳಿದುಕೊಳ್ಳುವುದೆಂದರೆ ತುಂಬಾ ಆಸಕ್ತಿ ಹೀಗಾಗಿ ಅವರ ನರ ನಾಡಿಗಳಲ್ಲಿ ಭಕ್ತಿರಸ ತುಂಬಿಕೊಂಡಿತ್ತು. ದೊಡ್ಡಾಟಗಳು ಎಂದರೆ ವಿಶೇಷ ಆಸಕ್ತಿ, ಅವುಗಳನ್ನು ನೋಡದೇ ಇರುವ ದಿನಗಳೇ ಇಲ್ಲ, ತಮ್ಮ ಮನೆಮಂದಿಯರೊಡನೆ ಚಕ್ಕಡಿ ಮಾಡಿಕೊಂಡು ದೊಡ್ಡಾಟಗಳನ್ನು ನೋಡಿ ಬರುತ್ತಿದ್ದರಂತೆ. ವಿದ್ಯಾರ್ಥಿ ಜೀವನದಲ್ಲಿಯೇ ನಾಟಕಗಳನ್ನು ನೋಡುವ ಹಾಗೂ ಬರೆಯುವ ಒಲವು ಮೂಡಿತು. ಮುಂದಿನ ದಿನಗಳಲ್ಲಿ ರಂಗಭೂಮಿ ಮತ್ತು ನಾಟಕ ಆಸಕ್ತಿಯ ಕ್ಷೇತ್ರಗಳಾದವು.

**ಪ್ರೇರಣೆ-ಪ್ರಭಾವಗಳು :**

ನಾರಾಯಣರಾಯರಿಗೆ ಶಾಂತಕವಿಗಳು ರಚಿಸಿದ "ಕೀಚಕ ವಧೆ" "ವತ್ಸಲಾಪಹರಣ" ನಾಟಕಗಳ ಪ್ರಭಾವದಿಂದ ನಾಟಕದ ಗೀಳನ್ನು ಬೆಳೆಸುವಲ್ಲಿ ಪ್ರೇರಣೆಯಾದರು ಹೀಗಾಗಿ ಮಾಧ್ಯಮಿಕ ಶಾಲೆಯಲ್ಲಿರುವಾಗ, ತಮ್ಮ ಸಹೋದರ ಶ್ರೀನಿವಾಸನೊಂದಿಗೆ "ಗರುಡಗರ್ವಭಂಗ" ಎಂಬ ನಾಟಕವನ್ನು ತಾವೇ ರಚನೆ ಮಾಡಿ ಆಡಿದರಂತೆ, ಅಷ್ಟೇ ಅಲ್ಲ ಮನೆಯಲ್ಲಿರುವ ಚಾದರುಗಳನ್ನೇ ರಂಗದ ಮೇಲೆ ಪರದೆಗಳಾಗಿ ಬಳಸಿಕೊಂಡು ಗೆಳೆಯರೊಡನೆ ಈ ನಾಟಕ ಪ್ರಯೋಗ ಮಾಡಿದರಂತೆ. ತಾವು ಈ ಮೊದಲು ನೋಡಿದ 'ಲಂಕಾದಹನ' ಎಂಬ ಯಕ್ಷಗಾನದ ಮಾದರಿಯಲ್ಲಿಯೇ "ಇಂದ್ರಜಿತ ವಧೆ" ಎಂಬ ರೂಪಕವನ್ನು ಪ್ರಯೋಗ ಮಾಡಿರುವುದು ಅವರ ಅಭಿರುಚಿಯನ್ನು ವ್ಯಕ್ತಪಡಿಸುತ್ತದೆ.

೦೬-೧೦-೧೯೦೫ರಲ್ಲಿ ಬಂಗಾಲ ವಿಭಜನೆಯಾಯಿತು. ಬ್ರಿಟಿಷರ್ "Divide and rule policy" ಧೋರಣೆಯನ್ನು ಅನುಸರಿಸಿದರು. ಈ ಒಡೆದು ಆಳುವ ನೀತಿಯಿಂದ ಭಾರತೀಯರು ಕೆರಳಿದ್ದರು. 'ವಂಗಭಂಗ' ಘಟನೆಯು ಭಾಷಾ ಪ್ರಧಾನ ಚಳುವಳಿಗಳ ಹಿನ್ನಲೆಯಲ್ಲಿ ಬಹಳ ಮಹತ್ವದ್ದು.

'ವಂಗಭಂಗ' ಚಳುವಳಿಯ ಚಂಡಮಾರುತ ಭಾರತದ ಮೂಲೆ ಮೂಲೆಗೂ ಹರಡಿ ಎಲ್ಲ ಭಾರತೀಯರನ್ನು ಅಲುಗಾಡಿಸಿತು. ಪ್ರತಿಭಟನೆಗಳು ದೇಶಾದ್ಯಂತ ಎಲ್ಲೆಡೆಗೆ ವ್ಯಕ್ತವಾದವು. ಪುಣೆ ನಗರದಲ್ಲೂ ಹೋರಾಟಗಳು ಉಗ್ರಸ್ವರೂಪವನ್ನು ಪಡೆದುಕೊಂಡಿತು.

ಆಗ ಫರ್ಗೂಸನ್ ಕಾಲೇಜಿನಲ್ಲಿ ಓದುತ್ತಿದ್ದ ನಾರಾಯಣರಾಯರಿಗೆ ಸಹಜವಾಗಿ ರಾಷ್ಟ್ರಪ್ರೇಮ ಬೆಳೆಯಿತು. ಗೋಪಾಲಕೃಷ್ಣ ಗೋಖಲೆಯವರ ಭಾಷಣದ ಪ್ರಭಾವದಿಂದ ರಾಷ್ಟ್ರಾಭಿಮಾನ ಹೆಮ್ಮರವಾಯಿತು.

ತಾವು ಮಾತನಾಡುತ್ತಿದ್ದು ಭಾಷೆಗಳ ಮೂಲಕವೇ ದೇಶಾಭಿಮಾನವನ್ನು ಬೆಳೆಸಿಕೊಂಡು ಅಭಿವ್ಯಕ್ತಿಸುತ್ತಿದ್ದ ಚಾರಿತ್ರಿಕ ಘಟ್ಟ ಅದು. ಅಂತೆಯೇ ಪುಣೆಯಲ್ಲಿ ಮರಾಠಿ ನಾಟಕಗಳು ದೇಶಪ್ರೇಮವನ್ನು ಘಟ್ಟಿಗೊಳಿಸುವ ಕಾರ್ಯದಲ್ಲಿ ತೊಡಗಿದ್ದವು. ಈ ನಾಟಕಗಳ ಪ್ರೇರಣೆಯಿಂದ ನಾರಾಯಣರಾಯರಿಗೆ ಕನ್ನಡದಲ್ಲಿ ನಾಟಕಗಳನ್ನು ಬರೆದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನರನ್ನು ಆಕರ್ಷಿಸಲು ಮತ್ತು ಕನ್ನಡ ಭಾಷಾಭಿವೃದ್ಧಿಗಾಗಿ ತಾವು ಏನನ್ನಾದರು ಮಾಡಬೇಕು ಎಂಬ ಛಲ ಅಂಕುರಿಸಿತು.

**ಸಂಸಾರಿಕ ಜೀವನ :**

ನಾರಾಯಣರಾಯರು ಪುಣೆಯ ಕಾಲೇಜಿನಲ್ಲಿ ಕಲಿಯುತ್ತಿರುವಾಗ ಹಿರಿಯರು ಮದುವೆಯನ್ನು ನಿಶ್ಚಯಿಸಿದರು. ೧೯೦೫ ರಲ್ಲಿ ಹುಬ್ಬಳ್ಳಿಯ ಲಕ್ಷ್ಮಿಬಾಯಿಯವರ ಜೊತೆ ವಿವಾಹ ಮಾಡಿದರು. ಕೆಲ ದಿನಗಳ ನಂತರ ಅವರ ತಾಯಿಯ ಒತ್ತಾಯದ ಮೇರೆಗೆ ಕಡಕೋಳದ ಬಿಂದೂರಾವ್ ದೇಶಪಾಂಡೆಯವರ ಮಗಳು ತುಳಸಾಬಾಯಿ ಯನ್ನು ಮದುವೆಯಾದರು. ದಾಂಪತ್ಯದಿಂದ ಅವರಿಗೆ ಏಳುಗಂಡು ಮಕ್ಕಳು ಮೂರು ಹೆಣ್ಣು ಮಕ್ಕಳು ಹುಟ್ಟಿದರು. ಶ್ರೀಮತಿ ರಾಧಾ ಕುಲಕರ್ಣಿಯವರು ಹೇಳುವಂತೆ "ಮೊದಲ ಮಗು ವರ್ಷದಿದ್ದಾಗಲೇ ಅಕಾಲ ಮೃತ್ಯುವಿಗೆ ಈಡಾಯಿತು, ಈಗ ಗಂಡು ಮಕ್ಕಳು ಯಾರೂ ಉಳಿದಿಲ್ಲ, ಮೂವರು ಹೆಣ್ಣು ಮಕ್ಕಳಲ್ಲಿ ಒಬ್ಬರು ಮಾತ್ರ ಜೀವಿಸಿದ್ದಾರೆ.

ಹಿರಿಯ ಮಗ ವೆಂಕಟರಾವ್ ಗದುಗಿನ ವಿದ್ಯಾದಾನ ಸಮಿತಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿ ನಿವೃತ್ತರಾದರು, ಎರಡನೇಯ ಮಗ ಮಾಧವರಾವ್ ಹುಬ್ಬಳ್ಳಿಯಲ್ಲಿ ಪೋಲೀಸ್ ಇನ್ಸಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು, ೧೯೭೮ರಲ್ಲಿ ನಿಧನರಾದರು. ಮೂರನೆಯವರಾದ ಶ್ಯಾಮರಾವ್ ಧಾರವಾಡದಲ್ಲಿ ಸರಕಾರಿ ನೌಕರಿಯಲ್ಲಿದ್ದರು. ಕೊನೆಯವರು ಗೋವಿಂದರಾಯರು ಕೃಷಿ ಪದವಿ ಪಡೆದುಕೊಂಡು ಬಳ್ಳಾರಿಯಲ್ಲಿ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಇನ್ನು ನಾರಾಯಣರಾಯರ ಹಿರಿಯ ಮಗಳು ಸೋನುಬಾಯಿ ನಿಪ್ಪಾಣಿಯ ಕಾಗವಾಡೆ ಮನೆತನಕ್ಕೆ ಕೊಟ್ಟಿದ್ದರು. ಇವರಿಗಿಂತ ಚಿಕ್ಕವಳು ಸೀತಮ್ಮ ವಿಜಾಪುರದಲ್ಲಿದ್ದಾರೆ. ಸಧ್ಯ ಜೀವಿಸುವವರು ಇವರೊಬ್ಬರೇ, ಕೊನೆಯ ಮೂರು ಮಕ್ಕಳು ಚಿಕ್ಕವರಿದ್ದಾಗಲೇ ತೀರಿದರು.

ಸರಳ, ನಿರಾಡಂಬರ ವ್ಯಕ್ತಿಯಾಗಿದ್ದ ನಾರಾಯಣರಾಯರು ಶುಭ್ರ ಖಾದಿಧೋತರ, ಖಾದಿಶರ್ಟು, ಕೊರಳನ್ನು ಬಿಗಿಯಾಗಿ ಸುತ್ತಿಕೊಂಡಂತಿದ್ದ ತುಂಬು ತೋಳಿನ ಖಾದಿ ಜೋಧಪುರಿ ಕೋಟು, ತಲೆಗೆ ಅಂದವಾಗಿ ಸುತ್ತಿದ ಖಾದಿ

ರುಮಾಲು, ಹೆಗಲ ಮೇಲೊಂದು ಬಿಳಿಯ ವಸ್ತ್ರ, ಇವು ನಿತ್ಯ ಧರಿಸುತ್ತಿದ್ದ ವೇಷ ಭೂಷಣಗಳು.

ಎಲ್ಲರೂ ಇವರನ್ನು 'ನಾನಾ' ಎಂದೇ ಕರೆಯುತ್ತಿದ್ದರು. ಬಾಳ ಪಯಣದ ಮಧ್ಯಂತರದಲ್ಲಿ ಧರ್ಮಪತ್ನಿಯನ್ನು ಕಳೆದುಕೊಂಡರು. ಇದ್ದಕ್ಕಿದ್ದಂತೆ ನಾರಾಯಣರಾಯರ ಇಬ್ಬರು ಸಹೋದರರೂ ಕೂಡಾ ಸ್ವರ್ಗಸ್ಥರಾಗಿದ್ದರಿಂದ ಅವರ ಮಕ್ಕಳ ಪಾಲನೆ-ಪೋಷಣೆಯ ಸಂಪೂರ್ಣ ಹೊಣೆಗಾರಿಕೆ ಇವರದಾಗಿತ್ತು. ನಾನಾ ಮನೆಯವರಿಗೆಲ್ಲ ಪ್ರೀತಿ ಪಾತ್ರರು. ಎಲ್ಲರ ಬಗ್ಗೆಯೂ ಅವರಿಗೆ ಅಕ್ಕರೆ, ಸಹೃದಯತೆ, ಧಾರ್ಮಿಕತೆಯ ಒಲವನ್ನುಳ್ಳ ಅವರು ಸರಳ-ಸಾದಾ ಜೀವನ ಶೈಲಿಯನ್ನು ಅನುಸರಿಸಿದರು. ಕಷ್ಟ ಕಾರ್ಪಣ್ಯದ ಮಧ್ಯೆ ತಾವು ಏನನ್ನಾದರು ಬರೆಯಬೇಕು, ಓದಬೇಕು, ಹೊಸತನ್ನು ಮಾಡಬೇಕು ಎಂಬುದು ಸದಾಕಾಲವೂ ಅವರ ತವಕ-ಲವಲವಿಕೆಯಾಗಿತ್ತು. ತಮ್ಮ ಗುರಿಯಿಂದ ವಿಚಲಿತರಾಗದೇ ತಮ್ಮ ಆಶಾವಾದಿತ್ವವನ್ನು ಸಾಮಾಜಿಕ ಕಳಕಳಿಯನ್ನು ಕೊನೆವರೆಗೂ ಕಾಪಾಡಿಕೊಂಡರು.

ನಾರಾಯಣರಾಯರ ಮನೆ ಇರುವುದು ವೀರನಾರಾಯಣ ದೇವಾಲಯದ ಹತ್ತಿರ, ಇಂದಿಗೂ ಕೂಡಾ ಅವರ ವಂಶಜರನ್ನು ಕಾಣಬಹುದು. ಅವರು ಆ ಹಳೆ ಮಾದರಿಯ ಮಣ್ಣಿನ ಮನೆಯಲ್ಲೆ ವಾಸವಾಗಿದ್ದಾರೆ. ನಾನು ಮತ್ತು ನಮ್ಮ ತಂದೆ ಕುಟುಂಬದವರನ್ನು ಭೇಟಿ ಮಾಡಿದಾಗ ನಾರಾಯಣರಾಯರು ದಿನನಿತ್ಯ ನಮಸ್ಕರಿಸುತ್ತಿದ್ದ ಶ್ರೀ ವೀರನಾರಾಯಣನ ಕೈಯಿಂದ ಬಿಡಿಸಿದ ಭಾವ ಚಿತ್ರವನ್ನು ತೋರಿಸಿ ಇದೊಂದೆ ಸದ್ಯಕ್ಕೆ ನಮಗೆ ಉಳಿದಿರುವ ಅವಶೇಷ ಮಿಕ್ಕವೆಲ್ಲ ಹಲವರ ಕೈ ಸೇರಿದ್ದು ಮರಳಿ ಬಂದಿಲ್ಲ ಎಂದು ನೊಂದುಕೊಂಡರು. ಅವರು ಪ್ರತಿನಿತ್ಯ ಕುಳಿತುಕೊಳ್ಳುತ್ತಿದ್ದ ಚಿಕ್ಕದಾದ ಕೋಣೆಯ ಸ್ಥಳವನ್ನು ನೋಡಿದೆವು. ಆಗ ನನಗೆ ಕುಮಾರವ್ಯಾಸ ಹೇಗೆ ವೀರನಾರಾಯಣನ ದೇವಾಲಯದಲ್ಲಿಯ ಕಂಬಕ್ಕೆ ಕುಳಿತುಕೊಂಡು ಮಹಾನ್‌ಕಾವ್ಯವನ್ನು ರಚಿಸಿದನೋ ಹಾಗೆ ನಾರಾಯಣರಾಯರು ಕೂಡಾ ತಮ್ಮದೇ ಆದ ಚಿಕ್ಕ ಕೋಣೆಯ ಮೂಲೆಯಲ್ಲಿ ಕುಳಿತುಕೊಂಡು ನಾಡಗೀತೆಯನ್ನು ಬರೆದರೇನೋ ಎನ್ನಿಸಿತು.

ಮರಣ:

ನಾರಾಯಣರಾಯರು ೧೯೪೬ರಲ್ಲಿ ಎರಡನೇ ಹೆಂಡತಿಯನ್ನು ಕಳೆದುಕೊಂಡ ನಂತರ ವೃದ್ಧಾಪ್ಯವನ್ನು ಗದಗ, ಬಳ್ಳಾರಿ, ಹುಬ್ಬಳ್ಳಿಗಳಲ್ಲಿ ತಮ್ಮ ಗಂಡು ಮಕ್ಕಳ ಮನೆಯಲ್ಲಿ ಕಳೆದರು. ೧೯೭೧ ಜುಲೈ ೪ರಂದು ಸ್ವರ್ಗಸ್ಥರಾದರು. ಆಗ ಅವರಿಗೆ ಎಂಬತೊಂಬತ್ತು ವರ್ಷವಾಗಿತ್ತು. ಅಲ್ಲಿಯ ಜನರು ಕೃತಜ್ಞತಾ

ಪೂರ್ವಕವಾಗಿ ಗದುಗಿನ ಮಧ್ಯವರ್ತಿಸ್ಥಳಕ್ಕೆ 'ಹುಯಿಲುಗೋಳ ನಾರಾಯಣ ವೃತ್ತ' ಎಂದು ಹೆಸರಿಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಾರಾಯಣರ ಸುಂದರ ಶಿಲಾಮೂರ್ತಿಯೊಂದನ್ನು ಪೇಟೆಯ ಮಧ್ಯ ಸ್ಥಳದಲ್ಲಿ ನಗರಸಭೆಯವರು ನಿಲ್ಲಿಸಿದ್ದಾರೆ. ಅಷ್ಟೇ ಅಲ್ಲದೆ ಇತ್ತೀಚೆಗೆ ದಿ: ೧೯, ೨೦, ೨೧ ಫೆಬ್ರವರಿ ೨೦೨೦ ರಂದು ನಡೆದ ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದದ್ದು ಅವರು ಸ್ಥಾಪಿಸಿದ ವಿದ್ಯಾದಾನ ಸಮಿತಿಯ ಕಾಲೇಜಿನ ಆವರಣದಲ್ಲಿ ೩ ದಿನಗಳ ಕಾಲ ಅತ್ಯಂತ ಅದ್ದೂರಿಯಾಗಿ ನಡೆಯಿತು. ನಾಡಿನ ಸಾಹಿತಿಗಳು ಗಣ್ಯ ಮಾನ್ಯರು ಕಲಾವಿದರು ಸಾವಿರ, ಸಾವಿರ ಸಂಖ್ಯೆಯಲ್ಲಿ ಆಗಮಿಸಿದ್ದರು. ಅಷ್ಟೇ ಅಲ್ಲದೇ, ಸಮ್ಮೇಳನದ ಮುಖ್ಯ ವೇದಿಕೆಗೆ ಹುಯಿಲಗೋಳ ನಾರಾಯಣರಾಯರು ವೇದಿಕೆ ಎಂದು ಹೆಸರಿಟ್ಟಿದ್ದರು. ೭೬ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿಕೊಂಡು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡ ಗೀತೆ ಹಾಡನ್ನು ಹೇಳಿದಾಗ ನೆರೆದ ಸಭಿಕರೆಲ್ಲರೂ ನಾರಾಯಣರಾಯರು ಬಗ್ಗೆ ಅಭಿಮಾನ ಪಟ್ಟುಕೊಂಡರು.

■

# ಹುಯಿಲಗೋಳ ನಾರಾಯಣರ ಸಾಧನೆಗಳು

ಶಿಕ್ಷಣ ಕ್ಷೇತ್ರ :

ಹೂವು ತನ್ನೆದೆಯ ತೆರೆದಂತೆ ಅಂದ, ಸುಗಂಧ, ಮಕರಂದಗಳ ಸುಗ್ಗಿ, ಚಿಪ್ಪುಗಳು ತಮ್ಮೆದೆಯ ತೆರೆದಂತೆ ಮುತ್ತುಗಳು ಬರುವವು ಮುನ್ನುಗ್ಗಿ ಹನುಮಂತ ತನ್ನೆದೆಯ ತೆರೆದರೆ ಅಲ್ಲಿ ಕೋಟಿ ಕೋಟಿ ನಕ್ಷತ್ರ, ಹೀಗೆ ಎಲ್ಲರೆದೆಗಳಲ್ಲೂ ಒಂದೊಂದು ನಿಧಿ, ನಿಧಾನ ಅದನ್ನು ಬಗೆದು, ಮೊಗೆದು ವ್ಯಕ್ತಿತ್ವ ವಿಕಸನಕ್ಕೆ ಲೋಕದ ಉದ್ಧಾರಕ್ಕೆ ಅಣಿಗೊಳಿಸುವುದು ಶಿಕ್ಷಣ.

ಶಿಕ್ಷಣವು ನಮ್ಮೆಲ್ಲ ಬಂಧನಗಳನ್ನು ಕಿತ್ತೆಗೆದು ಪರಮಶಾಂತಿ, ಸುಖ, ಸೌಹಾರ್ದತೆಗಳನ್ನು ನೀಡುವ ಸಾಧನ, ಶಿಕ್ಷಣವು ನೀಡುವ ಸಂಪತ್ತೆಂದರೆ, ಆಂತರಿಕ ಬೆಳಕು, ಶಕ್ತಿಯೆಂದರೆ ಅದನ್ನು ಚೇತನ ತುಂಬಿದ ಶ್ರೇಷ್ಠತೆಯ ಪ್ರೀತಿ, ಸತ್ಯ ಸರ್ವತಾ ಅಭಿವ್ಯಕ್ತಿ ಎಂಬ ರವೀಂದ್ರನಾಥ ಠಾಗೋರರವರ ಮಾತು ಅರಿತುಕೊಂಡು ಶಿಕ್ಷಣಕ್ಕೆ ಉತ್ಕೃಷ್ಟವಾದ ಸ್ಥಾನವನ್ನು ಗದುಗಲ್ಲಿ ಕೊಟ್ಟಿದ್ದಾರೆ. ಕಲಿಸುವ ಕಲಿಯುವ ಮನಸ್ಸುಗಳು ಇಲ್ಲಿದೆ, ಶಿಕ್ಷಣ ಪಡೆದು ವಿಕಾಸದ ಹಾದಿಯಲ್ಲಿ ಸಾಗುತ್ತಿದ್ದರೆ. ಒಳ್ಳೆಯ ಶೈಕ್ಷಣಿಕ ವಾತಾವರಣವಿದೆ, ಕಾರಣ ಹಿಂದೆ ಅನೇಕ ಶಿಕ್ಷಣ ಪ್ರೇಮಿಗಳ ನಂತರ ಹೋರಾಟದಿಂದ ಸಂಸ್ಥೆಗಳು ಹುಟ್ಟಿಕೊಂಡವು.

ನಾರಾಯಣರಾಯರು ಮಹತ್ವದ ಸಾಧನೆಗಳಲ್ಲಿ ಒಂದಾದ ಗದುಗಿನ ವಿದ್ಯಾದಾನ ಸಮಿತಿಯ ಪ್ರೌಢಶಾಲೆಯೂ ಒಂದು. ನಮ್ಮ ನಾಟ್ಯ ವಿಲಾಸಿ ಮಿತ್ರರ ಸಹಾಯದಿಂದ ಅನೇಕ ನಾಟಕ ಪ್ರಯೋಗಗಳನ್ನು ಮಾಡಿ ಅದರಿಂದ ಬಂದ ಹಣದಿಂದ ಶಿಕ್ಷಣ ಮತ್ತು ಸಮಾಜ ಸುಧಾರಣೆಗಾಗಿ ವಿನಯೋಗಿಸಬೇಕೆಂದು ನಾರಾಯಣರಾಯರ ಬಯಕೆಯಾಗಿತ್ತು. ಅವರ ನಾಟ್ಯ ವಿಲಾಸಿ ಮಿತ್ರರು ಇವರ ವಿಚಾರವನ್ನು ಒಪ್ಪಿಕೊಂಡರು. ಅವರು ಸ್ಥಾಪಿಸಿದ ಯಂಗ್ ಮೆನ್ಸ ಫುಟ್‌ಬಾಲ್ ಕ್ಲಬ್‌ನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಅದು ಬೆಳೆಯಲು ಕಾರಣರಾದರು.

ಹಿಂದೆ ಇದ್ದ ಮಹಾಲಕ್ಷ್ಮೀ ನಾಟಕ ಮಂದಿರವು ರಾವ್ ಸಾಹೇಬ ಈಶ್ವರಪ್ಪ ಬುಳ್ಳಾ ಅವರ ಒಡೆತನದಲ್ಲಿತ್ತು. ಆ ಮಹಾಲಕ್ಷ್ಮೀ ನಾಟಕ ಮಂದಿರದಲ್ಲಿ ತಮ್ಮ ಕ್ಲಬ್ಬಿನ ವಾರ್ಷಿಕೋತ್ಸವ ಹಾಗೂ ತಮ್ಮ ನಾಟಕವನ್ನು ಪ್ರದರ್ಶನ ಮಾಡಲು ಫುಟ್‌ಬಾಲ್ ಕ್ಲಬ್‌ನ ಸದಸ್ಯರೆಲ್ಲ ಹೋಗಿ ವಿನಂತಿಸಿಕೊಂಡರು. ಅಲ್ಲಿ ಗಂಧರ್ವ ಕಂಪನಿಯವರು ತಾವು ಈ ಮಂದಿರವನ್ನು ಭಾಡಿಗೆಗೆ ತೆಗೆದುಕೊಂಡಿದ್ದೇವೆ, ಈಗಾಗಲೇ ರಂಗ ಸಜ್ಜಿಕೆ ತಯಾರಿಸಿದ್ದೇವೆ. ಎಂದು ಹೇಳಿ ಇವರಿಗೆ ಕೊಡಲು ಒಪ್ಪಿಕೊಳ್ಳಲಿಲ್ಲ. ಆಗ ನಾರಾಯಣರಾಯರು ಹಾಗೂ ಎಲ್ಲ ಸದಸ್ಯರು ಗಂಧರ್ವ ಕಂಪನಿಯವರು ನಮಗೆ ಕೊಡುವುದಿಲ್ಲವೆಂದು ಹೇಳಿದಾಗ ಕೋಪಗೊಂಡ ಬುಳ್ಳಾರವರು ಅವರ ಕರಾರನ್ನೇ ರದ್ದುಗೊಳಿಸುವುದಾಗಿ ಹೇಳಿದಾಗ ಗಂಧರ್ವ ಕಂಪನಿಯವರು ಇವರಿಗೆ ಅನಿವಾರ್ಯವಾಗಿ ಬಿಟ್ಟುಕೊಡಬೇಕಾಯಿತು. ತಮ್ಮ ವಾರ್ಷಿಕೋತ್ಸವವನ್ನು ಅಲ್ಲಿಯೇ ಅದ್ದೂರಿಯಿಂದ ಆಚರಿಸಿಕೊಂಡರು. ದಿ ಯಂಗ್ ಮೆನ್ಸ್ ಫುಟ್ ಬಾಲ್ ಕ್ಲಬ್ ನ ಆಟಗಾರರನ್ನೇ ವೇಷಗಾರರನ್ನಾಗಿ ಮಾಡಿ ಅವರಿಂದ ನಾಟಕ ಮಾಡಿಸಿ ಹಣವನ್ನು ಪಡೆಯುತ್ತಿದ್ದರು. ಆ ಪಡೆದ ದುಡ್ಡನ್ನು ವಿದ್ಯಾದಾನ ಸಮಿತಿಯ ಹೈಸ್ಕೂಲಗಾಗಿ ಉಪಯೋಗಿಸಿದ್ದು ಅವರ ಮಹತ್ತರ ಸಾಧನೆಗಳಲ್ಲಿ ಒಂದು, ಸಮಾಜದಿಂದ ಬಂದ ಹಣ ಸಮಾಜ ಸೇವೆಗೆ ಮುಡಿಪಾಗಿರಲಿ ಎಂಬ ನಾರಾಯಣರಾಯರ ಧೋರಣೆಗೆ ಒಂದು ಪ್ರತ್ಯಕ್ಷ ಉದಾಹರಣೆಯೇ ಈ ಪ್ರೌಢಶಾಲೆ.

ನಾರಾಯಣರಾಯರು ವಕೀಲಿ ವೃತ್ತಿಯಲ್ಲಿದ್ದಾಗ ಗದುಗಿನಲ್ಲಿ ನಡೆಯುತ್ತಿದ್ದ ಸಾಮಾಜಿಕ ಚಟುವಟಿಕೆಗಳಿಗೆ ಆಶ್ರಯದಾತರಾಗಿದ್ದು, ವಸಂತೋತ್ಸವ, ನಾಡಹಬ್ಬ, ಪುಸ್ತಕ ಬಿಡುಗಡೆ, ಕಾವ್ಯವಾಚನ, ಸಾಹಿತ್ಯ ಸಮ್ಮೇಳನ, ಮೊದಲಾದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಫೂರ್ತಿ ನೀಡುತ್ತಿದ್ದರು. ಅಷ್ಟೇ ಅಲ್ಲದೆ ತನು-ಮನ-ಧನ ದಿಂದ ತಮ್ಮ ಕೈಲಾದ ಮಟ್ಟಿಗೆ ಗದುಗಿನಲ್ಲಿಯ ಯಾವುದೇ ಕಾರ್ಯಕ್ರಮಗಳಿಗೆ ಸಹಾಯವನ್ನು ಸಲ್ಲಿಸುತ್ತಿದ್ದರು.

**ಧಾರ್ಮಿಕ ಕ್ಷೇತ್ರ :**

ಶರಣರ ಶಿವಯೋಗಿಗಳ ಪಾದಸ್ಪರ್ಶದಿಂದ ಪುಳಕಿತವಾದ ನೆಲ ಗದಗ. ಗದಗಿನಲ್ಲಿ ಅನೇಕ ದೇವಸ್ಥಾನಗಳಿವೆ. ಇವುಗಳಲ್ಲಿ ತ್ರಿಕುಟೇಶ್ವರ ದೇವಸ್ಥಾನ ಒಂದು. ಇಲ್ಲಿ ೩ ಲಿಂಗಗಳಿರುವುದರಿಂದ ಇದಕ್ಕೆ ಈ ಹೆಸರು. ಇದರ ಆವರಣದಲ್ಲಿಯೇ ಒಂದು ದೇವಸ್ಥಾನವಿದೆ. ಅದು ಸರಸ್ವತಿಯದು ೧೨ನೇ ಶತಮಾನದಲ್ಲಿ ಕಟ್ಟಿರಬಹುದಾದ ವೀರನಾರಾಯಣ ದೇವಸ್ಥಾನ ಅತ್ಯಂತ ಪ್ರಸಿದ್ಧವಾದದ್ದು. ವಿಜಯನಗರದ ದೇವಸ್ಥಾನದಂತೆ ಗೋಪುರ ಎತ್ತರವಾಗಿದೆ.

ಇಂದಿಗೂ ಸಭಾ ಮಂಟಪದಲ್ಲಿರುವ ಕಂಬವೊಂದು ಪ್ರೇಕ್ಷಕರಿಗೆ ಸಾರಿ ಹೇಳುತ್ತದೆ.

ಈ ಎರಡು ದೇವಾಲಯಗಳ ಟ್ರಸ್ಟ ಕಮೀಟಿಯ ಸದಸ್ಯರಾಗಿ ಸುಮಾರು ೨೦ವರ್ಷ ಸೇವೆ ಸಲ್ಲಿಸಿದ ನಾರಾಯಣರಾಯರು, ಇವರ ಆಳ್ವಿಕೆಯಲ್ಲಿದ್ದ ಸಮಯದಲ್ಲಿ ವೆಂಕಟೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ್ದನ್ನು ಇಲ್ಲಿ ಉದಾಹರಿಸಬಹುದು. ಹೊಯ್ಸಳ ವಿಷ್ಣುವರ್ಧನನು ಕಟ್ಟಿಸಿದ ೫ ವಿಷ್ಣು ದೇವಾಲಯಗಳಲ್ಲಿ ಇದು ಕೂಡಾ ಒಂದು ಎಂದು ಪ್ರತೀತಿ. ಕುಮಾರವ್ಯಾಸ ಕವಿ ಈ ದೇವಸ್ಥಾನದಲ್ಲಿ ಕುಳಿತು ವೀರನಾರಾಯಣನಿಂದ ಸ್ಫೂರ್ತಿ ಪಡೆದು ಗದುಗಿನ ಭಾರತವನ್ನು ರಚಿಸಿದನೆಂದು ಪ್ರತೀತಿ ಇಲ್ಲಿಯ ಜುಮ್ಮಾ ಮಸೀದಿಗೆ ಉತ್ಪನ್ನ ಬರುವಂತೆ ಮಾಡಿದ್ದನ್ನು ಈಗಲೂ ಮುಸ್ಲೀಮರು ಸ್ಮರಿಸುತ್ತಾರೆ

ಗದುಗಿನ ಹಾದಿಯಲಿ
ಹೂವುಗಳೆ ತುಂಬಿರಲಿ
ಮಾನವತೆ ಮರೆಯಲಿ.

■

# ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಕಾರ ಸೇವೆ

ನಾರಾಯಣರಾಯರು ಪುಣೆಯಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದ ಕಾಲಭಾರತದ ಇತಿಹಾಸದಲ್ಲಿ ಕ್ರಾಂತಿಯ ಕಾಲ. ದೇಶದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗುತ್ತಿತ್ತು. ಪುಣೆಯಂತೂ ರಾಷ್ಟ್ರೀಯ ಜಾಗೃತಿಯ ಕುಲುಮೆಯೆ ಆಗಿತ್ತು. ಲೋಕಮಾನ್ಯ ತಿಲಕ, ವೀರ ಸಾವರಕರ, ಗೋಪಾಲಕೃಷ್ಣ ಗೋಖಲೆ, ರಾನಡೆ ಮುಂತಾದ ಸಾತಂತ್ರ್ಯ ವೀರರು ಜನಸಾಮಾನ್ಯರಲ್ಲಿ ರಾಷ್ಟ್ರೀಯ ಪ್ರೇಮದ ಕಿಚ್ಚು ಹಚ್ಚಿ ಜಾಗೃತಿಸುತ್ತಿದ್ದ ಉದ್ರಿಕ್ತ ಕಾಲ .೧೯೦೫ರಲ್ಲಿ ಬಂಗಾಲದ ವಿಭಜನೆಯಾಯಿತು. ಸಾಮ್ರಾಜ್ಯವಾದಿಗಳ "Divide and rule" " ಧೋರಣೆಯಿಂದ ಅವರ ಭೇದೋಪಾಯ ತಿಳಿಯದ ಭಾರತೀಯರು ಕೆರಳಿದ್ದರು. ವಂಗಭಂಗ ಚಳವಳಿಯ ಚಂಡಮಾರುತ ಭಾರತದ ತರುಣರು ಕೆರಳಿ ಕೆಂಡವಾಗಿದ್ದರು. ನಾರಾಯಣರಾಯರಂತ ದೇಶಪ್ರೇಮಿ, ಸಂವೇದನಾಶೀಲ, ರಾಷ್ಟಾಭಿಮಾನಿ ತರುಣರಿಗೆ ಇದರ ಶಾಪ ತಟ್ಟದಿರಲಿಲ್ಲಿ

ನಾರಾಯಣರಾಯರಿಗೆ ಪುಣೆಯಲ್ಲಿ ಫರ್ಗ್ಯೂಸನ್ ಕಾಲೇಜಿನಲ್ಲಿದ್ದಾಗ ಅದೇ ಕಾಲೇಜಿನಲ್ಲಿ ಓದುತ್ತಿದ್ದ ವೀರಸಾವರಕರ ಹಾಗೂ ರಾನಡೆಯವರ ಸಂಪರ್ಕ ಬಂದಿತು. ಗೋಪಾಲಕೃಷ್ಣ ಗೋಖಲೆಯವರ ಭಾಷಣ ಕೇಳುವ ಸುಯೋಗ ದೊರಲಿತಲ್ಲದೆ ಅವರನ್ನೂ ಭೇಟಿಯಾಗುವ ಸಂದರ್ಭ ಒದಗಿತು. ಮುಂದೆ ೧೯೦೯ರಲ್ಲಿ ಕಾಯಿದೆ ಅಭ್ಯಾಸ ಮಾಡಲು ಮುಂಬೈಗೆ ಹೋದಾಗ ಲೋಕಮಾನ್ಯ ಬಾಲಗಂಗಾಧರ ತಿಲಕರ ಸಂಪರ್ಕದ ಸಹವಾಸವೂ ಅವರಿಗೆ ದೊರೆಯಿತು. ಇನ್ನುಳಿದ ಅನೇಕ ರಾಷ್ಟ್ರನಾಯಕರನ್ನು ಕಾಣುವುದರ ಮೂಲಕ ಅವರು ತಮ್ಮಲ್ಲಿ ರಾಷ್ಟ್ರಾಭಿಮಾನವನ್ನು ಉಜ್ವಲವಾಗಿ ಬೆಳೆಸಿಕೊಂಡರು. ಅಪ್ಪಟ ನಿರಾಡಂಬರ ದೇಶಭಕ್ತರಾಗಿರಲು ಸಂಕಲ್ಪ ಮಾಡಿದರು.

ನಾರಾಯಣರಾಯರು ಕಾಂಗ್ರೆಸ್ಸಿನ ಸಾಮಾನ್ಯ ಸದಸ್ಯರಾಗಿ ನಿಷ್ಠೆಯ ಅನುಯಾಯಿಗಳಾಗಿ ಕಾಂಗ್ರೆಸ್ಸು ಅಧಿವೇಶನ ಕಂಡಿದ್ದಾರೆ. ತನ್ಮೂಲಕ ಭಾರತದಲ್ಲೆಲ್ಲ ಸುತ್ತಿದ್ದಾರೆ. ಲಖನೌ, ಕಲಕತ್ತಾ, ಕಾಕಿನಾಡಾ, ಬೆಳಗಾವಿ ಮುಂತಾದ ಕಾಂಗ್ರೆಸ್ಸು ಅಧಿವೇಶನಗಳಿಗೆ ಹೋಗಿ ಬಂದಿದ್ದಾರೆ. ಅವರು ಲಖನೌ ಕಾಂಗ್ರೆಸ್ ಅಧಿವೇಶನಕ್ಕೆ

ಹೋದಾಗ ಗಾಂಧೀಜಿ ಮಾಡಿದ ಭಾಷಣ ಕುರಿತು ತಮ್ಮ ಅನುಭವವನ್ನು ಸ್ವಾರಸ್ಯವಾಗಿ ಹೇಳುತ್ತಿದ್ದುದು ಹೀಗೆ "ಲಖನೌ ಕಾಂಗ್ರೆಸ್ಸಿಗೆ ಹೋದೆ. ಅಲ್ಲಿ ದೊಡ್ಡ ದೊಡ್ಡ ಜನರು ಬಂದಿದ್ದರು. ಅದೇ ಆಗ ಗಾಂಧೀ ಆಫ್ರಿಕಾದಿಂದ ಭಾರತಕ್ಕೆ ಬಂದಿದ್ದರು. ಸ್ಟೇಜ್ ಮೇಲೆ ಅವರೂ ಇದ್ದರು ಎಲ್ಲರೂ ಇಂಗ್ಲೀಷದಾಗ ಮಾತನಾಡಿದರ. ಅವರು ಒಮ್ಮೆಲೆ ಹಿಂದಿಯಲ್ಲಿ ಭಾಷಣ ಆರಂಭ ಮಾಡಿದರು. ಹಿಂದಿ ನಮ್ಮ ಭಾಷೆ" ಅಂದರು. ಅವರ ಭಾಷಣ ನನ್ನ ಮೇಲೆ ಬಹಳ ಪರಿಣಾಮ ಮಾಡಿತು. ಅವರು ಆಗ ಖಾದಿ ಬಗ್ಗೆಯೂ ಹೇಳಿದರು. ಅದರಿಂದ ನಾನೂ ಅಂದಿನಿಂದಲೇ ಖಾದಿಉಡಲಿಕ್ಕೆ ಆರಂಭ ಮಾಡಿದೆ. ನನ್ನ ಧೋತರ ಒಂದೇ ಖಾದಿ ಅಲ್ಲಾ .. ಉಳೀದದ್ದು ಎಲ್ಲಾ ಖಾದಿ ......" ಎಂದು ಮುಂದೆ ಅವರ ಧೋತರವೂ ಖಾದಿ ಇರುತ್ತಿತ್ತು. ಲಖನೌ ಕಾಂಗ್ರೆಸ್ ನಾರಾಯಣರಿಗೆ ರಾಷ್ಟ್ರಾಭಿಮಾನದ ದೀಕ್ಷೆ ಕೊಟ್ಟಿತೆಂದೇ ಹೇಳಬಹುದು.

ಶ್ರೀ ವಿವೇಕಾನಂದರ ಸ್ಫೂರ್ತಿಯ ಗಾಳಿಯಿಂದ ದೇಶಾಭಿಮಾನದ ಬಿರುಗಾಳಿ ಭಾರತದ ಮೂಲೆ ಮೂಲೆಯಲ್ಲಿ ತಲುಪಿದಾಗ ಭಾರತದ ಮುಖ್ಯ ಮುಖ್ಯ ನಗರಗಳಲ್ಲಿ ಪ್ರಾರಂಭವಾದ ಫುಟ್‌ಬಾಲ್ ಕ್ಲಬ್ಬುಗಳು, ಬ್ರಿಟೀಷರನ್ನೂ ಅವರ ಆಟದಲ್ಲಿಯೇ ಸೋಲಿಸಬೇಕೆಂ ದೇಶಾಭಿಮಾನದಿಂದಲೇ ಹುಟ್ಟಿಕೊಂಡವು. ಅದೇ ಗಾಳಿಯು ಇವರಿಗೂ ಸೋಂಕಿ ಗದುಗಿನಲ್ಲಿ "ಯಂಗ್ ಮೆನ್ಸ ಫುಟ್‌ಬಾಲ್ ಕ್ಲಬ್‌ನ ಸ್ಥಾಪನೆ ಮಾಡಿದರು.

ನಾರಾಯಣರಾಯರು ಬಹುಶಃ "ನರಮ್" ದಳದ ಸೇನಾನಿ. ಸ್ವಾತಂತ್ರ್ಯ ಚಳುವಳಿಯಲ್ಲಿ ಮುನ್ನುಗ್ಗಿ ಚಟುವಟಿಕೆ ಮಾಡದಿದ್ದರೂ ಚಳುವಳಿಯಲ್ಲಿ ಜೇಲಿಗೆ ಹೋದವರ ಬೆಂಗಾವಲಾಗಿದ್ದರು. ಇವರ ಸಂಸ್ಕಾರ ಮನೆಯಲ್ಲಿಯ ಚಿಕ್ಕವರಿಗೆ ಆಗದಿರಲಿಲ್ಲ. ನಮ್ಮ ತಾಯಿ, ಚಿಕ್ಕಮ್ಮ, ಸೋದರಮಾವ ಇವರೆಲ್ಲ ಚಳುವಳಿಯಲ್ಲಿ ಸಕ್ರೀಯ ಭಾಗವಹಿಸಿದ್ದಾರೆ. ನಮ್ಮ ತಾಯಿ ಆ ದಿನಗಳನ್ನು ನೆನೆದಾಗೆಲ್ಲ ಆ ಅನುಭವಗಳನ್ನು ರೋಮಾಂಚನವಾಗುವಂತೆ ಹೇಳುತ್ತಿದ್ದರು. ಸರಾಯಿ ಅಂಗಡಿಗಳ ಎದುರಿಗೆ ಪಿಕೆಟಿಂಗ್ ಮಾಡಲು ಅಮ್ಮ ಹಾಗೂ ಚಿಕ್ಕಮ್ಮ ( ಕುಸುಮಾ ಹುಯಿಲಗೋಳ) ಹಾಗೂ ಕಕ್ಕಿ (ವತ್ಸಲಾ ಪಾಗೆ) ಇಬ್ಬರೂ ಒಂದು ಚಳುವಳಿ ಕ್ಯಾಂಪಿನ ಪತ್ರಗಳನ್ನು ಇನ್ನೊಂದು ಕ್ಯಾಂಪಿಗೆ ರಹಸ್ಯವಾಗಿ ಮುಟ್ಟಿಸಲು ಚಪಾತಿ ರೊಟ್ಟಿಗಳ ನಡುವೆ ಪತ್ರಗಳನ್ನು ಬಚ್ಚಿಟ್ಟುಕೊಂಡು ಮುಚ್ಚಿಟ್ಟುಕೊಂಡು ಮುಟ್ಟಿಸುತ್ತಿದ್ದರಂತೆ. ನಾವು ಚಿಕ್ಕವರಿದ್ದಾಗ ನೋಡಿದ್ದೇವೆ. ನಮ್ಮ ಅಮ್ಮ ಮದುವೆಯಾದರೂ ಈ ಚಟುವಟಿಕೆಗಳನ್ನು ತೊರೆದಿರಲಿಲ್ಲ. ನಮ್ಮ ಮನೆಯಲ್ಲೇ ಔಟ್ ಹೌಸಿನಲ್ಲಿ ಕಾಂಗ್ರೆಸ್ ಶಿಬಿರದವರು ಮದ್ದು, ಗುಂಡುಗಳನ್ನು ಶೇಖರಿಸಿ

ಇಟ್ಟಿದ್ದರು. ನಮ್ಮ ಮನೆಯ ಅರ್ಧ ಭಾಗ ಹಾಗೂ ಪಕ್ಕ ಗರೂಡ(ಕಕ್ಕಿಯ ತವರುಮನೆ) ಅವರ ಮನೆಯಲ್ಲೂ ಕಾಂಗ್ರೆಸ್ಸಿನ ಎರಡು ನೂರ ಜನ ಭೂಗತರಾಗಿ ಕೆಲಸ ಮಾಡುವರಿಗೆ ಮನೆ ಕೊಟ್ಟಿದ್ದರು. ಗಾಂಧಿ ಭಜನೆ, ರಾಟೆಯಿಂದ ನೂಲು ತೆಗೆಯುವುದು ಇವೆಲ್ಲ ಪ್ರತಿದಿನ ನಮ್ಮ ಮನೆ ಜನ ಮಾಡುತ್ತಿದ್ದು. ನಮ್ಮ ತಾಯಿ ಅವರೆಲ್ಲ ನಾರಾಯಣ ದೇವರ ದೇವಸ್ಥಾನದಲ್ಲಿ ರಾಟೆಯಿಂದ ನೂಲು ಹೆಣೆಯಲು ಕಲಿಸುವ ಕ್ಲಾಸು ನಡೆಸುತ್ತಿದ್ದರಂತೆ. ಒಳ್ಳೆ ನೂಲು ತೆಗೆದವರಿಗೆ ಬಳೆ, ರಿಬ್ಬನ್ನು ಬಹುಮಾನವಾಗಿ ಕೊಡುತ್ತಿದ್ದರಂತೆ. 'ನಾನಾ' ಇದನ್ನೆಲ್ಲಾ ನೋಡಲು ಬರುತ್ತಿದ್ದರಂತೆ. ಮುಂದೆ ನಮ್ಮ ಚಿಕ್ಕಮ್ಮ ಹಾಗೂ ಕಕ್ಕಿಗೆ ಸ್ವಾತಂತ್ರ್ಯ ಹೋರಾಟಗಾರರೆಂದು ಸರ್ಟಿಫಿಕೇಟು ಹಾಗೂ ತಿಂಗಳಿಗೆ ಭತ್ತೆ ಕೊಡುತ್ತಿದ್ದರು. ನಮ್ಮ ತಾಯಿಗೆ ಬಂದದ್ದನ್ನು ನಮ್ಮ ಅಣ್ಣ (ಮೋಹನ-ಹೆಸರಿಗೆ ತಕ್ಕಂತೆ ಗಾಂಧೀಜಿ) ನಿರಾಕರಿಸಿದನಂತೆ. 'ರಾಷ್ಟ್ರ ಸೇವೆಗೆ ಬೆಲೆ ಕಟ್ಟುವುದು ಬೇಡ' ಎನ್ನುವುದೇ ಅವನ ಮತ.

**ನಾಟಕಗಳಲ್ಲಿ ರಾಷ್ಟ್ರ ಪ್ರೇಮ :**

ನಾರಾಯಣರು ೧೯೧೦ರಲ್ಲಿ ಬರೆದ "ವಜ್ರಮುಕುಟ" ನಾಟಕದಲ್ಲಿ ಸೂಚ್ಯವಾಗಿ ಬ್ರಿಟಿಷ ಬಾದಶಾಹಿ ಆಡಳಿತದ ಬಗ್ಗೆ ಧ್ವನ್ಯರ್ಥವೂ ಅಡಕವಾಗಿತ್ತು. ಮುಂದೆ ೧೯೧೯ರಲ್ಲಿ ಬರೆದ "ಶಿಕ್ಷಣ ಸಂಭ್ರಮ" ನಾಟಕದಲ್ಲಿ ವ್ಯಕ್ತಿ ಶಿಕ್ಷಣಕ್ಕೆ ಆದ್ಯತೆ ಕೊಟ್ಟಂತೆ ಕೈನೂಲು, ಖಾದಿ ಬಟ್ಟೆಯ ಬಳಕೆ ಮುಂತಾದವನ್ನು ಪ್ರೋತ್ಸಾಹಿಸಿ ಸ್ವದೇಶೀ ಚಳುವಳಿಯ ಪೋಷಣೆ, ಪ್ರಚಾರ ಮಾಡಿದ್ದಾರೆ. "ಸ್ತ್ರೀ ಧರ್ಮ ರಹಸ್ಯ", "ಶಿಕ್ಷಣ ಸಂಭ್ರಮ" ಹಾಗೂ "ಪತಿತೋದ್ಧಾರ"ದಲ್ಲಿ ಬ್ರಿಟಿಷರನ್ನು ಅವರ ಆಳ್ವಿಕೆಯನ್ನು ಖಂಡಿಸಿ ಅನೇಕ ಸಂಭಾಷಣೆಗಳಿವೆ. ಇವನ್ನು ನೋಡಿದಾಗ ನಾಟಕಗಳ ಮೂಲಕ ನಾರಾಯಣರಾಯರು ಜನರಲ್ಲಿ ರಾಷ್ಟ್ರೀಯ ಜಾಗೃತಿ ತರುವ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನರನ್ನು ಆಕರ್ಷಿಸುವ ಕೆಲಸವನ್ನು ಪ್ರಭಾವಿತವಾಗಿ ಮಾಡಿದ್ದಾರೆ ಎನ್ನಬಹುದು. ಅಂಥ ಸಂದಿಗ್ಧ ವಾತವರಣದಲ್ಲೂ ಬ್ರಿಟಿಷರ ವಿರುದ್ಧದ ಅವರ ಹೇಳಿಕೆಗಳು ಅವರ ಸ್ಥೈರ್ಯವನ್ನೂ, ರಾಷ್ಟ್ರಭಿಮಾನವನ್ನೂ ಒತ್ತಿ ಹೇಳುತ್ತವೆ.

ಕರ್ನಾಟಕದ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಜೊತೆಗೂ ಅವರ ಸಂಪರ್ಕವಿತ್ತು. ಕರಮಕರ, ದಿವಾಕರ, ಹರ್ಡಿಕರ, ಗರೂಡಸದಾಶಿವರಾಯರು, ಕೃಷ್ಣಾಚಾರಪೂಜಾರ, ಅನಂತರಾವ್ ಜಾಲಿಹಾಳ್, ವಾಸುದೇವರಾವ್‌ಉಮಚಗಿ, ಆನಂದರಾವ ಉಮಚಗಿ ಮುಂತಾದವರು ನಾರಾಯಣರಾಯರ ನಿಕಟ ಸಂಬಂಧದಲ್ಲಿದ್ದವರು.

**ಕಾವ್ಯಗಳಲ್ಲಿ ಸ್ವದೇಶಾಭಿಮಾನ:**

ನಾರಾಯಣರ ರಾಷ್ಟ್ರಾಭಿಮಾನ, ಕಾಂಗ್ರೆಸ್ ತತ್ವಗಳಲ್ಲಿ ವಿಶ್ವಾಸ, ಗಾಂಧೀವಾದದಲ್ಲಿ ಅಚಲ ನಂಬಿಕೆ ಇವು ಅವರ ಕಾವ್ಯಗಳಲ್ಲಿ ಅಭಿವ್ಯಕ್ತವಾಗಿವೆ. ಇವುಗಳ ಕೆಲ ಉದಾಹರಣೆಗಳು ಈ ಕೆಳಗಿನಂತಿವೆ.

೧. "ಭಾರತ ಭೂವನ" (ನಾಡತೋಟ) ದಲ್ಲಿ ಬ್ರಿಟಿಷರು ವ್ಯಾಪಾರಕ್ಕೆಂದು ಬಂದು ಭಾರತ ಮಾತೆಯ ಸಂಪತ್ತನ್ನು ಸೂರೆಗೈಯ್ದ ಕಥೆ ಇದೆ. ಹಿತಚಿಂತಕರ ಸೋಗು ಹಾಕಿದ್ದ ಬ್ರಿಟಿಷರು ಭಾರತೀಯರ ಜಾಗೃತಿ ಕಂಡು ಬೆರಗಾಗುತ್ತಾರೆ.

*"ಶ್ರೀವರನ ಕೃಪೆಯಿಂದ ಭಾರತ*
*ಭೂವನವು ತಾಂ ಬೆಳೆದು ಬಂದಿದೆ*
*ತೀವಿದಾ ಸುಗ್ಗಿಗಳ ಫಲಗಳ ಭರದ ಬಲದಿಂದ*
*ಅವು ಕಾಳ್ಗಳು ಚಿನ್ನ ರನ್ನವ*
*ಸೇವಿಸುತೆ ಘನ ಹಿಂದು ರಾಷ್ಟ್ರದ*
*ದೇವಿ ಮುದದೊಳು ಮೆರೆಯುತ್ತಿದ್ದಳು ಬಹಳ ಸೊಬಗಿನಲಿ॥"*

ಬಟ್ಟೆಯ ವ್ಯಾಪಾರಕ್ಕೆಂದು ಬಂದ ಪರದೇಶಿಯರು ಭಾರತದ ಸಂಪತ್ತನ್ನು ಕಂಡನು. ಅವನ ಬಾಯಲ್ಲಿ ನೀರೂರಿತು. ಭಾರತ ಮಾತೆಯನ್ನು "ಸವಿ ಸವಿ ಮಾತಿನಂತಕ್ಕಿಸಲಿಲ್ಲ ನುಡಿದನು ಬಹಳ ಕರುಣೆಯನಾಂತವನ ತೆರದಿ", "ನೀನೇಕೆ ಕಷ್ಟಪಟ್ಟು ಕೆಲಸ ಮಾಡುವೆ ನಾನು ನಿನ್ನ ಕುಳನಾಗಿ ಕಷ್ಟಪಟ್ಟು ದುಡಿದು ನೀನು ಕೊಟ್ಟಷ್ಟನ್ನು ತೆಗೆದುಕೊಂಡು ಎಲ್ಲಾ ಸಂಪತ್ತನ್ನು ತಂದು ನಿನಗೊಪ್ಪಿಸುವೆನೆಂದ ಮಾತಿಗೆ ಅವಳು ಮರುಳಾದಳು. ಅಲ್ಲದೆ ತಂದೆ ಥಳಥಳಿಸುವ ವಸ್ತುಗಳ ಆಸೆಯನ್ನೂ ತೋರಿಸುವವನು. ಅವನ ಮೋಸಕ್ಕೆ ಬಲಿಯಾಗಿ ಬಳಲಿ ಅನಂತರ ಜಾಗೃತಳಾಗಿ(ದೇಶದ ಜನರೆಲ್ಲ ಒಂದಾಗಿ) ಪರದೇಶಿಯನ್ನು ಹೊರಗೆ ತಳ್ಳುವಳು ಹಾಗೂ ಸ್ವಾತಂತ್ರ್ಯ ಪಡೆಯುವಳು"

೨. "ಆಗುಂಬೆಯ ಸೂರ್ಯಾಸ್ತ" ಇಲ್ಲಿ ಕಾಂಗ್ರೆಸ ತತ್ವಗಳಲ್ಲಿ ನಿಷ್ಠೆಯಿಂದ ಕವಿ ನಿಸರ್ಗದ ದೃಶ್ಯಗಳ ಹೋಲಿಕೆಗಾಗಿ ಬಳಸಿದ ವಸ್ತುಗಳು ರಾಟಿ, ಹಿಂಜಿದರಳೆಯ ರಾಶಿ, ಗಂಜಿ ಹಾಕಿದ ಬಿಳಿ ಖಾದಿ ಬಟ್ಟೆ, ಇಲ್ಲಿ ವ್ಯಕ್ತವಾದ ಗಾಂಧೀ ತತ್ವಗಳ ಪ್ರಭಾವ, ರಾಷ್ಟ್ರಾಭಿಮಾನ ಕವಿಯ ಮನೋವೃತ್ತಿಯನ್ನು ನಿಚ್ಚಳವಾಗಿ ತೋರುತ್ತವೆ. ಸೂರ್ಯಾಸ್ತದ ನಿಸರ್ಗದ ದೃಶ್ಯದಲ್ಲಿ ರಾಷ್ಟ್ರೀಯ ಧ್ವಜವನ್ನು ಕಾಣುವುದು ಅವನ ಮನದಾಳದ ಮನೋವಿಜ್ಞಾನದ ಪರಿಚಯವೇ ಸರಿ.

"ಸಂಜೆವೆಣ್ತೆಗೆದಿಟ್ಟ ತೇಜಃ
ಪುಂಜ ಚಿನ್ನದ ರಾಟೆಯದೆ ಎನೆ ಪಂಜುಗದಿರನು ಪಶ್ಚಿಮಾಂಗಣದಲ್ಲಿ ಶೋಭಿಸಿದ
ಹಂಜಿದರಳೆಯ ರಾಶಿಯೋ ಬಿಳಿ
ಗಂಜಿ ಹಿಡಿಸಿದ ಕದ್ದರೋ (ಖಾದಿ) ಎನೆ
ರಂಜಿಸಿದನಾಗಂತು ಎಂದಿನ ಕಡಲದೊರೆ ಕಣ್ಗೆ||"

"ದೆಸೆಯೊಳಗೆ ಕೇಸರಿ ಬಣ್ಣದ
ವಿಸರ ರತ್ನಾಕರನ ಹಬ್ಬಿದ
ವಸನ ಭೂಮಿಯ ಹಸುರು ತೊಡಗೆಯು ಮತ್ತೆ ಮಧ್ಯದೊಳು
ಮಿಸುಪ ಸೂರ್ಯನ ಚರಕದಂದದೊ
ಲೆಸೆಯೆ ಸೋಜಿಗವೆನಲು ಜಗದೊಳು
ಹೆಸರು ಪಡೆದಿಹ ಭಾರತ ರಾಷ್ಟ್ರಧ್ವಜದ ನೆನಪಾಯ್ತು||"

೩.ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವದ ಅಧಿವೇಶನದ ಸಂದರ್ಭದಲ್ಲಿ ಬರೆದ ಸ್ವಾಗತ ಗೀತೆಯಲ್ಲಿ ಅವರು ಭಾರತದಲ್ಲಿ ಎಂಭತ್ತು ಪ್ರತಿಶತ ಹಳ್ಳಿಗಳಿವೆ. ಆದುದರಿಂದ ಹಳ್ಳಿಗಳೇ ತಾಯ್ಬೇರು, ಅವುಗಳ ಬೆಳವಣಿಗೆಗೆ ಸೆಣಸಬೇಕೆನ್ನುತ್ತ

"ಹಳ್ಳಿಗರು ತಾಯ್ಬೇರು ಕೆಲಸಗೇಡೆಂತೆಂಬ ।
ಕಳಹುಳವನು ತಳ್ಳೀ ನೀರುಣಿಸಿ ।
ತಿಳಿವೆಂಬ ಒಳ್ಳೆ ಪರಿಯಲಿ ಫಲವನೀವಂತೆ ನಾಡೆಂಬ ।
ಬಳ್ಳಿಯನು ಬೆಳೆಸಬೇಕು ಆದರೆ ಭಾರತದ ಬಡತನ ನೀಗಲು"

"ಕೈಗೆಲಸ, ವ್ಯಾಪಾರ, ಬೇಸಾಯ, ಉದ್ಯೋಗ । ಹೀಗೆ ನಾಡೋಳು ಬಂದ ಬಡತನಗಳನುಭೋಗ" ಹೋಗಿ ಸುಸ್ಥಿತಿ ಪುನಃ ಬರಲಿ ಎಂಬ ಆಶಯ ಇಲ್ಲಿದೆ.

"ಸಿರಿ ಸೌಖ್ಯ ಸ್ವಾತಂತ್ರ್ಯ ಒಕ್ಕಟ್ಟು ಒಪ್ಪಂದ ಭಾರತ ದೇಶದಿ ಬಿಡದೆ ತರಲು ಜನುಮಕೆ ಬಂದ" ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವದ ಅಧಿವೇಶನವು ಅವುಗಳನ್ನು ಸಾಧಿಸಲು ಎಂದು ನಾರಾಯಣರಾಯರು ಹಾರೈಸುತ್ತಾರೆ.

೪. "ಭಾರತ ಮಾತೆ ಜಯ ಸನ್ನುತೆ"

"ಭಾರತ ಮಾತೆ ಜಯ ಜಯ ಸನ್ನುತೆ।
ಚಾರು ಪದಕೆ ನಮಿಸುವೆ ತಲೆಬಾಗುತೆ"

ಎಂಬ ಈ ಹಾಡಿನಲ್ಲಿ "ವಂದೇ ಮಾತರಂ" ಗೀತೆಯ ಛಾಯೆ ಕಂಡು ಬರುತ್ತದೆ.

ಭಾರತ ಮಾತೆಯ ಶ್ರುತಿ, ಶಾಸ್ತ್ರ, ಸ್ಮೃತಿ, ಶಾಸ್ತ್ರ ಪುರಾಣ ಇವುಗಳಿಂದ ಸುಸಂಸ್ಕೃತಳಾದವಳು. ತುಂಬಿದ ನದಿಗಳ ನೀರಿನಿಂದ ಸ್ನಾನ ಮಾಡಿದವಳು. ಕನಕ, ರತ್ನ, ಮಣಿ, ವಜ್ರಗಳಿಂದ ಸುಶೋಭಿತಳು, ಫಲ, ಧಾನ್ಯ, ಹಾಲು-ಹಣ್ಣುಗಳಿಂದ ನೈವೇದ್ಯ ಪಡೆದವಳು ಇವೆಲ್ಲವುಗಳಿಂದ ಅವಳು ವೈಭವಯುತಳಾಗಿದ್ದಾಳೆ.

ಭಾರತ ಮಾತೆಯು ಧೀರರಿಂದ, ಜ್ಞಾನಿಗಳಿಂದ, ಮುನಿಗಳಿಂದ ಪೂಜಿತಳು. ರಾಮ:ಕೃಷ್ಣ ಅರ್ಜುನರಿಂದ ವಂದಿತಳು, ಸೀತೆ ದ್ರೌಪದಿಯರಿಂದ ಹೊಗಳಲ್ಪಟ್ಟವಳು. ಮಾರುತಿ, ಗರುಡ ಮೊದಲಾದವರಿಂದ ಸೇವೆ ಪಡೆದವಳು, ಇವಳು ನೂರಕ್ಕೂ ಮಿಕ್ಕಿ ಕೋಟಿ ಭಾರತೀಯವರಿಗೆ ಅಧಿದೇವತೆ.

೫. "ಬನ್ನಿರೊ ನೋಡ ಬನ್ನಿರೊ"-ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲಿ ಈ ಕವಿತೆ ರಚಿತವಾಗಿರಬಹುದು. ಈ ಕವಿತೆ 'ದುಮ್ಮಿ ದುಮ್ಮಿ' ಧಾಟಿಯಲ್ಲಿ ಬರೆದುದಾಗಿದೆ. ಸ್ವಾತಂತ್ರ್ಯ ಹಬ್ಬ ನೋಡಲು ಕವಿ ಜನತೆಗೆ ಕರೆ ಕೊಡುತ್ತಾನೆ. ವಿದೇಶಿ ಬಂಧನದಿಂದ ಮುಕ್ತಿ ದೊರೆತದ್ದರಿಂದ "ಜಯ ಹಿಂದ್" ಎಂದು ಸಾರುತ್ತ ಬನ್ನಿರಿ ಎನ್ನುತ್ತಾರೆ ನಾರಾಯಣರಾಯರು.

ನಮ್ಮ ತ್ರಿವರ್ಣ ಧ್ವಜವನ್ನು ತಯಾರಿಸಿಕೊಂಡು ಕೈಯ್ಯಲ್ಲಿ ಹಿಡಿದು ಬರಲು ಹೇಳುತ್ತಾರೆ. ಮೇಳ ವಾದ್ಯಗಳ ಜೊತೆ ಬರಲು ಆಹ್ವಾನಿಸುತ್ತಾರೆ. ಜನರು ತಮ್ಮ ಮನೆಯ ಮುಂದೆ ರಂಗೋಲಿಗಳಿಂದ ಅಲಂಕರಿಸಿ ತಳಿರು ತೋರಣಗಳಿಂದ ಶೃಂಗರಿಸಲು ಕೋರುತ್ತಾರೆ. ಧೀರ ಗಂಭೀರ ವೀರ ಕುಮಾರರಾದ ಅವರಿಗೆಲ್ಲ ಆರತಿ ಎತ್ತಲು ಹೇಳುತ್ತಾರೆ. ಗದುಗಿನ ವೀರನಾರಾಯಣನ ದಯೆಯಿಂದ ಸ್ವಾತಂತ್ರ್ಯ ದೊರಕಿತು ಎನ್ನುತ್ತಾರೆ.

೬. "ಸಹಜೀವನ"-ಶಾಂತಿಯುತವಾದ ಸಹಜೀವನವೇ ಜಾಗತಿಕ ಶಾಂತಿಗೆ ಮುಖ್ಯವಾಗಿ ಬೇಕು ಎಂಬ ವಿಚಾರ ಇಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಪರಸ್ಪರ ಸಹಕಾರ, ಸಹವಾಸ, ಸಹನಶೀಲತೆ, ಪ್ರೇಮ ವಿಶ್ವಾಸಗಳೇ ಶಾಂತಿಯುತ ಶ್ರೇಷ್ಠ ಸಹಜೀವನದ ಮಾರ್ಗದಲ್ಲಿ ನಮ್ಮನ್ನು ಸುಗಮವಾಗಿ ಸಾಗಿಸಬಲ್ಲವು. ಇದರಲ್ಲಿ "ಜೀವಿಸು, ಜೀವಿಸಗೊಡು" ಎಂಬ ತತ್ವವನ್ನು ತಿಳಿಸಲಾಗಿದೆ. ಈ ತತ್ವದಂತೆಯೇ ಸ್ವೀಕೃತವಾದ "ಪಂಚಶೀಲ ತತ್ವಗಳು" ಜಾಗತಿಕ ಸತ್ಯವಾಗಿ ಪರಿಣಮಿಸಿವೆ. ಆದುದರಿಂದ ಅಂಥ ಸತ್ಯಕ್ಕೆ ವಂಚನೆ ಮಾಡದಂತೆ ನಡೆದುಕೊಳ್ಳೋಣ. ಅಂದರೆ ಶಾಂತಿಯುತ

ಸಹಜೀವನ ನಮಗೆ ದೊರೆಯುವುದು. ಎಲ್ಲೆಡೆ ಸುಖ, ಶಾಂತಿ, ತಿಳುವಳಿಕೆ, ಪ್ರೀತಿ, ವಿಶ್ವಾಸ ಹರಡಲಿ ಎಂಬುದು ಕವಿಯ ಆಶಯ.

ಈ ರೀತಿ ನಾರಾಯಣರಾಯರು ತಾವು ರಚಿಸಿ, ಈ ಕಾವ್ಯಗಳಲ್ಲಿ ಹಾಗೂ ನಾಟಕಗಳಲ್ಲಿ ತಮ್ಮ ರಾಷ್ಟ್ರೀಯ ಮನೋವೃತ್ತಿಯನ್ನು ಓತಪ್ರೋತವಾಗಿ ತುಂಬಿದ್ದಾರೆ. ಇವುಗಳುದ್ದಕ್ಕೂ ಅವರ ಸಕಾರಾತ್ಮಕ ಸಾತ್ವಿಕ ಆಶಯ. ದೇಶದ ವಿಷಯಕ್ಕೆ ಅವರಿಗಿರುವ ಅಮೋಘ ಪ್ರೀತಿ, ಕಳಕಳಿ, ಸ್ವಾಭಿಮಾನ ಹಾಸುಹೊಕ್ಕಾಗಿ ಹರಿದು ಬಂದದ್ದು ನಿಚ್ಚಳವಾಗಿ ತೋರುತ್ತದೆ.

■

## ಸಾಹಿತ್ಯ ಕ್ಷೇತ್ರ ಹುಯಿಲಗೋಳರ ಪದ್ಯ ಸಾಹಿತ್ಯ :

ಕಾವ್ಯ ಕ್ಷೇತ್ರದಲ್ಲಿ ನಾರಾಯಣರ ಸಾಧನೆ ಮಹತ್ವದ್ದು ಇದೆ. ಕೀರ್ತನೆಗಳು, ಕಥನ ಕವನಗಳು, ನಾಡಗೀತೆಗಳು, ರಂಗಗೀತೆಗಳು, ಹೀಗೆ ಹಲವಾರು ಪ್ರಕಾರಗಳಲ್ಲಿ ಕವಿತೆಗಳನ್ನು ರಚನೆ ಮಾಡಿದ್ದಾರೆ.

೧೯೨೪ರಲ್ಲಿ "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಎಂದು ಮಹಾತ್ಮಗಾಂಧೀಜಿಯವರ ಸಮ್ಮುಖದಲ್ಲಿ ಹೇಳಿ ಅವರ ನಾಡಗೀತೆಗೆ ತುಂಬ ಪ್ರಸಿದ್ಧಿ ಬಂದಿತು. ನಂತರ ೧೯೩೩ರಲ್ಲಿ ಧಾರವಾಡದ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾಗಿ ಭಾಗವಹಿಸಿದ್ದು ತುಂಬ ಪ್ರಸಿದ್ಧಿಯನ್ನು ತಂದಿತು.

ಕುಮಾರವ್ಯಾಸನಿಗೆ ಪ್ರಿಯವಾದ ಭಾಮಿನಿ ಷಟ್ಪದಿ ಇವರಿಗೂ ಪ್ರಿಯವಾಯಿತು. ಇವರಿಗೆ ಪುರಂದರದಾಸರು ಅತ್ಯಂತ ಪ್ರಿಯರಾದರವರು.

**ಕಥನಕವನಗಳು**

ಇವರು ಬರೆದ ಕಥನ ಕವನಗಳ ಸ್ವರೂಪ ಸಂಪ್ರದಾಯಿಕವಾದುದು. ಉದ್ದೇಶ ಆಧುನಿಕವಾಗಿದೆ. ತಮ್ಮ ಕಥನ ಕವನಗಳಲ್ಲಿ ಷಟ್ಪದಿಯ ಛಂದೋ ರೂಪವನ್ನೇ ಬಳಸಿದ್ದಾರೆ. ನಾಡು ನುಡಿಗಳ ಆಗು ಹೋಗುಗಳೇ ಈ ಕವನಗಳಿಗೆ ವಸ್ತುವನ್ನೊದಗಿಸಿವೆ. ಅವರು ಹನ್ನೆರಡು ಕಥನ ಕವನಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಮುಖ್ಯವಾಗಿ ಬರುವ ವಿಷಯ ನಾಡು ಹಾಗೂ ನುಡಿ ಎದುರಿಸುತ್ತಿರುವ ಸಂಕಟಗಳು, ಸೃಷ್ಟಿಯ ಕಲ್ಪನೆ, ರಚನೆಯಲ್ಲಿಯ ನಾಟಕೀಯತೆ ಹಾಗೂ ವರ್ಣನೆ.

'ಕನಸು' ಅವರು ಬರೆದ ಕಥನ ಕವನಗಳಲ್ಲಿ ಪ್ರಥಮ ೧೯೦೮ರಲ್ಲಿ ರಚಿಸಿದರು. ೧೯ ನುಡಿಗಳಿರುವ ಈ ಕವನದ ನಾಯಕ ಕನಸೊಂದರಲ್ಲಿ ತನ್ನೂರಿನ ಅಗಸಿದಾಟಿ ಕಾಡಿನ ಪಟಾಂಗಣವನ್ನು ಸೇರುತ್ತಾನೆ. ಇವೆಲ್ಲ ಭಾಷಾಸೌಧಗಳು, ಮೊದಲನೆಯದು ಆಂಗ್ಲಭಾಷಾಯುತನವಾದರೆ ಮುಂದಿನದು, ಸಂಸ್ಕೃತ ಕವಿಗಳು ರಚಿಸಿದ ಕವನ ಅಲ್ಲಿ ಭವಭೂತಿ ಕಾಳಿದಾಸ, ಬಾಣ, ಮೊದಲಾದ ಕವಿಗಳು ರತ್ನಗಳನ್ನು ಹಿಡಿದು ನಿಂತಿದ್ದಾರೆ. ಇಲ್ಲಿ ಬರುವ ನಾಯಕ ದೇವಭಾಷಾ ಮಾತೆಯನ್ನು ಭಕ್ತಿಯಿಂದ ನಮಿಸುತ್ತಾನೆ. ಆ ಮಾತೆಯು ಈತನನ್ನು ಕರೆದು ತನ್ನ ಕನ್ನಡ ಸಖಿಯಗೋಳನ್ನು

ತೋರಿಸಲು ಅವಳ ಮನೆಗೆ ಕರೆದೊಯ್ಯುತ್ತಾಳೆ. ಕನ್ನಡಮ್ಮನ ಕರುಣಾಜನಕ ಸ್ಥಿತಿಯನ್ನು ಕವಿಯು ಹೀಗೆ ವರ್ಣಿಸುತ್ತಾರೆ.

**ಅಗಡುಗಾಣುವ ಮುರುಕು ಮನೆಯೊಳು**
**ಪೊಗರುವಿಲ್ಲದ ಪೊಗೆಯು ತುಂಬಿರೆ**
**ಜಿಗುಡು ಹರಡಿಹಕರಡು ನೆಲದೊಳು ಬರಡು ಕಾಲಿಡಲು**
**ಮಗಸಿ ಕರ್ನಾಟಕದ ದೊರೆಯಳ**
**ಜಿಗುಲಯದು ಜಗುಳಿದದು ಒಳಗಣ**
**ಬಗೆಯ ಪೇಳಲು ಬಗೆಯ ಕಾಣೆತು ಮಾಡಲಿನ್ನೇನು ॥**

ಶಾಂತಕವಿಗಳು ರಕ್ಷಿಸು ಕರ್ನಾಟಕ ದೇವಿ ಎಂದು ಬೇಡಿದರೆ ಇಲ್ಲಿ ದೇವಿಯೇ ರಕ್ಷಣೆ ಕೇಳುತ್ತಾಳೆ. ಪೂರ್ವಕ ಕವಿಗಳೆಲ್ಲರೂ ಬೀಳುವ ಗೋಡೆಯನ್ನು ತಡೆದು ನಿಲ್ಲಿಸಲು ಯತ್ನಿಸಿದ್ದರು, ಇಲ್ಲಿ ದೇವಿಯೇ ರಕ್ಷಣೆ ಕೇಳುವ ದುಃಸ್ಥಿತಿಯನ್ನು ಬಹಳ ಚೆನ್ನಾಗಿ ವರ್ಣಿಸಿದ್ದಾರೆ, ಇಲ್ಲಿಯ ನಾಯಕನಿಗೆ ಎಚ್ಚರವಾಗಿ ಅವನ ಕನಸು ಹರಿಯುತ್ತೆ. ಅವರ ಕಥನ ಕವನಗಳ ಎಲ್ಲ ಲಕ್ಷಣಗಳು ಈ ಕವನದಲ್ಲಿ ಮೂಡಿ ಬಂದಿವೆ. ಕನ್ನಡಿಗರ ಸಾಹಿತ್ಯ ಸಮ್ಮೇಳನ ಕರ್ನಾಟಕ ಮಿಡುಕು, ರಥೋತ್ಸವ, ಭಾರತ ಭೂವನ ಅಥವಾ ನಾಡತೋಟ. ಜೋಕುಮಾರನ ಜನಸೇವೆ, ಗಜೇಂದ್ರ ಮೋಕ್ಷ, ಚಂದ್ರಮ ಜ್ಯೋತಿ ಸಂವಾದ, ಆಗುಂಬೆಯ ಸೂರ್ಯಾಸ್ತ, ಬಹುಶಃ ೧೯೬೯ರಲ್ಲಿ ಬರೆದ ಶ್ರೀ ಶ್ರದ್ಧಾನಂದ ತೀರ್ಥರು ಇದು ಅವರ ಕೊನೆಯ ಕವನ. ಅವುಗಳ ಬಗ್ಗೆ ಒಂದೊಂದಾಗಿ ಬರೆಯಲಾಗಿದೆ. ಬರೆದ ಕನ್ನಡಿಗರ ಸಾಹಿತ್ಯ ಸಮ್ಮೇಳನ ಕವನ ೫೦ ಷಟ್ಪದಿಗಳಲ್ಲಿದೆ. ಆರಂಭದ ಸಾಲುಗಳಲ್ಲಿ

**ಮೊದಲು ಕತೆಯನು ಪೇಳೆ ಶಕ್ತಿಯ**
**ನೊದವಸೀಯುವ ಕರುಣ ಶರಧಿಯ**
**ಗದುಗಿನಲ್ಲಿಯ ವೀರನಾರಾಯಣನ ಬಲದಿಂದ ॥**
**ಪದಕೆ ನಮಿಸುತೆ ಪೇಳ್ವೆ ನಾನಂ**
**ಜದಲೆ ಕನ್ನಡ ಜನರ ಸಮ್ಮೇಳನದ ಕಥೆಯನು ॥**

ಕಾವ್ಯಶಕ್ತಿಯ ದೈವದತ್ತವಾಗಿ ಬರುತ್ತದೆ. ಕುಮಾರವ್ಯಾಸನಂತೆ ತಮಗೂ ಗದುಗಿನ ವೀರನಾರಾಯಣ ಆಶೀರ್ವಾದದಿಂದ ಕಾವ್ಯವನ್ನು ಬರೆದುದಾಗಿ ಹೇಳುತ್ತ ಮೊದಲಿನ ಕವಿಗಳ ಪಾದಕ್ಕೆ ನಮಸ್ಕರಿಸುತ್ತ ಕನ್ನಡ ಜನರ ಸಮ್ಮೇಳನದ ಕಥೆಯಿದೆ.

ನಂತರ ತನ್ನ ಪೂರ್ವದ ವೈಭವವನ್ನು ಕಳೆದುಕೊಂಡು ಅವನತಿಯಲ್ಲಿರುವ ಕನ್ನಡ ತಾಯಿಯ ವರ್ಣನೆಯೊಂದಿಗೆ ಪ್ರಾರಂಭವಾಗಿ ಮುಂದಿನ ಕವಿತೆಗಳಲ್ಲಿ

ತಾಯಿಯ ದುರ್ದೆಶೆಯನ್ನು ಹೋಗಲಾಡಿಸಲು ಅನೇಕರು ಕೈಗೊಂಡ ಪ್ರಯತ್ನಗಳನ್ನು ವರ್ಣಿಸುತ್ತದೆ. ಆಗ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಯಾಗುತ್ತದೆ. ಅನೇಕ ಸಮ್ಮೇಳನಗಳು ನಡೆಯುತ್ತವೆ. ಕನ್ನಡದ ಸ್ಥಿತಿಯನ್ನು ಸುಧಾರಿಸುವ ಉಪಾಯಗಳನ್ನು ಕುರಿತು ವಿದ್ವಾಂಸರು ಭಾಷಣ ಮಾಡುತ್ತಾರೆ. ಕೆಲವರು ಕವಿತೆಗಳನ್ನು ಓದುತ್ತಾರೆ. ವಂದನಾರ್ಪಣೆಯೊಂದಿಗೆ ಸಮ್ಮೇಳನ ಮುಕ್ತಾಯವಾಗುತ್ತದೆ. ಈ ಕವನವು ೧೯೧೫ ಏಪ್ರಿಲ್‌ದ ಸಚಿತ್ರ ಭಾರತದ ಸಂಚಿಕೆಯಲ್ಲಿ ಪ್ರಕಟವಾಗಿದೆ.

೧೯೧೬ರಲ್ಲಿ ವಾಗ್ಭೂಷಣದಲ್ಲಿ ಪ್ರಕಟವಾದ 'ಕರ್ನಾಟಕ ಮಿಡುಕು' ಕವನದ ವಸ್ತು ಆಗಿನ ಕರ್ನಾಟಕದ ದುಃಸ್ಥಿತಿಯಲ್ಲಿ ಇಲ್ಲಿ ಕರ್ನಾಟಕನು ತನ್ನ ಮಕ್ಕಳನ್ನು ಎಚ್ಚರಿಸಲು ಪ್ರಯತ್ನಿಸುತ್ತಾನೆ.

ವಿದ್ಯೆ ಕಲಿತವರೆದ್ದು ಪೋದರೆ ?
ಬುದ್ಧಿಗೆಟ್ಟರೆ ? ನಿದ್ದೆ ಮಾಳ್ಪರೇ ?
ಶುದ್ಧ ನನ್ನಯ ಮುದ್ದು ನುಡಿಯಭಿಮಾನವಿಲ್ಲೇನೈ ॥
ತಿದ್ದಿರೆಲ್ಲರ ಬಿದ್ದ ಕಾರ್ಯದ ।
ಸಿದ್ಧಗೈಯಲು ಬದ್ಧ ಕಂಕಣ ।
ರಿದ್ದ ಮಾನವರೆದ್ದು ಬಂದೊಡೆ ಗೆದ್ದೆ ನಾನೆಂಬೆ ॥

"ಪ್ರಭಾತ" ಮಾಸಪತ್ರಿಕೆಯು ೧೯೧೮ರ ಆಗಸ್ಟ್ ತಿಂಗಳಲ್ಲಿ ಪ್ರಕಟವಾಯಿತು. ಅದರಲ್ಲಿ ಅನೇಕ ಮಹನೀಯರ ಕವನಗಳು ಪ್ರಕಟವಾಗಿವೆ. ಇದೇ ಸಂಚಿಕೆಯಲ್ಲಿ ಹುಯಿಲಗೋಳ ನಾರಾಯಣರಾಯರು ಬರೆದ 'ರಥೋತ್ಸವ' ಎಂಬ ಸುದೀರ್ಘ ಕವಿತೆಯೂ ಪ್ರಕಟವಾಗಿದೆ. ಇಲ್ಲಿ ಕನ್ನಡ ತಾಯಿಯ ರಥೋತ್ಸವ ನಡೆದಿದೆ. ಅನೇಕ ಕವಿಪುಂಗರು ವೈಭವದ ತುದಿಗೆ ತಂದರು. ಎಂದು ಹೇಳುತ್ತಾ ಅದನ್ನು ಈಗ ಹೇಡಿಗಳು ತಗ್ಗಿನಲ್ಲಿ ನಿಲ್ಲಿಸಿದ್ದಾರೆ ಎಂದು ತಿಳಿಸುತ್ತಾ ಮೊದಲಿನ ಎತ್ತರಕ್ಕೆ ಒಯ್ಯಲು ಅವರಿಗೆ ಆದೇಶಿಸುತ್ತಾಳೆ.

ಎಂದು ನೂಕಿದ ಬಳಿಕ ಸಕಲರು
ಸಂದರ್ರೈ ತಾಯ ಬಹಳ ಮನದೊಳು
ನೊಂದಳ್ಳೈ ವಿಧಿ ತನ್ನನ್ನೂ ಬಿಟ್ಟು ಬಿಡದೆಂದೂ ।
ನಂದನಂದನ ದೇವ ಹರಿಗೋ
ವಿಂದ ಮುರಹರ ನಿರುತ ನನ್ನನು
ತಂದೆ ರಕ್ಷಿಸೊ ಎಂದು ಕರುಣದ ಬೇಡದಳುದೇವೀ

'ಚಂದ್ರಮ ಜ್ಯೋತಿ ಸಂವಾದ' ಕವನವು ೧೩ ಪದ್ಯಗಳಿಂದ ಕೂಡಿದ್ದು ಇದು ೧೯೧೯ ಫೆಬ್ರವರಿಯಲ್ಲಿ 'ಪ್ರಭಾತ' ದಲ್ಲಿ ಪ್ರಕಟವಾಗಿದೆ. ಇಲ್ಲಿ ಚಂದ್ರನು ತಾನು ಜ್ಯೋತಿಗಿಂತ ಶ್ರೇಷ್ಠ ಎಂಬುದನ್ನು ಹಲವು ಉದಾಹರಣೆಗಳ ಮೂಲಕ ಪ್ರತಿಪಾದಿಸುತ್ತಾನೆ.

ಎಲೆಲೆ ದೀಪವೆ ಇನಿತು ಸಡಗರ
ದೊವು ನಿನಗೊಂದೇಕೆ ಕುನ್ನಿಯೆ ?
ತೊಲಗು ನಡೆನನ್ನಲ್ಲಿ ನಿನ್ನಯ ಸ್ಪರ್ಧೆಯೇತಕ್ಕೆ ?
ಎಲ್ಲವೂ ಕಣ್ದೆರೆ ನೋಡು ಪೊಡವಿಯ
ತಲವನೆಲ್ಲವ ಬೆಳಗಿಹೆನು ನೆರೆ
ನಿಲುಕದೈ ಗಡ ! ನಿನ್ನ ಬೆಳಕಿದು ಮನೆಯ ಮೂಲೆಗಳ ॥

ಭಾರತ ಭೂವನ ಅಥವಾ ನಾಡತೋಟ ಎಂಬ ಕವನದ ಆರಂಭದಲ್ಲಿ ವಿಷ್ಣು ಭಕ್ತಿ ವ್ಯಕ್ತವಾಗಿದೆ.

ಶ್ರೀವರನ ಕೃಪೆಯಿಂದ ಭಾರತ ।
ಭುವನವು ತಾಂ ಬೆಳೆದು ಬಂದುರೆ ।
ಲೇವಿದ್ರಾ ಸುಗ್ಗಿಗಳ ಫಲಗಳ ಭರದ ಬಲದಿಂದ ॥

ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಜೋಕುಮಾರನ ಜನಸೇವೆ ಜಾನಪದ ಕಥೆಯುಳ್ಳ ಗೀತೆಯಾಗಿದೆ. ಪೌರಾಣಿಕದಲ್ಲಿ ಬರುವ ಜೋಕುಮಾರನ ಕಥೆಯನ್ನು ಅತ್ಯಂತ ನಾಟಕೀಯವಾಗಿ ಬರೆದಿದ್ದಾರೆ. ಇದು ೧೯೨೩ರಲ್ಲಿ ಜೈ ಕರ್ನಾಟಕದಲ್ಲಿ ಪ್ರಕಟವಾಯಿತು. ಮೃಡನು ಸಭಿಕರ ಮುಖವನೊಡುತ ಪೊಡವಿಯೊಳಗೀ ಜೋಕುಮಾರನು ನುಡಿದ ತೆರದಿಂ ಮಳೆಯರಾಜ್ಯವ ಕಳುಪುದೆಂತೆಂದ ॥

ಗಜೇಂದ್ರಮೋಕ್ಷ 'ಕರ್ನಾಟಕ ಸಾಹಿತ್ಯ ಪರಿಷತ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಭಕ್ತಿರಸದಿಂದ ಕೂಡಿದ ಪದ್ಯವಾಗಿದೆ.

ಆಳ್ದ ಕರಿಯನ್ನೆತ್ತಿ ಲಕುಮಿಯ
ನಾಲ್ದನತಿ ಪ್ರೇಮದಲಿ ಸಾಕೀ
ಹಾಳ್ದುಡುಕು ನಡೆಯಿನ್ನು ಮುಂದೀ ಕಥೆಯನೋದಿದರೆ ॥

ಆಗುಂಬೆಯ ಸೂರ್ಯಾಸ್ತ ಕವನದಲಿ ನಾರಾಯಣರಾಯರು ತಾವು ನೋಡಿದ ಆಗುಂಬೆ ಘಟ್ಟದ ಸೂರ್ಯಾಸ್ತದ ವರ್ಣನೆಯನ್ನು ಬರೆದಿದ್ದಾರೆ. ಇಲ್ಲಿ ಪ್ರಕೃತಿಯ ವರ್ಣನೆಯನ್ನು ಮಾಡುವುದರ ಜೊತೆಗೆ ಅವರು ತಮ್ಮ ರಾಷ್ಟ್ರಭಕ್ತಿಯನ್ನು ಇದರಲ್ಲಿ ಅಳವಡಿಸಿದ್ದಾರೆ. ಇಲ್ಲಿ ಅವರ ಕಲ್ಪನಾಶಕ್ತಿ ಅಗಮ್ಯವಾಗಿದೆ.

ದೆಸೆಯೊಳಗೆ ಕೇಸರಿಯ ಬಣ್ಣದ
ವಿಸರ ರತ್ನಾಕರನ ಹಬ್ಬಿದ
ವಸನ, ಭೂಮಿಯ ಹೆಸರು ತೊಡಿಗೆಯು ಮತ್ತೆ ಮಧ್ಯದೊಳು ।
ಮುಸುಪ ಸೂರ್ಯನು ಚರಕದಂದದೊ
ಳೆಸೆಯೆ ಸೂಜಿಗವೆನಲು ಜಗದೋಳು
ಹೆಸರು ಪಡೆದಿಹ ಭರತ ರಾಷ್ಟ್ರಧ್ವಜದ ನೆನಪಾಯ್ತು ।

ವಿಜಯನಗರದ ಷಟ್ ಶತಮಾನೋತ್ಸವ ನಿಮಿತ್ಯ ರಚಿಸಿದ ಕವನ 'ವಿಜಯನಗರದ ವೀರವಾಣಿ' ಈ ಕವನದಲ್ಲಿ ನಾವು ಪ್ರಾರ್ಥಿಸುವ ದೇವರು, ದೇಶ, ನುಡಿ ಒಂದೇ ಎಂದು ಕನ್ನಡ ಕಲಿಗಳಿಗೆ ಹುರಿದುಂಬಿಸಿದ್ದಾರೆ.

ಒಂದೇ ದೇವರು, ಒಂದೇ ದೇಶವು
ಒಂದೇ ರಕುತವು, ಒಂದೆಯೇ ನುಡಿ
ಒಂದೆಯೆ ಬಗಿಯೊಂದೆ ಸಂಸ್ಕೃತಿಯೊಂದೆ ಕನ್ನಾಡು ।

'ಒಂದಾದ ಕನ್ನಡನಾಡು' ಕವನವನ್ನು ಹುಯಿಲಗೋಳ ನಾರಾಯಣರಾಯರು ಪ್ರಥಮ ರಾಜ್ಯೋತ್ಸವ ಸಮಾರಂಭದ ಸಂದರ್ಭದಲ್ಲಿ ರಚಿಸಿದರು. ರಾಜಕೀಯ ಕಾರಣಗಳಿಂದ ಬೇರೆ ಬೇರೆ ಪ್ರಾಂತಗಳಾಗಿ ಹರಿದು ಹಂಚಿಹೋಗಿದ್ದ ಕನ್ನಡ ನಾಡನ್ನು ಭಾಷಾವಾರು ಪ್ರಾಂತ ರಚನೆಯ ತತ್ವದಂತೆ ಕನ್ನಡ ನಾಡಿನ ಬಹುಭಾಗ ಒಂದಾದಾಗ ಕನ್ನಡ ನಾಡಿನ ವೈಭವವನ್ನು ಹೇಳುತ್ತಾ ನಾಡಿಗೆ ನಂಜುಂಡೇಶ್ವರನ ಕೃಪೆ, ಚಾಮುಂಡೇಶ್ವರಿ ರಕ್ಷಣೆಗಾಗಿ ಪ್ರಾರ್ಥಿಸುತ್ತಾರೆ.

ತುಂಡು ತುಂಡಾಗಿರ್ದ ನೆಲಗಳ
ಹಿಂಡುಗೂಡಿಸಿ ನೋಡುವಾನಂ
ಜುಂಡನಾಥನ ಕೃಪೆಯ ಛತ್ರವು ನಿರುತಮೇಲಿರಲು ।
ಎಂಡ ಮನೆಗಳ ನೆಣೆಸುವಂತಹ
ಪುಂಡರಿಂ ಕಾಯ್ವಂತೆ ಶ್ರೀಚಾ
ಮುಂಡಿದೇವಿಯ ನೊಲಿಸಿ ಪ್ರಾರ್ಥಿಸಲವಳು ಸಲಹುವಳು ।

ಲ್ಲ ಭಕ್ತಿಯಿರಿಸಿದ ಅವರು ಇಲ್ಲಿ ಶ್ರೀ ಮದಾನಂದ ತೀರ್ಥರ ಚರಿತ್ರೆಯನ್ನು ಸರಳವಾಗಿ ವರ್ಣಿಸಿದ್ದಾರೆ/ ಇಲ್ಲಿ ಮಧ್ವಾಚಾರ್ಯರ ಚರಿತ್ರೆಯೊಡನೆ ಅವರ ದರ್ಶನವು ಮಾಡಿ ಬಂದಿರುವುದರಿಂದ ಈ ಕಥನಕಾವ್ಯಸಾರ್ಥಕವಾಗಿದೆ.

ನಮಿಸುವೆನು ಶ್ರೀ ವಾಯುದೇವಗೆ
ನಮಿಸುವೆನು ಶ್ರೀ ಭೀಮಸೇನಗೆ

ನಮಿಪೆ ಶ್ರೀಯಾನಂದ ತೀರ್ಥರ ಪಾದಪಂಕಜವ ॥
ನಮಿಸುವೆನು ಶ್ರೀ ರಾಘವೇಂದ್ರಗೆ
ನಮಿಪೆ ಗದುಗಿನ ಶ್ರೀ ನಾರಾಯಣನ ಪಾದಗಳಿಗೆ

ಇದು 'ಮಾಧ್ವ ಸಮ್ಮೇಳನ ಮತ್ತು ಉತ್ಸವ ಸ್ಮೃತಿ ಸಂಪುಟ, ಆರಾಧನೆಯಲ್ಲಿ ನೋಡಬಹುದು.

ಕರ್ನಾಟಕದ ಮಿಡುಕು (೧೯೧೬)
ಒಂದು ದಿನ ಕರ್ನಾಟಕಾ ಕ ।
ಣ್ಣೆಂದು ತೆರೆಯುವೆ ? ತೆರೆಯೊ ತೆರೆ ತೆರೆ ।
ಯೆಂದು ಕೂಗುವ ಜನರ ಗದ್ದಲವನ್ನು ಕೇಳುತೆ ॥
ನೊಂದ ಕರ್ನಾಟಕನು ಬಂದರ ।
ಮುಂದೆ ಕುಳ್ಳಿರಿಸುತ್ತೆ ಕಣ್ಣೀರ್ ।
ತಂದು ನುಡಿದನು ಕಣ್ಣ ತೆರೆಯದೆಯಿಂತು ದುಃಖಿಸುತೆ ॥೧॥

ಹುಚ್ಚೆಲಾನಿಮಗಹುದು । ನಿದ್ದೆಗೆ ।
ಮೆಚ್ಚಿದಂ ಕಣ್ದೆರೆಯನಿವನೆಂ
ದೆಚ್ಚರಿಸಲೇತಕ್ಕೆ ಮೊರೆವಿರಿ ಕಣ್ಣಳುತಿಳಿದೇ ॥
ಮುಚ್ಚಿಕೊಂಡಿಹೆನೆನಗೆ ಬಂದೀ ।
ತುಚ್ಛ ಸ್ಥಿತಿಯನು ನೋಡಲಾರದೆ ।
ಬಿಚ್ಚಿ ಜಗದೊಳಗೆನ್ನನೆಲ್ಲರು ಬಯ್ಯುವರಿಂತೆಂದು ॥೨॥

ಪಂತಣೆನ್ನಯ ಸೊಬಗನಿಷ್ಟೆಂ ।
ದೆಂತು ಬಣ್ಣಿಸಲಾಪೆ ? ಮಕ್ಕಳೆ ।
ಕಂತು ಪಿತವರ ವೀರರನಾರಾಯಣನ ದಯದಿಂದೆ ॥
ಸಂತಸಂ ಗಡ ! ಎಲ್ಲಕೆಲದೊಳು ।
ಸಂತತಂ ಸೊಗಮಿತ್ತು ಜನರನು ।
ನಿಂತು ಭಾಗ್ಯದ ದೇವಿ ನೋಡಿದಳೊಂದೆ ಮನಸಿನಲಿ ॥೩॥

ಎಲ್ಲಿ ನೋಡಿದಡಲ್ಲಿ ಕನ್ನಡ ।
ಬಲ್ಲಜಾಣಗ ಸೊಲುಕೇಳುವು ।
ದೆಲ್ಲಿ ನೋಡಿದಡಲ್ಲಿಯುದ್ಯಮದಲ್ಲಿ ತೊಡಗಿಹರು ॥
ಪೊಲ್ಲಾಮಾನಿಸರಿಲ್ಲ ನಾಡೊಳ ।
ಗೆಲ್ಲರೊಳಗಿವೆಲ್ಲನೊಂದುವ ।
ನಲ್ಲವೆನ್ನತೆ ಹಲ್ಲತಿನ್ನತೆ ಜೊಲ್ಲಸುರಿಸುವರು ॥೪॥

ಕಾಳುಗಳ ಹಗೆ ಸಿರಿನಿಧಿಯ ನಾಡು ।
ದೋಳಕಲಿಗಳ ಬೀಡು ಕವಿಗಳ ।
ಮೇಳಕೂಟವು ಜಾಣರಿಗೆ ಮನೆಯುಜ್ಜುಗಕೆ ತಾಣಾ ॥
ಕೀಳು ಹಯನೊಳು ಮರುಗು ಸಸಿಯೊಳು ।
ಬೀಳುವನೆಲದೊಳು ಬೆಳೆದ ಕೇದಗೆ ।
ಯೋಳು ಹೊಡೆ ಕುಡಿ ಬಳ್ಳಿಯೋಳು ಜನರಲ್ಲಿ ತೋರವಿವ್ರೂ ॥೫॥

ಅಣ್ಣಗಳಿರಾ ನನ್ನ ವಿಭವವ ।
ಬಣ್ಣಿಸಲ್ಕಾ ಪಲವು ನಾಲಗೆ ।
ಯಣ್ಣನಿಗೆ ಸಹ ಬಾರದೈ ಗಡ । ಆದೊಡೀ ದಿನಕೆ ॥
ಕಣ್ಣದಿರ್ಪಾ ಸಕಲಭಾಗ್ಯವು ।
ಮಣ್ಣುಗೂಡಿದುದವನು ನೋಡಲು ।
ಕಣ್ಣ ತೆರೆಯುವುದೆಂತು ಪೇಳಿರಿ ಮಂದಭಾಗ್ಯನು ತಾಂ ॥೬॥

ಅದೊಡೆನ್ನಯ ಸಕಲಭಾಗ್ಯವು ।
ಪೋದೊಡೇನಾಯ್ತದನು ಯತ್ನವ ।
ಗೈದುಮರಳಿಸೆ ಬಾರದೇನೆಂದರಿದು ದಾರಿಯನು ॥
ಆದರದಿ ನಾಂ ನೋಡಿದೆನು ಕೈ ।
ಸಾಧಿಸದಲಿರೆ ಕಂಡು ನೋಡಿದೆನು ಕೈ ।
ಯಾದೆನೆಂದುರೆ ಕಣ್ಣ ಮುಚ್ಚಿದೆ ಮಾಡಲಿನ್ನೇನು ॥೭॥

ಅಬ್ಬ ! ಈಗಿನ ಸ್ಥಿತಿಯ ಬಣ್ಣಿಸ ।
ಲುಬ್ಬಸಂ ಬರುತಿಹುದು ಮಕ್ಕಳೆ ।
ಒಬ್ಬರೊಬ್ಬರ ನಂಬದಲೆ ಕಾರ್ಯಗಳ ಮಾಡುವಿರಿ ॥
ಉಬ್ಬನೋಡಲು ಲಕ್ಷಗಟ್ಟಲೆ ।
ಕಬ್ಬ ಬರೆಯುವರೆಂಬ ಪುರುಳಿದ ।
ದಬ್ಬರಂ ಕಿವಿಗೆಲ್ಲಿ ನೋಡಿದರಲ್ಲಿ ಕೇಳುವುದು ॥೮॥

ಒಬ್ಬನೊಂದನು ಮಾಡಲೊಡನಿ ।
ನ್ನೊಬ್ಬ ಬಂದದನಂದು ಸಹಿಸದೆ ।
ದಬ್ಬಿ ತೊಂದರೆಗೊಟ್ಟು ತಾನೇ ಜಾಣನೆಂದೆಂಬ ।
ಮಬ್ಬಿನಿಂದಲಿ ಕೆಲಸತೊಡಕನು ।
ಹಬ್ಬಿಸೆಂದುಂ ಮುಗಿಲ ಮುಟ್ಟದ ।
ಗುಬ್ಬಿಯಂದದಿ ಬರಿದೆ ಗದ್ದಲ ಮಾಡಲೇಬಹುದು ॥ ೯॥

ಪುರುಳುದೋರದ ಕಬ್ಬವೊಂದನು ।
ಬರೆದು ನಮ್ಮನು ಹೊಗಳಿದೊಡೆ ಬಹು ।
ಪರಿಯಿನವನನು ಗೌರಿಸುವಿರಿ ಮತ್ತೆ ಶ್ರಮಬಟ್ಟು ॥
ಪುರುಳುತುಂಬಿದ ಸವಿಯ ತೊಡೆದುರೆ ।
ಸರಸಗ್ರಂಥವ ಬರೆದವರ ಕಣ್ ।
ದೆರೆದು ನೋಡಿರಿ ಹೊಗಳೀಕೆಯ ಹೊಲಬಿಂಗೆ ಮನಗುಡದೆ ॥೧೦॥

ಅಡ್ಡಿಯೇತಕೆ ಗುಡ್ಡದೊಲು ನುಡಿ ।
ಗುಡ್ಡೆಯನು ಬಹುದೊಡ್ಡದನು ಕೈ ।
ಯೊಡ್ಡಿ ಮಾಳ್ಪೆವು ದಡ್ಡವಿಸಿಗಡ । ಜಡ್ಡು ಹಿಡಿದಂತೆ ॥
ಸಡ್ಡೆಯೇನೆಂದೆಡ್ಡಿಸುತಕ ।
ಣ್ಗೆಡ್ಡಮಾಗಿರುವೊಡ್ಡಗಣೆಯಲಿ ।
ಗೊಡ್ಡು ಹರಟುತೆ ಸಡ್ಡು ಹೊಡೆವುದು ಹೆಡ್ಡತನವಲ್ಲೇ ? ॥೧೧॥

ನಿಮ್ಮೊಳೆಲರು ಸಭೆಯ ನೆರೆಯಿಸಿ ।
ಒಮ್ಮನದಿ ಕೆಲಸಕ್ಕೆ ತೊಡಗಲು ।
ನಿಮ್ಮಳವನ್ ನಿಮ್ಮೊಳೆರು ಸಭೆಯ ನೆರೆಯಿಸಿ ।
ಒಮ್ಮನದಿ ಕೆಲಸಕ್ಕೆ ತೊಡಗಲು ।
ನಿಮ್ಮಳವನಾಂ ನೋಡಿದೆನು ಮೆಣ್‌ಕಣ್ದೆರೆಯಲೊಪ್ಪಿದೆನು ॥
ಒಮ್ಮೆಬಂದಿರ್ದುಬ್ಬು ಪೋದುದು ।
ಸುಮ್ಮನಿಹುದನು ಕಂಡು ನಚ್ಚಿದ ।
ಎಮ್ಮೆ ಕೋಣನ ಪಡೆದ ತೆರನಾಯ್ತೆಂದು ಮಿಡುಕಿದೆನು ॥೧೨॥

ವಿದ್ಯೆ ಕಲಿತವರೆದ್ದು ಪೋದರೆ ? ।
ಬುದ್ಧಿಗೆಟ್ಟರೆ ? ನಿದ್ದೆ ಮಾಳ್ಪರೆ ? ।
ಶುದ್ಧ ನನ್ನಯ ಮುದ್ದುನಡಯಭಿಮನವಿಲ್ಲೇನೈ ॥
ತಿದ್ದಿರೆಲ್ಲರ ಬಿದ್ದ ಕಾರ್ಯದ ।
ಸಿದ್ಧಗೈಉಲು ಬದ್ಧಕಂಕಣ ।
ರಿದ್ದ ಮಾನವರೆದ್ದು ಬಂದೊಡೆ ಗೆದ್ದೆ ನಾನೆಂದೆ ॥೧೩॥

## ರಥೋತ್ಸವ (೧೯೧೮)

ಕನ್ನಡದ ನುಡಿ ತಾಯ್ಗೆ ಕೈಮುಗಿ
ದಿನ್ನು ಬಣ್ಣಿಪೆನವಳ ಹಬ್ಬದ
ಒನ್ನದೇವರನ್ನೆಳೆವ ಚಂದದ ಪರಿಯನರಿವಂತೆ ।
ತನ್ನ ಮೇಲ್ಮೆಯ ಬಯಸಿ ಹೆಣಗುವ
ರನ್ನೆಗಂ ಗಡ ! ಮಕ್ಕಳವರೊಳ್
ನನನಿಯನು ತಿಳಿಪುದಕೆ ಹೂಡಿದ ಹದನವನದು ಕಂಡೈ ॥೧॥

ಕೋಳಿ ಕೂಗಿತು ಕನ್ನಡದ ರಣ
ಗಾಳಿ ಮೊಳಗಿತು ಭೇರಿ ಬಡೆದುದು
ಕೇಳುತ್ತಿದ್ದರು ನುಡಯ ಭಕುತರು ಬಳಿಕ ಸಾರಿದರು ।
ವೇಳೆ ಬಂದುದನಳಿಯಗೊಡದಿರಿ
ಏಳಿರೇಳಿರಿ ಏಳದಿರ್ದೊಡೆ
ಬೀಳಬೀಳುವಿರೆಲ್ಲರೈ ಗಡ ! ಕಟ್ಟ ಕಡೆತನಕ ॥೨॥

ಎನಲು ಮುಕುರಿತು ಹತ್ತು ಸಾವಿರ
ಆನವು ನೆರೆದಿತು ತಾಯ ಸುತ್ತಲು
ವನಯ ಭಯಬಕುತಿಯಲಿ ಕೇಳ್ದರು ಏನಿದೆಂತೆದೂ ।
ಸನಿಯದಲಿ ತಾಯ್ ಕರೆದು ನುಡಿದಳು
ತನಯರೇ ನನ್ನರವ ನೋಡಿರಿ
ಮುನಿದನೇತಕೊ ವಿಧಿಯು ತಿಳಿಯದು ದೀನಳಾಗಿಹೆನು ॥೩॥

ತೇರ ನೋಡಿರಿ ಪಂಪನಾದಿಯೊ
ಳಾರಿಸಿದ ನಗ್ಗಳನು ಕೊರೆದನು
ಊರಿದನು ರತ್ನಗಳ ರನ್ನನು ನೋಡೆ ಸರ್ವಜ್ಞ ।
ಚಾರುತರವೆನೆ ಹೊನ್ನ ಚಿನ್ನದ
ಗೀರನೆಳೆದನು ರುದ್ರಭಟ್ಟನು
ಧೀರತನದಲಿ ಗಟ್ಟಿ ಮಾಡಿದನಮಿತ ಹೇವದಲಿ ॥೪॥

# ಒಂದಾದ ಕನ್ನಡ ನಾಡು (೧೯೫೬)

ಶ್ರೀಯರಸ ಕೇಳ್ಜಿನ್ನ ಕನ್ನಡ
ಪಾಯಿ ಜನಗಳ ಗೆದ್ದು ಪರರೊ
ತ್ತಾಯದಿಂ ಬೇರ್ಪಡಿಸಿ ರಾಜ್ಯವನಾಳುತ್ತಿರಲೀಗ ॥
ಕಾಯಕಷ್ಟದಿ ಮರೀ ತಮ್ಮೊಳು
ಪ್ರೀಯದಿಂ ಕೂಡಿರ್ದ ಕನ್ನಡ
ತಾಯಿ ಮಕ್ಕಳ ಕಾಯೊ ಗದುಗಿನ ವೀರನಾರಾಯಣ ॥೧॥

ಪಿಂತೆ ವಿದ್ಯಾರಣ್ಯ ಮುನಿಗಳು
ನಿಂತು ಕನ್ನಡ ರಾಜ್ಯ ನಿರ್ಮಿಸಿ
ದಂತೆ ವಿದ್ಯಾವಂತರೀ ಹೊಸ ರಾಜ್ಯ ಪಡೆದಾಯ್ತು ॥
ಇಂತು ಪಡೆದಿಹ ರಾಜ್ಯವನು ಕಾ
ಯ್ವಂತೆ ಬುದ್ಧಿಯ ನೀಡಿ ಸಲುಹೆಂ
ದಂತರಿಲ್ಲದೆ ಬೇಡಿಕೊಳ್ವುದು ಸಕಲ ಮನ್ನೆಯರು ॥೨॥

ಒಳಜಗಳದೊಡಲುರಿಯ ನಂದಿಸಿ
ಬೆಳಸುತೊಳಗಿನ ನಲುಮೆ ನಂಬುಗೆ
ಗಳಲಿ ನಡೆವುದು ಮತ್ತೆ ತನುಮನದಿರದೆ ದುಡಿಯುವುದು ॥
ಗಳಿಸುವುದು ಬೇಸಾಯದುದ್ದಿಮೆ ಬೆಳಸಿ ನಾಡಿನ ಮೇಲ್ಮೆಯೇಳ್ಗೆಯ
ಬಳಸಿ ಭಾರತಕಿಂಬುಗೊಡುವುದು ನಿಷ್ಠೆನಡತೆಯಲಿ ॥೩॥

ತುಂಡು ತುಂಡಾಗಿರ್ದ ನೆಲಗಳ
ಹಿಂಡುಗೂಡಿಸಿ ನೋಡುವಾ ನಂ
ಜುಂಡನಾಥನ ಕೃಪೆಯ ಛತ್ರವು ನಿರುತ ಮೇಲಿರಲು ॥
ಉಂಡ ಮನೆ ಗಳನೆಣಿಸುವಂತಹ
ಪುಂಡರಿಂ ಕಾಯ್ವಂತೆ ಶ್ರೀಚಾ
ಮುಂಡಿ ದೇವಿಯನೊಲಿಸಿ ಪ್ರಾರ್ಥಿಸಲವಳುಸಲಹುವಳೂ॥೪॥

ವೈಪರೀತ್ಯವ ಬಗೆವ ಜನರೊಲು
ತಾ ಪಡೆದ ವರ ಕೊಟ್ಟ ದೇವನ
ನಾ ಪಿಸುಣ ಘಾತಿಸಲು ಭಸ್ಮಾಸುರನು ಬರಲಾಗಿ ॥
ಪಾಪಿಯನ್ನವನಿಂದ ಸಾಹಿಸಿ

ತಾಪ ಹರಿಸಿದ ಚಲ್ವ ಮೋಹಿನಿ
ರೂಪದಿಂ ಬಂದೆಮ್ಮ ಕಾಯ್ವನು ಚೆನ್ನಕೇಶವನು ॥೫॥

ಓಗೊಡದಿಹನೇನು ಶ್ರೀಹರಿ
ಕೂಗಿ ನಿಜಭಕ್ತಿಯಿ ಕರೆದೊಡೆ
ಬೇಗದಿಂದ್ವೈತಂದು ಸಲುಹಿದನಲ್ಲ ಗಜವರನ ॥
ನೀಗಿ ಸ್ವಾರ್ಥವನಿನ್ನು ಮೇಲನು
ರಾಗದಿಂದ ಜನರೊಂದೆ ಮನದವ
ರಾಗಿ ಕರೆದೊಡೆ ತಾನೆ ಬಂದುದು ಕನ್ನಡದ ರಾಜ್ಯ ॥೬॥

ಹಲವು ದಿನಗಳಲಗಲಿ ಕೂಡಿದ
ನಲಿವ ಮಕ್ಕಳ ಕಂಡು ಕನ್ನಡ
ಲಲನೆ ಸಂತಸಪಟ್ಟು ಹರುಷದೊಳುಬ್ಬಿ ಕಂಗಳಲಿ ॥
ಜಲವ ಸುರಿಸುವ ಭಾಗ್ಯ ನೋಡುವ
ಚಲುವ ಕಾಲವು ಬಂದಿತಿಂದಿಗೆ
ಬಲಿತ ಸಂಭ್ರಮದಿಂದ ಪಿಡಿಸುವುದು ದೇಶದಭಿಮಾನ ॥೭॥

ಉದಿಸಿ ಬಂದೀ ನಾಡು ವಿಭವಹ
ತುದಿಯನೇರಲಿ ಮತ್ತೆಯಲ್ಲಿಂ
ದುದರದಿರಲದು ಭಾರತಕೆ ಘನ ಭೂಷಣಾಗುತಲಿ ॥
ಬುಧರು ಜ್ಞಾನ್ಮೆಯ ತೋರಿ ಜನರೊಳು
ಮುದವ ಬೀರುತಲಿರಲು ಪುಣ್ಯದ
ಸದನ ಗದುಗಿನ ವೀರನಾರಾಯಣನು ತಾನೊಲಿವ ॥೮॥

■

# ಬಿಡಿ ಪದ್ಯಗಳು

ನಾರಾಯಣರಾಯರು ಸಂದರ್ಭಕ್ಕೆ ತಕ್ಕಂತೆ ಸ್ವಾಗತ ಗೀತೆಗಳನ್ನು ರಚಿಸಿದ್ದಾರೆ. ಅದರಲ್ಲಿ ಅವರ ಪ್ರಸಿದ್ಧ ನಾಡಗೀತೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಈ ಗೀತೆಯನ್ನು ೧೯೨೪ರ ಡಿಸೆಂಬರದಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಮಹಾತ್ಮಗಾಂಧೀಜಿಯವರ ಸಮ್ಮುಖದಲ್ಲಿ ಹಾಡಲಾಯಿತು. ಈ ಸ್ವಾಗತಗೀತೆಯನ್ನು ಸುಶ್ರಾವ್ಯವಾಗಿ ಹಾಡಿದವರು ಗವಾಯಿ ಸುಬ್ಬರಾಯರು. ಈ ನಾಡಗೀತೆಯು ವಂದೇ ಮಾತರಂದಷ್ಟೇ ಪ್ರಿಯವಾಗಿದೆ.

"ಗೆಲುಬರಿ ರಾಷ್ಟ್ರೀಯ ಮಹಾಸಭೆಗೆ"–೧೯೩೫, ದಯಮಾಡಿ । ದಯಮಾಡಿ ಕನ್ನಡದ ಮನ್ನೆಯರ್–೧೯೩೭, ೧೯೩೭ರಲ್ಲಿ ಜಮಖಂಡಿಯಲ್ಲಿ ಜರುಗಿದ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕಾಗಿ ಒಂದು ವಿಶೇಷ ಗೀತೆಯನ್ನು ಹೇಳಿದರು.

"ರನ್ನ ಕನ್ನಡದಿ ಹುಡಿಯು ಮುತ್ತಿಕೆಳಗೆಡಿಸುವತೆರದಿ, ಸೇರದೆನ್ನ ನುಡಿಯ ಮೋಹ ಬಿಡಿಸಿ" ಕರ್ನಾಟಕ ಏಕೀಕರಣದ ಆಶಯವನ್ನು ವ್ಯಕ್ತಪಡಿಸುವ ಮೂಲಕ ಸ್ವಾಗತವು, ಸ್ವಾಗತವು ಕನ್ನಡದ ಪುತ್ರರಿಗೆ, ಎಂದು ಹೇಳಿದ್ದಾರೆ.

'ದಯಮಾಡಿ ! ಕನ್ನಡದ ಮನ್ನೆಯರೇ – ೧೯೬೧ರ ಡಿಸೆಂಬರ ತಿಂಗಳಲ್ಲಿ ಗದಗಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಗೀತೆ ಹೀಗೆ ಹಲವಾರು ಸ್ವಾಗತ ಗೀತೆಗಳನ್ನು ಬರೆಯುವುದರ ಮೂಲಕ ತುಂಬಾ ಪ್ರಸಿದ್ಧಿಗೆ ಬಂದರು. ಗದುಗಿನಲ್ಲಿ ನಡೆದ ಜಿಲ್ಲಾ ಕವಿ ಸಮ್ಮೇಳನದಲ್ಲಿ ತಮ್ಮ ಸ್ವಾಗತ ಭಾಷಣ ಮಾಡುತ್ತಾ ಈಗ ಮತ್ತೆ ಹೊಸ ಹುರುಪಿನ ಕವಿಗಳು ಹುಟ್ಟಿ ಹೊಸ ರೀತಿಗಳಿಂದ ಅವಳ ಪೋಷಣೆಯನ್ನು ಮಾಡತೊಡಗಿರುವರು. ಅವರ ಹೊಸ ಭಾವಗಳು ನಮ್ಮ ಕನ್ನಡ ಕಾವ್ಯಗಳನ್ನು ಅಂದಗೊಳಿಸುತ್ತವೆ. ಕನ್ನಡ ಕಾವ್ಯದ ವೈಶಿಷ್ಟ್ಯವಾದ ಆದಿಪ್ರಾಸವನ್ನು ಬಿಟ್ಟುಕೊಡಲು ಅವರ ಮನಸ್ಸು ಒಪ್ಪಲಿಲ್ಲ. ಅವರ ವಿಚಾರದಲ್ಲಿ ಬರಿಯ ಶಬ್ದಗಳನ್ನು ನೋಡದೆ ಕವಿಯ ಅಂತರಂಗದಲ್ಲಿ ಹೊಕ್ಕು ಅವರು ಬರೆಯುವ ಶಬ್ದಗಳಲ್ಲಿ ಅಡಕವಾಗಿರುವ ರಸ ಭಾವಗಳನ್ನು ಹೊರಗೆಳೆದು ತಿಳಿದುಕೊಂಡರೆ ಆ ಕಾವ್ಯದ ಸ್ವಾರಸ್ಯವು ತಿಳಿಯುವುದು. ಕಾವ್ಯದ ಬಗೆಗೆ ಅವರ ಖಚಿತ ಅಭಿಪ್ರಾಯವಾಗಿತ್ತು.

■

## ನಾಡಗೀತೆಗಳ ಇತರ ಹಾಡುಗಳು :

೧. ರಾಗ : ಬಾಗೇಶ್ರೀ ತಾಳ : ಝಂಪೆ

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ।
ಬದುಕು ಬಲುಹಿನ ನಿಧಿಯು ಸದಭಿಮಾದನ ಗೂಡು ॥ಪಲ್ಲ॥

ರಾಜನ್ಯರಿಪು ಪರಶುಧರನ ಜನನಿಯ ಹಾಡು ।
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು ॥
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು ।
ತೇಜವನು ನಮಗೀವ ವೀರವೃಂದದ ಬೀಡು ॥೧॥

ಲೆಕ್ಕಿಗ ಮಿತಾಕ್ಷರರು ಮೆರೆದು ಬೆಳದಿಹ ನಾಡು ।
ಜಕ್ಕಣನ ಶಿಲ್ಪಿಕಲೆಯದ್ಭುತದ ಕರುಗೋಡು ॥
ಚೊಕ್ಕ ಮತಗಳ ಸಾರಿದವರಿಗಿದು ನೆಲವೀಡು ।
ಬೊಕ್ಕಸದ ಕಣಜ ಜಯಸಿರಿಯು ನಲಿಯುವ ನಾಡು ॥ ೨ ॥

ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು ।
ಕಾವೇರಿ ಗೋದೆಯರು ಮೈದೊಳೆವ ನಲುನಾಡು ॥
ಆವಗಂ ಸ್ಫರ್ತಿಸುವ ಕಬ್ಬಿಗರ ನಡೆಮಾಡು ।
ಗಕಾವ ಗದುಗಿನ ವೀರನಾರಾಯಣನ ಬೀಡು ॥ ೩ ॥

೧೯೨೪ರಲ್ಲಿ ಡಿಸೆಂಬರ್ ತಿಂಗಳಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಿದ ಸ್ವಾಗತ ಗೀತೆ.

೨. ರಾಗ : ಬಾಗೇಶ್ರೀ ತಾಳ : ಝಂಪೆ

॥ ಗೆಲು ಬರಲಿ ಭಾರತದ ರಾಷ್ಟ್ರೀಯ ಮಾಸಭೆಗೆ ॥ ಪಲ್ಲ॥
॥ ಹಲವು ತೆರ ಜನಹಿತಕೆ ಹೆಣಗುತಿಹ ಮಾಸಭೆಗೆ ॥ ಉಪಪಲ್ಲ ॥

॥ ಹಿಂದು ಮಹಮ್ಮದಿ ಫಾರ್ಸಿ ಕ್ರಿಸ್ತಿಯಸ್ಪೃಶರೆಂದು
॥ ಮುಂದುರಿಸಿ ಹೆಚ್ಚಿಸಿದ ಒಳಜಗಳ ಕೊಂದು
॥ ಬಂಧು ಭಾವವ ಬಿತ್ತಿ ನಾಡ ಹೇವವ ತಂದು
॥ ಒಂದಪ್ಪ ತೆರದೈಕ ಸಾಹಸದ ಸಭೆಗಿಂದು ॥ ೧ ॥

॥ ಹಳ್ಳಿಗರು ತಾಯ್ದೇರು ಕೆಲಸಗೇಡೆಂತೆಂಬ
॥ ಕಳ್ ಹುಳುವನು ತಳ್ಳಿ ನೀರುಣಿಸಿ ತಿಳಿವೆಂಬ
॥ ಒಳ್ಳೆ ಪರಿಯಲಿ ಫಲವನೀವಂತೆ ನಾಡೆಂಬ
॥ ಬಳ್ಳಿಯನು ಬೆಳೆಯಿಸಲು ನಿಂತ ಸಬ್ಬಕೆ ತುಂಬ ॥ ೨ ॥

॥ ಕೈಗೆಲಸ ವ್ಯಾಪಾರ ಬೇಸಾಯ ಉದ್ಯೋಗ
॥ ನೀಗೆ ನಾಡೊಳು ಬಂದ ಬಡತನಗಳನುಭೋಗ
॥ ಹೋಗಿಯುಜ್ಜುಗ ಮರಳಿ ಬದುಕುವೊಲು ಸದ್ಯೋಗ
॥ ಬೇಗದಿಂ ಬರುವಂತೆ ಯತ್ನಿಸುವ ಸಭೆಗೀಗ ॥ ೩ ॥

॥ ಕನ್ನಡಿಗರೊಡಗೂಡಿ ಭಿನ್ನಪ್ರಾಂತವ ಮಾಡಿ
॥ ಮನ್ನಣೆಯ ನೀಡಲಿಕೆ ಬಿನ್ನವಿಸೆ ದಯ ನೀಡಿ
॥ ಇನ್ನಾಣ್ಮರೀವಂತೆ ಸನ್ನಿವೇಶವ ಹೂಡಿ
॥ ಧನ್ಯರನು ಮಾಳ್ಪ ಘನದುನ್ನತದ ಸಭೆಗೋಡಿ ॥೪॥

॥ ಸಿರಿ ಸೌಖ್ಯ ಸ್ವಾತಂತ್ರ್ಯ ಒಕ್ಕಟ್ಟು ಒಪ್ಪಂದ
॥ ಭರತ ದೇಶದಿ ಬಿಡದೆ ತರಲು ಜನುಮಕೆ ಬಂದ
॥ ವರುಷ ವೈವತ್ತರಿದ ಮಾಸಭೆಗೆ ಭರದಿಂದ
॥ ಮೆರೆವ ಗದುಗಿನ ವೀರನಾರಾಯಣ ನೊಲವಿಂದ ॥ ೫ ॥

ಸಂದರ್ಭ : ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನ, ೧೯೩೫

೩. ರಾಗ : ಮಧ್ಯಮಾವತಿ ತಾಳ : ಝಂಪೆ

ದಯಮಾಡಿ ! ದಯಮಾಡಿ ! ಕನ್ನಡದ ಮನ್ನೆಯರೆ ।
ದಯಮಾಡಿ ! ನಿಮ್ಮಡಿಯ ಹುಡಿಯಿಲ್ಲಿ ಬೀಳುವರೆ ॥ ಪಲ್ಲ ॥

ಹರಿಹರನು ಬುಕ್ಕರಸು ನಿರುಮಿಸಿದ ರಾಜ್ಯದಲಿ ।
ಹಿರಿಕೃಷ್ಣ ನರಪತಿಯ ವೈಭವದ ನಗರದಲಿ ॥
ಪರಮ ಮತಗಳ ಕಾಯ್ದ ವೀರ ಕರುನಾಡಿನಲಿ ।
ವಿರೂಪಾಕ್ಷ ಭುವನೇಶ್ವರಿಯ ತವರೂರಿನಲಿ ॥ ೧ ॥

ಮುಳುಗುತಿರೆ ಸಂಸ್ಕೃತಿಯನೇಳಿಸಿದ ರಾಜ್ಯದಲಿ ।
ಇಳೆಗೆ ಹೊನ್ನಿನ ಮಳೆಯ ಕರೆಯಿಸಿದ ನಗರದಲಿ ॥
ಬೆಳೆದು ಕನ್ನಡ ನುಡಿಯು ಬಲು ಮೆರೆದ ನಾಡಿನಲಿ ।
ಹೊಳೆದ ವಿದ್ಯಾರಣ್ಯ ಮುನಿಯ ತಪದೂರಿನಲಿ ॥ ೨ ॥

ಮತಭೇದ ತೊರೆದು ಜನರೊಂದಾದ ರಾಜ್ಯದಲಿ ।
ಕ್ಷಿತಿಗೆ ಮಿಗಿಲಾಗಿ ಮೆರೆದೀ ವಿಜಯನಗರದಲಿ ॥
ಪೃಥಿವಿಯನೆ ಬೆರಗಿಸಿದ ಸತಿಜನರ ನಾಡಿನಲಿ ।
ಶತವಾರು ವರುಷಗಳ ನೆನೆವರಿಕೆಯೊಸಗೆಯಲಿ ॥ ೩ ॥

೧೯೩೬ ಡಿಸೆಂಬರ್ ೨೫ ರಿಂದ ೨೮ರ ವರೆಗೆ ನಡೆದ ವಿಜಯನಗರ ಸಾಮ್ರಾಜ್ಯ ಸ್ಮರಣೋತ್ಸವಕ್ಕೆ ಬರೆದ ಗೀತೆ. ಉತ್ಸವದ ಪ್ರಾರಂಭಕ್ಕೆ ಹಾಡಿಸುವುದರ ನಿಲುವಿನಿಂದ ಸ್ವಾಗತ ಪದಗಳನ್ನು ಕವಿಗಳು ಕಳುಹಿಸಬೇಕೆಂದು ಕೇಳಿಕೊಳ್ಳಲಾಯಿತು ಮತ್ತು ಬಂದ ಪದಗಳಲ್ಲಿ ಯೋಗ್ಯವಾದುದನ್ನು ಆರಿಸಲಿಕ್ಕೆ ಶ್ರೀ ಮುದವೀಡುಕರ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಒಂದು ಉಪಮಂಡಳವು ನಿಯಮಿಸಲ್ಪಟ್ಟಿತು. ಆ ಸಮಿತಿಯು ಗದುಗಿನ ಶ್ರೀ ಹುಯಿಲುಗೋಳ ನಾರಾಯಣರಾಯರ ಪದ್ಯವನ್ನು ಆರಿಸಿದರು.

೪. ರಾಗ : ಸಾರಂಗ ತಾಳ : ರೂಪಕ (ದಾದರಾ)

ಬನ್ನಿ ಬನ್ನಿ ದಯಮಾಡಿಸಿ ಕನ್ನಡ ನುಡಿತಾಯ ಸಭೆಗೆ ॥ ಪಲ್ಲ ॥
ಬಿನ್ನಪವಿದು ಹಂಗಿಗರಿಹೆವೆಂದು ಶರಣು ಶರಣು ತಮಗೆ ॥ ಅ.ಪ ॥

ಚೆನ್ನ ಜಂನುಕೇಶ ನಿರುತ ಕಾಯ್ವನಿಲ್ಲಿ ಕೃಪೆಗೆ ನೀಡಿ ।
ರನ್ನನು ಕವಿ ಚಕ್ರವರ್ತಿ ಮೆರೆದ ಗದಾಯುದ್ಧ ಮಾಡಿ ॥
ಜನ್ನನ ಮತ ವೀರಶೈವ ಮತದ ಜನಗಳಿಹರು ಕೂಡಿ ।
ಕನ್ನಡರಸನು ಚಾಳುಕ್ಯನು ಆಳ್ವ ನಾಡು ಇದುವೆ ನೋಡಿ ॥೧॥

ಮುನ್ನವೊಮ್ಮೆ ಕನ್ನಡಮ್ಮ ತಣಿದಳಿಲ್ಲಿ ಕಣೀದು ನಲಿದು ।
ಅನ್ಯನುಡಿಯ ಬಲೆಗೆ ಸಿಲುಕಿ ಬಳಲುತೀಗ ಕರೆವಳುಲಿದು ॥
ಇನ್ನು ಬಿಡದೆ ನಾವು ನೀವು ಭಿನ್ನರಲ್ಲವೆಂದು ತಿಳಿದು ।
ಮನ್ನಿಸುವುದು ನೆರವ ನೀವು ಘನ್ನಮನಸಿನಿಂದಲೊಲಿದು ॥ ೨ ॥

ರನ್ನ ಕಡರಿ ಹುಡಿಯು ಮುತ್ತಿ ಕಳೆಗೆಡಿಸುವ ತೆರದಿ ಸೇರಿ ।
ಧನ್ಯ ನುಡಿಯ ಮೋಹ ಬಿಡಿಸಿ ಕನ್ನಡದಲಿ ಹೇಮನೂರಿ ।
ಕನ್ನಡನುಡಿಯರಿದು ಮೆರೆವ ಘನ್ನ ಚೆಲುವತನವ ತೋರಿ ।
ಉನ್ನತಿಕೆಯ ಮಾಳ್ವ ಮನದಿ ಜಮಖಂಡಿಗೆ ದಯವ ಬೀರಿ ॥ ೩॥

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ (ಜಮಖಂಡಿ)ದಲ್ಲಿ ಹಾಡಿದ ಸ್ವಾಗತ ಪದ್ಯ

**೫. ರಾಗ : ಸಾರಂಗ ತಾಳ : ಝಂಪೆ**

ಸ್ವಾಗತವು ಸ್ವಾಗತವು ಕನ್ನಡದ ಪುತ್ರರಿಗೆ ॥
ಸ್ವಾಗತವು ಸರಸತಿಯ ಮನ್ನಣೆಯ ಪಾತ್ರರಿಗೆ ॥ ಪಲ್ಲ ॥

ಮಕ್ಕಳಿಗೆ ಬೇಕಿರುಗ ಚೊಕ್ಕ ಶಿಕ್ಷಣವಿಕ್ಕಿ ।
ಅಕ್ಕರಿಗರನು ಬೆಳಸಿ ತಕ್ಕ ನಾಗರಿಕರನು ।
ಕಕ್ಕುಲತೆಗೈದು ಒಳಭೇದಗಳ ಮರೆಸಿ ।
ಒಕ್ಕಟ್ಟು ಹುಟ್ಟಿಸುವ ಕಾರ್ಯ ಕೈಗೊಂಡವರಿಗೆ ॥ ೧ ॥

ವಿಶದ ಕರ್ನಾಟಕದ ನಡು ತಾನೊಂದಾಗಿ ।
ಹೊಸ ಹುರುಪನಿಂದೆಲ್ಲ ರೀತಿಗಳ ಹದನದಲಿ ॥
ಯಶ ಪಡೆದು ನಾಡಿಗರ ಶಿಕ್ಷಣಕೆ ಕನ್ನಡದ
ವಿಶ್ವವಿದ್ಯಾಲಯಕೆ ಹಸಿವಾಂತು ಬಂದರಿಗೆ ॥ ೨ ॥

ಕನ್ನಡಿಗರೊಂದೆಂಬ ಭಾವನೆಯು ಬೇಕಾಗಿ
ಇನ್ನೆದ್ದು ಗಿಡವಾಗಿ ಹಣ್ಣು ಬರಲೆಂತೆಂದು ॥
ಘನ್ನ ಗದುಗಿನ ವೀರ ನಾರಾಯಣನ ದಯದಿ ।
ಚೆನ್ನ ಬಿತ್ತುಗಳೂಳ ಬೇಕೆಂಬರೋಲಗಕೆ ॥ ೩ ॥

ವಿಶ್ವವಿದ್ಯಾಲಯ ಪರಿಷತ್, ಬೆಳಗಾವಿ ೧೯೪೦

**೬. ರಾಗ : ತಿಲಕ ಕಾಮೋದ ತಾಳ : ಝಂಪೆ**

ಬೆಳಗಲೆಂದಿಗು ನಮ್ಮ ಚಲುವ ಕನ್ನಡನಾಡು ॥ ಪಲ್ಲ ॥
ಇಳೆಯೊಳಗೆ ಗೆಲು ಪಡೆದ ಭಾರತದ ಒಳನಾಡು ॥ ಅ.ಪ ॥

ತನು ಬೇರೆಯಾದರೆಯು ಜನ ಹೃದಯವೊಂದಾಗಿ
ಜನಗಳೊಳಜಗಳಳಿದು ವಿಶ್ವಾಸ ತುಂಬಾಗಿ
ಕೊಸರಿ ಹೇವವು ನಾಡಿನೇಳ್ಗೆಯಿಂ ಚಂದಾಗಿ
ಘನತೆ ಗೌರವ ಬೆಳೆದು ಅಧ್ಯಾತ್ಮದಿಂಬಾಗಿ ॥ ೧ ॥

ತೋರ ಕಾವೇರಿ ಕೃಷ್ಣೆಯರು ಪಾವನ ಮಾಡೆ
ನೀರುಣಿಸಿ ತುಂಬೆ ಘಟಪೆಯರು ಬೆಳೆಗಳ ನೀಡೆ
ಚಾರು ಕಲೆಗಳು ಬೆಳೆದು ಗೊಮ್ಮಟನು ಮೇಲ್ನೋಡೆ
ಶ್ರೀರಂಗ ವಿರುಪಾಕ್ಷ ಚಾಮುಂಡಿ ಕಾಪಾಡೆ ॥ ೨ ॥

ಚಿಕ್ಕತನ ಬಿಟ್ಟೈಕ್ಯ ಶಾಂತಿಗಳ ಸಾಧನದಿ
ಸಕ್ಕರೆಯು ಬೆರೆತ ಸವಿಹಾಲಿನೊಲು ಸಮರಸದಿ
ಕಕ್ಕುಲತೆ ಸ್ಮರಣೆಯೊಳೆಲ್ಲರಿರಲೊಮ್ಮತದಿ
ಚೊಕ್ಕ ಗದುಗಿನ ವೀರನಾರಾಯಣನ ದಯದಿ ॥ ೩ ॥

ಸಂಯುಕ್ತ ಕನಾಟಕ, ೧–೧೧–೧೯೫೫

೭. ರಾಗ : ನಾಂಟಿ ತಾಳ : ಝಂಪೆ

ಸ್ವಾಗತವು ಸ್ವಾಗತವು ಸ್ವಾಗತವು ಸಕಲರ್ಗೆ
ಬಾಗುವೆವು ನಿಜದಿಂದ ನಾಗರಿಕರಪ್ಪರ್ಗೆ ॥ ಪ ॥
ಬಾಗಿಸಿದ ಕರ್ನಾಟಕರ ನಾಡ ಕೂಡಿಸುವ ।
ಯೋಗವನು ತರಲೆಂದು ರಾಗದಿ ಬಂದರ್ಗೆ ॥ ಅನು ಪಲ್ಲ ॥

ಪಲ್ಲವರು ಚಾಲುಕ್ಯ ಕದಂಬ ಗಂಗರಸು
ಬಲ್ಲಾಳ ನೃಪ ರಾಷ್ಟ್ರಕೂಟಾದಿ ಪಾಂಡ್ಯರು
ಬಲ್ಲಿದರು ಜಸವಡೆದ ವಿಜಯನಗರದ ರಾಯ
ರೆಲ್ಲಾಳಿದ ನಾಡಿನಲ್ಲಿ ಕೂಡಿದ ತಮಗೆ ॥ ೧ ॥

ಇನ್ನು ಜನಕಧಿರಾವನ್ನೀವ ಭೂಮಿಪನ
ಮನ್ನಣೆಯ ಪಡೆಯುತ್ತಲುನ್ನತಿಗೆ ಯತ್ನಿಸುವ
ಘನ್ನ ಹಿಂದುಸ್ಥಾನದಲಿ ಬಾಳ್ವ ನಾವೊಂದು
ಕನ್ನಡಿಗರಿಹವೆಂದ ಪೇಳಲ್ಕೆ ಬಂದರ್ಗೆ ॥ ೨ ॥

ನುಡಿಯ ತತ್ವವೆ ರಾಜ್ಯ ಪದ್ಧತಿಗೆ ಲೇಸಹುದು
ನುಡಿಗನುಸರಿಸಿ ಬೇರೆ ಕರ್ನಾಟಕದ ನಾಡು
ಒಡೆಯ ಗದುಗಿನ ವೀರನಾರಾಯಣನ ದಯದಿ
ಒಡನೆ ಸಿಗಲೆಂತೊಂದು ಬೇಡ ಬಂದಿಹ ತಮಗೆ ॥ ೩ ॥

೧೯೪೦ರಲ್ಲಿ ಕರ್ನಾಟಕ ಪರಿಷತ್ತು ಧಾರವಾಡದಲ್ಲಿ ಸಭೆ ಸೇರಿದ ಸಂದರ್ಭದಲ್ಲಿ ಬರೆದ ಸ್ವಾಗತ ಗೀತೆ \\

೮. ರಾಗ : ಸಾರಂಗ ತಾಳ : ಝಂಪೆ

॥ ದಯಮಾಡಿ ದಯಮಾಡಿ ಕನ್ನಡದ ಮನ್ನೆಯರೆ ॥
॥ ಜಯನಯವತಹ ನಿಮ್ಮ ಅಡಿಹುಡಿಯು ಬೀಳೂವರೆ ॥ ಪಲ್ಲ ॥
॥ ಕ್ಷೇತ್ರವಿದಿ ! ಜಕ್ಕಣನ ಕಲೆ ತೋರುಮನೆಯಲ್ಲಿ
॥ ಗಾತ್ರದಲ್ಲೊಳಗೊಂಡ ಚೆಲು ಬಟ್ಟಕೇರಿಯಲಿ ॥
॥ ಚೈತ್ರ ಗುರು ತೋಂಟದ ಸ್ವಾಮಿಗಳ ಸದರಿನಲಿ
॥ ಶ್ರೀ ತ್ರಿಕೂಟೇಶ್ವರನ ದಿವ್ಯ ಸನ್ನಿಧಿಯಲ್ಲಿ ॥ ೧ ॥

॥ ಚಾಮರಸುಕವಿ ಕುಮಾರವ್ಯಾಸರಿದ್ದೂರಿನಲಿ
॥ ಸ್ವಾಮಿ ತೋಂಟದರ ಇನಘಂಟುವಿನ ತಾಣದಲಿ
॥ ಪ್ರೇಮದಲಿ ನಿಜ ನಾಟ್ಯ ಕಲೆ ಬೆಳೆದ ಠಾವಿನಲಿ
॥ ನೇಮದಲಿ ಸಿರಿಸುಖವು ವರ್ಧಿಸುವ ಗ್ರಾಮದಲಿ ॥ ೨ ॥

॥ ಸಂತತದಿ ಕನಡದ ನಾಡಿ ನುಡಿ ಹೇವದಲಿ
॥ ಅಂತವಿಲ್ಲದ ಪ್ರೇಮವಿಶ್ವಾಸ ಧರಿಸುತಲಿ
॥ ಸಂತಕ್ರತು ಋಷಿಯ ಬಿನ್ನಹಕೆ ಗದುಗಿನಲಿ
॥ ನಿಂತ ಶ್ರೀ ವೀರನಾರಾಯಣನ ಸನಿಹದಲಿ ॥ ೩ ॥

ಗದುಗಿನ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಾಡಿರುವ ಸ್ವಾಗತ ಗೀತೆ.

೯. ರಾಗ : ಸಾರಂಗ ತಾಳ : ಆದಿ

॥ ಸ್ವಾಗತ ಸ್ವಾಗತ ಶ್ರೀಗಳ ವೃಂದಕೆ ॥ ಪಲ್ಲ ॥
॥ ಬಾಗಿ ನಮಿಸುವೆವು ಮಹಾಬುಧ ಜನಕೆ ॥ ಅ. ಪ ॥
॥ ಕಡಿಮೆಯ ಕ್ಷಮಿಸುವ ಕೃಪೆಯದು ನಿಮ್ಮದು ॥
॥ ಕಡು ಮುದು ಕೊಡುವುದು ಭಾಗ್ಯವು ನಮ್ಮದು ॥ ೧ ॥

॥ ಮಧ್ಯಮತದ ಜನರೊಂದಾಗಿಸಲಿಕೆ ।
॥ ಸದ್ವಚನದಿ ಜನಮನವೊಲಿಸಲಿಕೆ ।
॥ ಹೃದ್ವಿಶಾಲತೆ ಬೆಳಸಲು ಕೋರಿಕೆ ॥
॥ ವಿದ್ವಜ್ಜನರಿಗೆ ಮಾಡುವೆವರಿಗೆ ॥ ೨ ॥

॥ ಸಾರ ಕನ್ನಡ ಭಾರತ ರಚನೆಗೆ ।
॥ ಪ್ರೇರಣೆ ಕುವರವ್ಯಾಸ ಹೋಗಿದೆ ॥
॥ ಪೂರಯಿಸಿರುವೀ ಕ್ಷೇತ್ರ ಗದುಗಿಗೆ ॥
॥ ವೀರ ನಾರಾಯಣನ ಸನ್ನಿಧಿಗೆ ॥ ೩ ॥

೧೯೬೪ನೇ ಇಸವಿಯಲ್ಲಿ ಗದುಗಿನಲ್ಲಿ ಜರುಗಿದ ಮಾಧ ಮಹಾಮಂಡಲದ ಅಧಿವೇಶನದಲ್ಲಿ ಹಾಡಿದ ಸ್ವಾಗತ ಪದ್ಯವು.

೧೦. ರಾಗ : ನಾಂಟಿ ತಾಳ : ಝಂಪೆ

(ತನನ್ನನರಿ ತಾ ಅಥವಾ ಸದ್ಗುಣಾರ್ನವಾ ಎಂಬಂತೆ)
ಸಹಜೀವನ ಶಾಂತಯುತ ಘನ ॥ ಪಲ್ಲ ॥
ಮಹಿಶಾಂತಿಗೆ ಇದುವೆ ಪ್ರಧಾನ ॥ ಅ. ಪ ॥
ಸಹಕಾರ ಸಹವಾಸ । ಸಹನ ಗುಣವಿಕಾಸ ॥
ಬಹುಪ್ರೇಮ ವಿಶ್ವಾಸ । ಇಹವೈ ವಿಧಾನ ॥ ೧ ॥

ಇರು ಇರುಗೊಡು ಎಂಬ ಪರತತ್ವದವಲಂಬ
ಧರಿಸುವದೆ ಜಗದುಂಬ ॥ ಹಿರಿಯ ಸಾಧನ ॥ ೨ ॥

ಪಂಚಶೀಲ ತತ್ವ । ಪ್ರಪಂಚಕ್ಕೆ ಸತ್ಯ ।
ವಂಚಿಸದೆ ನಿತ್ಯ । ಆಚರಿಪುದೆ ಹದನ ॥ ೩ ॥

೧೧. ರಾಗ : ನಾಂಟಿ ತಾಳ : ಆದಿ

ಭಾರತ ಮಾತೆ ಜಯ ಜಯ ಸನ್ನುತೆ ।
ಚಾರು ಪದಕೆ ನಮಿಸುವೆ ತಲೆಬಾಗುತೆ ॥ ಪಲ್ಲ ॥

ಶ್ರುತಿ ಸ್ಮೃತಿ ಶಾಸ್ತ್ರ ಪುರಾಣ ಸಂಸ್ಕೃತಿ ।
ಅತಿ ಜಲಯುತ ನದೀ ಸಾಗರ ಸ್ನಾತೆ ॥
ರತ್ನ ಕನಕ ಮಣಿ ವಜ್ರ ವಿಭೂಷಿತೆ ।
ಭೃತ ಫಲ ಧಾನ್ಯ ಕ್ಷೀರ ನಿವೇದಿತೆ ॥ ೧ ॥

ಧೀರ ಜ್ಞಾನರತ ಮುನಿಗಣ ಪೂಜಿತೆ ।
ವೀರ ರಾಮಕೃಷ್ಣಾರ್ಜುನ ವಂದಿತೆ ।
ನಾರೀ ಸೀತಾ ದ್ರೌಪದೀ ಸ್ತುತೆ ॥
ಮಾರುತಿ ಗರುಡಾದ್ಯನುಚರ ಸೇವಿತೆ ॥ ೨ ॥

ಮೂವತ್ತು ಕೋಟಿ ಜನರಧಿದೇವತೆ ।
ಆವಗಮೆಲ್ಲರ ಸಾರಜೀವಿತೆ ।
ಪಾವನ ಮೂರ್ತಿಯೇ ಶಾಂತ ಭಾವಿತೆ ।
ಭಾವಿಕ ಕರ್ನಾಟಕ ಜನವಂದಿತೆ ॥ ೩ ॥
ಮೂಡಿದುದು ಮೂಡಿದುದು ಕನ್ನಡ ರವಿಬಿಂಬ ।
ನಾಡಿಡಿದ ನಿಸಿ ಹರಿದು ಬೆಳಕಾಯ್ತು ನೆಲದುಂಬ ॥

ಹೊತ್ತಿನೊಳಗೆಚ್ಚರಿಸಿ ಕವಿಕೋಳಿ ಕರೆಯುತಿರೆ
ಮುತ್ತಿರುವ ಪರವಶತೆಯಾ ಮಂಜು ಕೂಗುತಿರೆ
ಬಿತ್ತರಿಪ ಜಾತಿ ಭೇದದ ಚಿಕ್ಕೆ ಸರಿಯುತಿರೆ
ಮತ್ತು ನವೊಂದೆಂಬ ತಿಳಿಗಾಳಿ ತಿರುಗುತಿರೆ ॥

ವೈಭವವ ಬಯಸಿ ಚಿತ್ಪಕ್ಷಿ ಹಾರಾಡುತಿರೆ
ಸ್ವಾಭಿಮಾನದ ಸುಧೆಯ ಕವಿಭ್ರಮರ ನೀಡುತಿರೆ
ಶೋಭೆತಹ ಧನಲಕ್ಷ್ಮೀ ಕಂದೆರದು ನೋಡುತಿರೆ ॥

ಬಯಕೆ ಕೈಗೂಡಿತೆಂದೊರೆದು ಬನಗಳು ಸಾರೆ
ಜಯಜಯತು ಕರ್ನಾಟಕೆಂಬ ಧನಿ ನಭಕೇರಿ
ನಯಪ್ರೇಮ ಕನ್ನಡಿಗರೊಬ್ಬರೊಳು ಬೀರೆ
ದಯವ ಗದುಗಿನ ವೀರನಾರಾಯಣ ನೀ ತೋರೆ ॥
॥ ಬನ್ನಿರೋ ನೋಡ ಬನ್ನಿರೋ ॥ ಚೆನ್ನಾದ ಭಾರತ ಸ್ವಾತಂತ್ರ್ಯ ಹಬ್ಬ ॥
॥ ಹಿಂದೀಯರಿಂದಿಗೆ ಬಂದಿದ್ದ ಪರದೇಶ ಬಂಧನದಿಂದಲಿ ಮುಕುತಿ
॥ ಯೆಂದು ॥ ತಿಳಿ ।ದೊಂದಾಗಿ ಎಲ್ಲರು ಚಿತ್ರ ತಂದು ॥ ನಂದನ
॥ ಹುರುಪಿಂದ ಮುಂದೆ ಸಾರಿ ಬಂದು ಚಂದಾಗಿ ನುಡಿಯಿರಿ ಜಯ
॥ ಹಿಂದವೆಂದು॥ ೧ ॥ ಶುದ್ಧ ಕೈನೂಲಿನ ಖದ್ದರ ತಕ್ಕೊಂಡು । ಎದ್ದಿ
॥ ಕೇಸರಿ ಹಸಿರು ಬಿಳಿಯ ಬಣ್ಣ ॥ ಮತ್ತೆ । ತಿದ್ದಿ ಬರೆದು ನಡುವೆ ಚಕ್ರ
॥ ದ ಕಣ್ಣ ॥ ಸುಧ್ವಜ ಮಾಡಿ ಕಟ್ಟುದ್ದನ್ನಕೋಲಿಗೆ । ಮುದ್ದಾಗಿ ॥
ಹಿಡಕೊಂಡು ನಡೆದು ಬರ್ರೆಣ್ಣ॥ ೨ ॥ ಭೇರಿಯು ಕಾಳೆ ॥ ನಗಾರಿ
ಡಂಕೆಯು ತುತ್ತೂರಿ ಹಲಗೆ ಡೊಳ್ಳು ಭಜಂತ್ರಿ ತಾಳ ॥
॥ ನ । ಪೂರಿ ತಮಟೆ ಗಂಟೆ ಕರಡಿಸಮ್ಮಾಳ ಸಾರಂಗಿಮೃದಂ
॥ ಗ ತಂಬೂರಿ ಮದ್ದಳೆ । ಬಾರಿಸಿ ಊದಿಸಿ ಕೂಡಿಸಿ ಮೇಳ ॥ ೩ ॥
॥ ತೊಳೆದು ಅಂಗಳ ಕಟ್ಟಿ ತಳಿರು ತೋರಣಗಟ್ಟಿ । ಬಳೆದು
॥ ಹೊಸ್ತಿಲಕೆ ರಂಗೋಲಿ ಪಟ್ಟಿ ॥ ಥಳಥಳಿಸುವದಲ್ಲಾ ಬೀದಿ ಬಟ್ಟೆ
॥ ಒಳಿತಿಂದ ಉಡುಪಿಂದ ಎಳೆನಗೆ ಮುಖದಿಂದ ಸುಳಿಯುತ

॥ ಬನ್ನಿರಿ ಬಳ್ಳಿಯ ಕಟ್ಟೆ ॥ ೪ ॥ ಸತ್ಯ ಅಹಿಂಸೆಯ ಅಸಹಕಾರಾಸ್ತ್ರ
॥ ಗಳಿಂದ । ಪ್ರತ್ಯಕ್ಷ ಹೋರಾಡಿ ವೈರಿ ಕುತಂತ್ರ । ಕೃತ್ಯಗಳ
॥ ನೀಡಾಡಿ ಪಾರತಂತ್ರ್ಯ ॥ ಹತ್ಯವ ಮಾಡಲು
॥ ಕಷ್ಟದಿ ಲಭಿಸಿತು । ನಿತ್ಯದಿ ಸುಖವನು ಕೊಡುವ ಸ್ವಾತಂತ್ರ್ಯ ॥
॥ ೫ ॥ ಧೀರ ಗಂಭೀರರೆ ವೀರ ಕುಮಾರರೆ ಸಾರಿ ಹೇಳಿರಿ ಸಾರ
॥ ವಾರತೆಯಾ ॥ ಮತ್ತೆ ನಾರೇರೆ ಬೆಳಗಿರಿ ಆರುತಿಯಾ ॥
॥ ಧಾರುಣಿ ಗದುಗಿನ ವೀರನಾರಾಯಣ ಬೀರಿದ ಸ್ವಾತಂತ್ರ್ಯ ॥

## ಧ್ವಜಗೀತೆ

ಏರಿಸಿ ಹಾರಿಸಿ ಭಾರತದ ನಾಡುಗುಡಿ ।
ಮೂರು ಬಣ್ಣದ ಧ್ವಜಕ್ಕೆ ಜಯವೆಂದು ಭೇರಿ ಹೊಡಿ ॥ ಪ ॥

ಹಾಸಿ ಮನೆಯಲಿ ನೇಯ್ದು ಖದ್ದರದ ಬಟ್ಟೆಯಲಿ ।
ಕೇಸರಿ, ಬಿಳಿ, ಹಸಿರು ಬಣ್ಣಗಳ ಪಟ್ಟಿಯಲಿ ।
ಸೂಸಿ ನೀಲಿಯುಟ್ಟು ಚಕ್ರ ನಡು ಮೆಟ್ಟಿನಲಿ ।
ಬೀಸುತಿಹ ಗಾಳಿಯಲಿ ಭಾರತದ ನಿಟ್ಟೆಯಲಿ ॥ ೧ ॥

ಸತ್ಯ, ದಯೆ, ದಮೆ, ಶಾಂತಿ, ಪ್ರೇಮಗಳ ಗುರುತೆಂಬ ।
ಸ್ತುತ್ಯ ಬಣ್ಣದ ನಡುವೆ ಧರ್ಮಚಕ್ರದ ಬಿಂಬ ।
ನಿತ್ಯ ಅಭಯ, ಅಹಿಂಸೆಗಳ ತೋರ್ಪ ಧ್ವಜ ಕಂಬ
ಪ್ರತ್ಯಕ್ಷದಲಿ ನೋಡಿ ವಂದಿಸಿರಿ ಮನದುಂಬ ॥ ೨ ॥

ಖಡಬಡನೆ ಗಾಳಿಯಲಿ ಬೀಸಿ ಶಬ್ದವ ಮಾಡಿ ।
ಛಡಛಡನೆ ಹಗೆಗಳಿದೆ ಬಿರಿವಂತೆ ಹಾರಾಡ ।
ಗುಡಿ ತನ್ನ ಮೊಗವೆತ್ತಿ ನಿಲುವಂತೆ ಮೇಲ್ಮಾಡಿ ॥ ೩ ॥

### ಕೀರ್ತನೆಗಳು

ಸುಮಾರು ೮೫ಕ್ಕೂ ಮಿಕ್ಕಿ ಕೀರ್ತನೆಗಳನ್ನು ಬರೆದಿದ್ದಾರೆ. ದಾಸ ಸಾಹಿತ್ಯವನ್ನು ಓದಿ ಕೊಂಡವರು. ಇವರ ಕೀರ್ತನೆಗಳು ಭಕ್ತಿರಸ ಪ್ರಧಾನವಾಗಿವೆ. ಹಿಂದಿನವರು ಛಂದಸ್ಸಿಗೆ ಗಮನಕೊಟ್ಟಿಲ್ಲ. ಆದರೇ ಭಾಷಾ ಶುದ್ಧತೆ ಹಾಗೂ ಛಂದಸ್ಸನ್ನು ತಮ್ಮ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ. ನಾರಾಯಣರಾಯರ ಕೀರ್ತನೆಗಳಲ್ಲಿ ಆತ್ಮ ನಿವೇದನೆಗಳಿಗಿಂತ ಆರ್ತಭಾವದ ಪ್ರಾರ್ಥನೆಗಳು ಹೆಚ್ಚಾಗಿವೆ. ತಮ್ಮ ಕೀರ್ತನೆಗಳಲ್ಲಿ ಕೃಷ್ಣ, ವಿಷ್ಣು, ಲಕ್ಷ್ಮೀ, ಹನುಮಂತ, ರಾಘವೇಂದ್ರ ಯತಿಗಳು ಇಂತಹವರನ್ನೇ ಸ್ತುತಿಸಿದ್ದಾರೆ.

ಎಂತಹ ಧನ್ಯಳೂ ಯಶೋಧೆ
ಕೊಳಲನೂದಲೇ ಕೃಷ್ಣ
ಇಟ್ಟಂತೆ ಇರುವೆನೋ ಹರಿಯೇ

ಇಂತಹ ಸಾಲುಗಳಲ್ಲಿ ದಾಸರ ಪ್ರಭಾವವಾಗಿದೆ. ಬುಗುರಿಆಡೋ ತಮ್ಮ ಬುಗುರಿಆಡೋ ಇಲ್ಲಿ ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ.

"ಎಂತಹ ಪಾಪವನು ಮಾಡಿರುವನೋ ಶ್ರೀ ಹರಿಯೇ ಎಂಬ ಸಾಲುಗಳೊಂದಿಗೆ ಕೀರ್ತನೆಗಳು ಪ್ರಾರಂಭವಾಗಿವೆ.

ರಾಘವೇಂದ್ರ ಯತಿಗಳನ್ನು ಕುರಿತು ಬರೆದ ಕೀರ್ತನೆಯಲ್ಲಿಯೂ ಅವರ ಆತ್ಮನಿವೇದನೆಯನ್ನು ಕಾಣಬಹುದು.

ಕಥೆಯ ಕಟ್ಟಿದ ನಾಟಕ ಪದ್ಯವ ರಚಿಸಿದನೆಂಬ
ಹೆಮ್ಮೆಯೊಳಿದ್ದೆ । ಯತಿರಾಯಾ ನಿನ್ನ ಸುಚರಿತವ
ಕಥಿಸಲು । ಗತಿಗಾಣದೆ ನಿಂತು ಬಾಯ್ಬಿಡುವೆ
ಮೊರೆಯಯ್ಯಾ ॥

ಐತಿಕ ಜೀವನದ ತಾಪತ್ರಯಗಳು ಮಾನವ ಸ್ವಭಾವ ಇಂತಹ ವಿಷಯಗಳನ್ನು ಪ್ರಸ್ತಾಪಿಸಿರುವುದರಿಂದ ಅವುಗಳಿಗೆ ಸಾರ್ವಕಾಲಿಕ ಮಹತ್ವ ಬಂದಿದೆ.

**ಪುಟ ಸಂಖ್ಯೆ ೭೨ ರಿಂದ ೮೯ ಅವರು ಬರೆದ ಕೀರ್ತನೆಗಳ ವಿಂಗಡನೆ ರವರಿಗೆ ಡಾ. ಶ್ರೀನಿವಾಸ ಹಾವನೂರ ಹಾಗೂ ಶ್ರೀಮತಿ ನಳಿನಿ ವೆಂಕಟೇಶ ಸಂಪಾದಿಸಿದ 'ಸನುಗ್ರದಾಸ ಸಾಹಿತ್ಯ' ಸಂಪುಟ ೨೧ ಭಾಗ ೨ನ್ನು ಅನುಸರಿಸಿದೆ.**

ಕಥೆಯ ಕಟ್ಟಿದೆ ನಾಟಕ ಪದ್ಯವ ರಚಿಸಿದೆ
ನೆಂಬ ಹೆಮ್ಮೆಯೊಳಿದ್ದೆ ಯತಿರಾಯಾ
ನಿನ್ನ ಸುಚರಿತೆಯ ಕಥಿಸಲು
ಗತಿಕಣದೆ ನಿಂತು ಬಾಯ್ಬಿಡುವೆ ಮೊರೆಯಯ್ಯಾ

ಬಡವನು ಮತಿಯೊಳು ಸಿರಿಯೊಳು ಸಹ ಎನ್ನ
ಪಡಿಪಾಟಲನು ಕಡಿದು ಕಾಪಾಡೊ
ಪಿಡಿದು ನಿನ್ನಯ ಪಾದ ತುತಿಸುವೆನೆಂದರೆ

ಸ್ಮರಿಸುವೆ ಮನದೊಳು ನಿರುತದಿ ಯತಿವರ್ಯಾ
ಶ್ರೀ ರಾಘವೇಂದ್ರರಾಯಾ
ಧರೆಯೊಳು ಪರಮ ದಾನಿಗಳ ಹಿರಿಯನೆಂದು
ಅರಿತ ನಾ ಬಂದೆನೊ ಮೂಕನಾಗಿರವೆನೊ

ಮನದೊಳಗಿರುತಿರ್ದ ಭಕುತಿ ಭಾವಗಳು
ಏನಿತೆಂಬುದನು ನೀನೆ ನೋಡಿ
ಮನಸಿನಭಿಷ್ಟವನಿತ್ತು ಕಾಯುವದಯ್ಯಾ
ಮನದೊಳು ನೆನೆಯುವೆ ಹೊರಗಾಡಲಾರದೆ

ಕರುಣಾಳು ಗದುಗಿನ ವೀರನಾರಾಯಣ
ಹರನೆ ಕಳುಹಿಸಿದನೆಂದು ನಾನಿಲ್ಲಿ ಬಂದೇ
ವರ ನಿನ್ನ ಚರಣವೂ ದೊರೆಯ ನಾ ತುತಿಸಲು
ಸರಿಯಾದ ನುಡಿಗಳ ಕರುಣೀಸು

## ಕುಮಾರವ್ಯಾಸ

ಜಯ ಮಂಗಳಂ ನಿತ್ಯ ಶುಭಮಂಗಳಂ

ಮಂಗಳಂ ವೀರನಾರಾಯಣನ ಭಕ್ತರಿಗೆ
ಮಂಗಳಂ ಶಿವನಂಶ ದ್ರೋಣಸುತ ಶಿಷ್ಯಂಗೆ
ಮಂಗಳಂ ಕನ್ನಡೆ ಭಾರತವನೊರೆದಂತೆ
ಮಂಗಳಂ ಯೋಗೀಂದ್ರ ಕುಮಾರವ್ಯಾಸಂಗೆ

ಶ್ರೀ ವರನ ವರದಿಂದ ಧೀರನರ್ಶವತ್ಥಾಮ
ದೇವನಾಶೀರ್ವಾದದಿಂದೆ ಸ್ಫೂರ್ತಿಯ ತಾಳ್ದು
ಭಾವಪೂರಿತ ಪದದ ಪ್ರೌಢಿಯಲಿ ಕನ್ನಡದೆ
ಓವಿ ಭಾರತ ಬರೆದ ಕವಿ ಕವಿಪುಂಗವಂತೆ

ಭಾರತ ಶಾಸ್ತ್ರಾರ್ಥದೊಗಟವನು ಬಿಡಿಸುತಲಿ
ಸಾರಿ ಜನರಿಗೆ ರಮ್ಯಗಮಕದಲಿ ಹೇಳಲಿಕೆ
ಭಾರತದ ಶ್ರೀ ಬಿಂದುರಾಯರನು ಪ್ರೇರಿಸಿದ
ತೋರ ಗದುಗಿನ ವೀರ ನಾರಾಯಣಂಗೆ

## ಪುರಂದರದಾಸರು ೭೧

ಜಿಪುಣರ್ರೈ ನೀವೆಂದು ಹೇಳಿದುದು ಸುಳ್ಳಲ್ಲ
ನಿಪುಣಮತಿ ಪುರಂದರ ದಾಸಮಲ್ಲ

ಘನತನ ವೈರಾಗ್ಯ ತಳೆದು ದ್ವಿಜರಿಗೆಲಲ್
ಧನಕನಕ ಸಂಪತ್ತು ದಾನ ಮಾಡಿದಿರೆಲ್ಲ
ವನಜನಾಭನ ಸ್ತುತಿಗೆ ಶಬ್ದ ಸಂಪತ್ತೆಲ್ಲ
ಒನೆದು ನೀವೇ ಬಳಸಿ ನನಗೇನು ಕೊಡಲಿಲ್ಲ

ಖಿಂಜೂಷತನದ ಕಥೆಯನ್ನು ಹೇಳಲಾಸಲ್ಲ
ಕಂಜನಾಭವನ ಮಹಿಮೆ ಬಣ್ಣಿಸುವ ನೆವದಲ್ಲಿ
ರಂಜನೆಯ ಶಬ್ಧಗಳ ಸವಿದುಂಡೆಯಲ್ಲ
ಎಂಜನಲವನುಳಿದೆನಗೆ ಕಿಂಚಿತ್ತು ಬಿಡಲಿಲ್ಲ
ಕೃಪೆ ಮಾಡಿ ಕ್ಷಮಿಸುವುದು ವಿಪುಲ ಭಕ್ತಿಗಳಿಂದ
ಜಪತಪದಿ ಕನ್ನಡದ ನಿಮ್ಮ ಭಾರತಮಲ್ಲ
ಕೃಪಣವತ್ಸಲ ಗದುಗು ವೀರನಾರಾಯಣನ
ಸಫಲ ಜ್ಞಾನವ ಗಳಿಸಿ ನಮಗೇನು ಕೊಡಲಿಲ್ಲ

**ಕನಕದಾಸರು ೭೨**

ಕನಕಾ ನಿನ್ನ ಕೆಣಕಿ ನಾನು ತಿಣಕಲಾರೆನೊ
ಕ್ಷಣಕು ಕ್ಷಣಕು ತಿಣಿಕಿ ತಿಣಿಕಿ ದಣಕೋಲಾರೆನೊ
ಅಡಿಗಡಿಗೊಗೆದ ಮುಂಡಿಗೆಯನು ಒಡಿಯಲಾರೆನೊ

ಒಡೆಯ ದೇವನೆಂದಟ್ಟಿದ ಶುನಕವ ಮುಟ್ಟಿಲಾರೆನೋ
ಮುಡಿಯ ದೇವರೆಂದೊದಗಿಸಿದುರಗನ ಬಳಿಯ ಸಾರೆನೋ

ಪಾತ್ರೆಯ ಒಳ ಮೈಯ್ಯ ಮಾತ್ರ ತೊಳೆದುದು ತಿಳಿಯಲಾರೆನೋ
ಗೋತ್ರವ ಕೇಳಲಿ ಸುಸೂತ್ರದೊಳುತ್ತರ ಪಡೆಯಲಾರೆನೋ

ಅದಕೊ ಇದಕೊ ಯಾವುದಕೊ ನಾ ಕೆದಕಲಾರೆನೊ
ಗದುಗಿನ ವೀರನಾರಾಯಣನ ಮರೆಯಲಾರೆನೊ

**(ಊ) ಆತ್ಮನಿವೇದನೆ ೭೩**

ಇಟ್ಟಂತೆ ಇರುವೆನೊ ಹರಿಯೇ ನೀನು
ಕೊಟ್ಟದ್ದನುಣ್ಣುವೆ ಮತ್ತೇನು ಧೊರೆಯೇ

ಪಟ್ಟೆಪೀತಾಂಬರ ಕೊಟ್ಟರೆ ಉಡುವೆನು
ಬಟ್ಟೆಯಿಲ್ಲದಿರೆ ಚಿಂದಿತೊಟ್ಟು ನಾನಿರುವೆನೊ

ಮೃಷ್ಟಾನ್ನವನಿತ್ತರೆ ಭೋಜನವಿತ್ತರೆ ಉಣ್ಣುವೆ ಉ
ಚ್ಚಿಷ್ಟನ್ನವನಿತ್ತರೆ ತುಷ್ಟಿಲೆ ತಿನ್ನುವೆ

ಹಾಸಿಗೆ ಕೊಟ್ಟರೆ ನಾ ಮಲಗುವೆ
ಭೂಶಯನವಿತ್ತರೆ ಅಲ್ಲಿಯೆ ಒರಗುವೆ

ಆ ಶಾಲು ಕೊಟ್ಟರೆ ಹೊದೆಯದೆ ಬಿಡದಾ
ಕಾಶವ ಹೊದಿಯೆಂದರೆ ಹೊದೆಯುವೆ ಬರಿಯೆ

ನೀಕೊಟ್ಟರುಂಟು ಕೊಡದಿದ್ದರೇನುಂಟು
ಬೇಕು ಬೇಡಗಳು ನನ್ನಿಚ್ಛೆಯಾಧೀನ
ಲೋಕೇಶ ಗದುಗಿನ ವೀರನಾರಾಯಣ
ಸಾಕು ಬಿಡಿಸಯ್ಯ ನರಜನ್ಮದ ಗಂಟು
ಈಸಲು ಬಿಡು ನನ್ನ ಹರಿ ಘನ್ನ
ಮೀಸಲು ಭಕುತಿಯ ರಸಜಲ ನಿಧಿಯಲಿ

ಏನು ತಿಳಿಯದವನಾ ನೀ ಗುಟ್ಟು
ಜ್ಞಾನದ ಸಿಂಗಡಿ ಸಂಗಡ ಕೊಟ್ಟು
ಧ್ಯಾನದ ಪಾಶದ ಬಿಗಿಯಲಿ ಕಟ್ಟು
ಶ್ರೀನಿವಾಸನೇ ನೀ ದಯವಿಟ್ಟು

ಭವಸಾಗರವನು ದಾಟಿಸಬಲ್ಲ
ನಾವಿಕ ನೀನಲ್ಲದೆ ಯಾರಿಲ್ಲ
ಹವಣಿಸಿ ನಿನ್ನನೆ ನಂಬಹೆನಲ್ಲ
ತವಕದಿ ಮನ್ನಿಸಿ ದೀನನ ಸೊಲ್ಲ

ಬಿನ್ನಪ ನನ್ನನು ದಯದಿಂದಾಲಿಸು
ಸನ್ನುತ ಗದುಗಿನ ವೀರನಾರಾಯಣ
ಎನ್ನೊಳು ನೀ ದಯಪಾಲಿಸು

ಎಂಥ ಪಾಪವನು ಮಾಡಿರುವೆನೋ ಶ್ರೀ ಹರಿಯೇ
ಇಂಥ ದುದೆಸೆಗೆನನ್ ಎಳೆತಂದು ಬಿಡಲಿಕ್ಕೆ ॥ ಪ ॥

ಉದಯ ಕಾಲದೊಳೆದ್ದು ಉದರ ಪೋಷಣೆಗಾಗಿ
ಹದವನರಿಯದೆ ಬಳಲಿ ಅಂತಿಂತು ಬಡೆದಾಡಿ
ಬದುಕು ತಂದೊಡಲ ಹೊರಕೊಂದು ಸಲೆನಿನ್ನ
ಪದವ ನೆನೆಯಲು ಸ್ವಲ್ಪ ಸಹ ವೇಳೆ ಸಿಗದಂತೆ

ಹಿಡಿದ ಕಾರ್ಯಗಳೆಲ್ಲ ಬಿಡದೆ ನಿಷ್ಫಲವಾಗಿ
ಒಡೆವ ಇಲ್ಲದ ಬರಿಯ ಒಡೆತನಕೆ ಅಣಿಮಾಡಿ
ಮಡದಿ ಮಕ್ಕಳ ಬಿರುಸು ನುಡಿಗೇಳಿ ಮನನೊಂದು
ಸುಡುಬಾಳ್ವೆ ಇದನೆಂದು ಮಿಡುಕುವಂದದೆ ಗೈಸಿ ॥ ೨ ॥

ನಂಬಿದವರನು ಹರಿಯು ಬೆಂಬಡನು ಎಂದೆಂದು
ಎಂಬ ಬಿರುದನು ತೊರೆದು ಇಂಬುಗೊಡೆದಿರಲಿಕ್ಕೆ
ಅಂಬುಜಾಕ್ಷನೆ ನಿನಗೆ ಸಂಬಂಧವಿರದೇನು
ಹಂಬಲಿಪ ದುಃಸ್ಥಿಗೆ ತುಂಬ ತಂದಿಡಲಿಕ್ಕೆ ॥ ೩ ॥

ಅಣುಗರಿಗೆ ಉಣಿಸಲಿಕೆ ಹಣವೆತ್ತ ಗಳಿಸಲಿ
ಫಣಿಶಯನ ನಿನಗಿನ್ನು ಗುಣವೆತ್ತ ತೋರಿಸಲಿ
ಮಣಿಗಳನು ಎಣಿಸುತ್ತ ಪ್ರಣವೆತ್ತ ಧೆನಿಸಲಿ
ಹಣಿವ ಭವದೊಳು ಸಿಲುಕಿ ಕ್ಷಣವು ಸಹ ಸಿಗದಾಯ್ತು ॥ ೪ ॥

ಬಾಳಿನೊಳು ಸೌಖ್ಯವೇ ಆಳುವೈಶ್ವರ್ಯವೆ
ತೋಳಿನೊಳು ದಾರ್ಢ್ಯವೆ ಚಿತ್ತದೊಳು ಸ್ಥೈರ್ಯವೆ
ಹೇಳು ಗದುಗಿನ ವೀರನಾರಾಯಣನೆ ಮಣಿವೆ ॥ ೫ ॥

ಏನು ಮಾಡದೆ ಮೂಢಮನುಜಾ
ಮಾನವ ಜನುಮದಿ ಬಂದೀ ಜಗದೀ ॥ ಪ ॥

ದೇಶದ ಸೇವೆಗೆ ತನು ನೀಡಿದೆಯಾ
ಭಾಷೆಯ ಏಳ್ಗೆಗೆ ಮನ ಮಾಡಿದೆಯಾ
ಕಾಸಿಗಾಗಿ ವಂಚಿಸಿ ನನ್ನೊಡಲಿನ
ಪೋಷಣಗೆಆಗಿ ದುಡಿದೆಯಲ್ಲದೆ ॥ ೧ ॥

ಆರ್ತರ ದುಃಖವನೀಡಾಡಿದೆಯಾ
ಸ್ವಾರ್ಥದ ಹಂಬಲ ಬಿಟ್ಟು ನಡೆದೆಯಾ
ಪೂರ್ತಿಯಾಗಿ ಜನಹಿತ ನೋಡಿದೆಯಾ
ಧೂರ್ತತನವ ಬರಿದೆ ತೋರಿದೆಯಲ್ಲದೆ ॥ ೨ ॥

ಮದಮತ್ಸರಗಳ ನೆಲೆಕೆ ಬಡೆಯಾ
ಹೃದಯ ನಿಮ್ಲಗೊಳಿಸಿ ನುಡಿದೆಯಾ
ಮುದದಿ ಗದುಗಿನ ವೀರನಾರಾಯಣನ
ಪದವನೊಮ್ಮೆಯಾದರೂ ಸ್ಮರಿಸಿದೆಯಾ ॥ ೩ ॥

## ಲಾವಣಿ

ಖೋಡಿಮನಸು ಇದು ಓಡಿ ಹೋಗುತದ
ಬೇಡೆಂದರು ಕೇಳೆದು ಹರಿಯೆ
ಜೋಡಿಸಿ ಕೈಗಳ ಬೇಡಿಕೊಂಬೆ ದಯಮಾಡಿ
ಹಿಡಿದು ಕೊಡು ನರಹರಿಯೆ ॥ ಪ ॥

ಗಾಡಿಕಾರ ನಿನ್ನ ಮೋಡಿಯ ಮೂರ್ತಿಯ
ಕೂಡಿಸಿ ಪೂಜಿಸಲಘ ಹರಿಯೆ
ದೂಡತ ಹೃದಯದ ಗೂಡಿನೊಳಗೆ ಸ್ಥಿರ
ಮಾಡಲು ಹದವನು ನಾನರಿಯೆ
ನೋಡಿಂದ್ರಿಯಗಳ ತೀಡಬಲ್ಲೆ ಮನ
ತೀಡುವ ಯತ್ನವು ಬರೆಬರೆಯೆ
ಬೇಡಬೇಡವೆಂದಾಡುವೆನೆ ನಿನ್ನ
ನೋಡುವುದೆಂತೈ ಜಗದೊರೆಯೆ
ಕೋಡಗನಂತಿದು ಕಿಡಿಗೇರಿ ಜಿಗಿ
ದಾಡಿ ಪೋಗುವುದ ತ್ವರೆಮಾಡಿ
ಕೂಡಿಸದದು ಬಹುಕಾಡಿ ದಿಟ
ಸ್ಯಾಡಿ ನೋಡಲದು ಅಡನಾಡಿ
ಕಾಡಿಕಾಡಿ ಬಲು ಪೀಡುಸುತಿರುವುದು
ಕಾಡುವುದೇನಿದು ಈ ಪರಿಯಾ
ಜೋಡಿಸಿ ಕೈಗಳ ॥ ೧ ॥

ತುಣುಕು ತುಣುಕು ಮನಸು ಇದು ಕ್ಷಣದೊಳು ಓಡಿವುದು
ತಿಣಿಕಿ ತಿಣಿಕಿ ಗಡ ಇದನ್ಹಿಡಿದು ಹೆಣಗಲ್ಯಾತಕೆಂದು
ಗೊಣಗುತಿಹರು\ಜನ ಗುಣ ಗೊತ್ತಿತ್ತಲ್ಲಿದೆ ಗುಣ ಖಣಿಯೆ
ಗುಣರಹಿತನೆ ನಿನ್ನ ಗುಣ ನಾಮಂಗಳ
ನೆಣೆಸುತೆ ನಾಲಗೆ ತಾ\ದಣಿಯೆ ಟೊಣೆದು ನಿಮ್ಮನು ಕ್ಷಣಕ್ಷಣಕೊಂದು
ಕಣಕೆ ಹಾರುವುದು ಸುರಧರಣಿಯೆ
ಇಣಚಿಹಾಂಗೆ ಚಪಲವೋ ಧಣಿಯೆ\ಅಣಕಿಸಿದ್ಹಾಂಗ ಕುಣಿಕುಣಿಯೆ

ಬಣಗು ಜನರು ನಮಗದು ಹೊಣೆಯೆ
ಒಣ ಮಾತಿದು ಕೇಳ್ ನಿರ್ಗುಣಿಯೆ


■



ಹುಯಿಲಗೋಳ
ನಾರಾಯಣರಾಯರ ಆರಾಧ್ಯ ದೈವ
ಗದುಗಿನ ಶ್ರೀ ವೀರನಾರಾಯಣ



ಗದುಗಿನ ಶ್ರೀ ವೀರನಾರಾಯಣ
ದೇವಸ್ಥಾನ



ಹುಯಿಲಗೋಳ ನಾರಾಯಣರಾಯರು ವಾಸಿಸುತ್ತಿದ್ದ ಮನೆ



ಹುಯಿಲಗೋಳ ನಾರಾಯಣರಾಯರು ವಾಸಿಸುತ್ತಿದ್ದ ಮನೆಯಲ್ಲಿರುವ
ಈಗಿನ ಭಾವಚಿತ್ರ

## ಗದ್ಯ ಸಾಹಿತ್ಯ

ಹುಯಿಲಗೋಳರ ಗದ್ಯ ಸಾಹಿತ್ಯವು ಕಾದಂಬರಿ ಕಥೆ, ಹಾಗೂ ಭಾಷಣ, ಲೇಖನಗಳಲ್ಲಿ ವ್ಯಕ್ತವಾಗಿದೆ. ಅವರು ಕಾವ್ಯ ಬರೆದುದಕ್ಕಿಂತ ಗದ್ಯರಚನೆ ಬಹಳ ಕಡಿಮೆ ದೊರೆಯುತ್ತದೆ. ಅವರು ಬರೆದ ಕಾದಂಬರಿ "ಮೂಡಲು ಹರಿಯಿತು" ಹಸ್ತಪ್ರತಿ ಇದ್ದಾಗಲೇ ಗೆಳೆಯರೊಬ್ಬರು ಓದಲು ತೆಗೆದುಕೊಂಡು ಹೋಗಿ ಮರಳಿಕೊಡಲಿಲ್ಲವಂತೆ ಹೀಗಾಗಿ ಅದು ಪ್ರಕಟವಾಗಲಿಲ್ಲ. ಆ ಕಾದಂಬರಿಯು ವಿಜಯ ನಗರ ಸಾಮ್ರಾಜ್ಯದ ಕುರಿತಾದ ವಿಷಯವಿರಬೇಕೆಂದು ಅವರ ಬಂಧುಗಳು ಹೇಳುತ್ತಾರೆ. ಅವರು ತಮ್ಮ ಮಕ್ಕಳಿಗೆ, ಮೊಮ್ಮಕ್ಕ ಳಿಗೆ ಕಥೆಗಳನ್ನು ಹೇಳುತ್ತಿದ್ದರೆ, ಅದರಲ್ಲಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಗೆ ಸಂಬಂಧಿಸಿದ 'ನೆತ್ತರದ ಔತಣವು' ವೆಂಬ ಕಥೆ ಮಾತ್ರ ಇಲ್ಲಿ ದೊರಕಿದೆ.

"ನೆತ್ತರದ ಔತಣ"ವು : ವಿಜಯನಗರದ ಅರಸರಲ್ಲಿ ಒಬ್ಬನಾದ ದೇವರಾಜ ಮಹಾರಾಜರ ಕಕ್ಕನ ಮಗನಾದ ವಿರುಪಾಕ್ಷರಾಯನ ಮನೆಯಲ್ಲಿ ಇಂದು ದೊಡ್ಡ ಸಮಾರಂಭವಿದೆ. ಆ ಸಮಾರಂಭಕ್ಕೆ ವಿರೂಪಾಕ್ಷರಾಯನು ಎಲ್ಲರಿಗೂ ಆಮಂತ್ರಣವನ್ನು ನೀಡುತ್ತಾನೆ. ಮಹಾರಾಜರು ಹಾಗೂ ರಾಜಕುಮಾರರು ಎಲ್ಲರಿಗೂ ಭೋಜನಕ್ಕೆ ಬರಲು ಆಮಂತ್ರಣ ನೀಡುತ್ತಾನೆ.

ಮಹಾರಾಜರು ಬೇರೆ ಅರಸರೊಂದಿಗೆ ಆಪ್ತಲೋಚನೆ ಮಾಡಬೇಕಾಗಿದೆ. ಅದಕ್ಕಾಗಿ ನಾನು ಬರುವುದಿಲ್ಲ, ಉಳಿದ ರಾಜಪುತ್ರರು ಊಟ ಮಾಡಲಿ ಎಂದು ಭಂಗವಾಯಿತಾದರೂ ಅವನು ರಾಜಾಜ್ಞೆಯಂತೆ ಉಳಿದ ರಾಜಪುತ್ರರನ್ನು ಕರೆತಂದನು.ವಿಜಯನಗರ ರಾಜವಂಶರಲ್ಲಿ ಅನೇಕರು ಒಂದೇ ಪಂಕ್ತಿಯಲ್ಲಿ ಕುಳಿತು ಭೋಜನ ಮಾಡುವ ಸಂಪ್ರದಾಯವಿರಲಿಲ್ಲ. ಒಬ್ಬೊಬ್ಬರು ಒಂದೊಂದು ಕೋಣೆಯಲ್ಲಿ ಕುಳಿತು ಭೋಜನ ಮಾಡುವ ಪದ್ಧತಿ ಇತ್ತು ಅದರಂತೆ ಬಂದ ರಾಜಕುಮಾರನನ್ನು ಭೋಜನಕ್ಕೆ ಕಳಿಸಲಾಯಿತು.

ಮಹಾರಾಜರು ನಿಯೋಗಿಗಳೊಡನೆ ಆಪ್ತಾಲೋಚನೆ ನಡೆಸಿ ಆ ಹೊತ್ತಿನಲ್ಲಿಯೇ ಮಂದಿರಕ್ಕೆ ಹೋದರೆಂಬ ವಾರ್ತೆ ತಿಳಿದ ಕೂಡಲೆ ವಿರೂಪಾಕ್ಷರಾಯರು ಅಲ್ಲಿಗೆ

ಬಂದು"ಭೋಜನದ ಸಿದ್ಧತೆಯಾಗಿದೆ. ಆಜ್ಞೆಯಾಗಬೇಕು" ಎಂದು ಬೇಡಿಕೊಂಡನು. ಮಹಾರಾಜರು "ನಾನು ದಣಿದಿದ್ದೇನೆ.ನೀನು ಮುಂದಕ್ಕೆ ನಡೆ, ನಾನು ಇನ್ನೊಂದು ಕ್ಷಣದಲ್ಲಿ ಬರುವೆನು" ಎಂದು ಹೇಳಿ ಅವನನ್ನು ಕಳಿಸಿಕೊಟ್ಟರು.ವಿರೂಪಾಕ್ಷರಾಯನ ಮುಖದಲ್ಲಿಯ ತಿರಸ್ಕಾರ ಭಾವವನ್ನು ಗುರುತಿಸಿದ ಮಹಾರಾಜರು ಊಟಕ್ಕೆ ಹೋಗುವುದು ಯೋಗ್ಯವಲ್ಲವೆನಿಸಿ, ಹಸಿವೆಯಾಗದಿದ್ದದನ್ನೂ ಎಣಿಸಿ ಔತಣ ಸ್ವೀಕರಿಸಿ ಬಳಿಕ ಹೋಗದಿರುವುದರ ಔಚಿತ್ಯದ ಬಗ್ಗೆ ಯೋಚಿಸುತ್ತಿರುವಷ್ಟರಲ್ಲಿ ಪುನಃ ವಿರೂಪಾಕ್ಷನು ಬಂದು ಏರ್ಪಡಿಸಿರುವಾದಾಗಿ ಹೇಳಿ ಬರಲು ಆಗ್ರಹ ಪಡಿಸಿದನು. ಅಡಿಗೆ ಆರುವುದೆಂದೂ ಹೇಳಿದಾಗ ಮಹಾರಾಜರು ಬೇಗನೆ ಬರುವುದಾಗಿ ಹೇಳಿ ವಿರೂಪಾಕ್ಷನನ್ನು ಕಳಿಸಿದರು.

ಅಹಂಕಾರದಿಂದ ವರ್ತಿಸುತ್ತಿದ್ದ ವಿರೂಪಾಕ್ಷನು ಇಂದು ದೀನನಾಗಿ ವರ್ತಿಸುತ್ತಿರುವುದು ಶಂಕೆಯಾಸ್ಪದವೆಂದು ನಿರ್ಧರಿಸಿ ಅಲ್ಲಿಗೆ ಹೋಗುವ ವಿಚಾರ ಬಿಟ್ಟುಕೊಟ್ಟರು.

ಆದರೆ ವಿರೂಪಾಕ್ಷನು ಪುನಃ ಮಹಾರಾಜನಿದ್ದಲ್ಲಿಗೆ ಬಂದನು. ವಿರೂಪಾಕ್ಷನ ಸೂಚನೆಯಂತೆ ಮಹಾರಾಜರ ಮೈಗಾಲನ ದ್ವಾರಪಾಲಕರೀರ್ವರು ಸ್ಥಲ ಬಿಟ್ಟು ಹೋಗಿದ್ದರು. ತೋಳಿನಲ್ಲಿ ಅಡಗಿಸಿಟ್ಟ ಕಠಾರಿಯಿಂದ ಮಹಾರಾಜನನ್ನು ಇರಿದನು.

ಆದರೆ ಮಹಾರಾಜರು ಬದಿಗೆ ಸರಿದು ಎದೆಗೆ ಇಟ್ಟ ಗುರಿತಪ್ಪಿ ಬೆನ್ನಿಗೆ ಬಿದ್ದಿತು. ಮಿತಿ ಮೀರಿ ರಕ್ತಸ್ರಾವವಾಯಿತು.ದೇವರಾಜನು ಲಟಪಟನೆ ಒದ್ದಾಡಿ ಬಿಕ್ಕಿಸಿ ಪ್ರಾಣಬಿಟ್ಟನು. ವಿರೂಪಾಕ್ಷನ ಅರಮನೆಯಿಂದ ಹೊರಗೆ ಬಂದನು. ಇವನ ಕಪಟಕಾರಸ್ಥಾನದಲ್ಲಿ ಸೇರಿದ ಕೃತಘ್ನರಾದ ಸೈನಿಕರೂ ನಾಗರಿಕರೂ ಅಲ್ಲಿದ್ದರು. ವಿರೂಪಾಕ್ಷನು ಜಗಲಿ ಮೇಲೆ ನಿಂತು "ಪ್ರಜೆಗಳೇ ಇಂದು ನಾನು ವಿಜಯನಗರ ಸಾಮ್ರಾಜ್ಯದ ಅಧಿಪತಿಯು. ರಾಜನೀತಿಜ್ಞರಾದ ಮಹಾಜನರ ಅನುಮತಿಯಿಂದ ನನ್ನೀ ವಿಜಯ ಹಸ್ತದಿಂದ ದೇವರಾಯನೆಂಬ ನರಪಶುವನ್ನು ಕೊಂದು ಹಾಕಿ ರಾಜ್ಯವನ್ನಾಳಲುಬಂದಿರುವದಾಗಿ ಹೇಳಿದನು. ಆಗ ಅಲ್ಲಿ ಪ್ರತಿಭಟಿಸಿದವರು ಕೂಡಲೇ ತಮ್ಮ ಪ್ರಾಣ ಕಳೆದುಕೊಂಡಾಗ ಜನರು ಭಯದಿಂದ ಓಡತೊಡಗಿದರು. ದೇವರಾಜರ ಉಪ್ಪರಿಗೆಯಲ್ಲಿ ದೇವರಾಜರೇನಿಂತಿರುವುದಾಗಿ ಸಾರಿ ಕೆಲವರು ಅತ್ತ ಎಲ್ಲರ ಗಮನ ಸೆಳೆದರು. ದೇವರಾಜರು 'ಪ್ರಜರೇ ಭಗವತ್ ಕೃಪೆಯಿಂದ ಇದು ನಾನು ಕೊಲೆಗಡುತನ ಕೈಯಿಂದ ಪಾರಾಗಿರುವೆನು. ನೀವಿನ್ನು ಅಂಜಬೇಡಿರಿ. ದೇವರಾಜರನ್ನು ಪ್ರತಿಭಟಿಸಲು ವಿರೂಪಾಕ್ಷನು ತನ್ನ ಜನರಿಗೆ ಆಜ್ಞೆ ಮಾಡಿದನು. ಆದರೆ ದೇವರಾಜನ ಮಹಾಸೇನೆ ನುಗ್ಗಿ ಬಂದು ಸ್ವಾಮಿ ದ್ರೋಹಿಗಳಾದ ವಿರೂಪಾಕ್ಷನ ಮನೆಯಲ್ಲಿ ಊಟ ಮಾಡಿದ ರಾಜಕುಮಾರರು ಅಲ್ಲಿಯೇ ಏಕಕಾಲಕ್ಕೆ ಮಡಿದು

ಹೋಗಿದ್ದರು. ಮಾನವ ರಾಕ್ಷಸನಾದ ವಿರೂಪಾಕ್ಷನನ್ನು ಹೀಗೆ ದೇವರಾಯನು ಕೋಪಗೊಂಡು ವಿರೂಪಾಕ್ಷನನ್ನು ಸುಡಿಸಿಕೊಂದರು.

ವಿಜಯನಗರದ ಅರಸು ಮನೆತನದಲ್ಲಿ ಪಟ್ಟಕ್ಕಾಗಿ ಇಂಥ ಕೆಟ್ಟ ಕೃತ್ಯ ಮಾಡಿದ್ದು ಹಾಗೂ ಅದರ ಪರಿಣಾಮ ಈಗ  ಕಥೆಯಲಿದೆ. ಭಾಷೆ, ವಾಕ್ಯ ರಚನೆಗಳಲ್ಲಿ ಹೊಸಗನ್ನಡ , ನಡುಗನ್ನಡ, ಹಳಗನ್ನಡ ಪ್ರಯೋಗಗಳನ್ನು ಕಾಣಬಹುದಾಗಿದೆ.

ನಾರಾಯಣರಾಯರು ಕುಮಾರವ್ಯಾಸನ ಜೀವನ ಸಾಹಿತ್ಯದ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ.

೧) **ಕುಮಾರವ್ಯಾಸನ ಮತ :**

ನಾರಾಯಣರಾಯರು ಕೋಳಿವಾಡಕ್ಕೆ ಹೋಗಿ ಕುಮಾರವ್ಯಾಸನ

ರಾಯಭಾರಿ ಅಬ್ದುಲ್ ರಜಾಕನು ಅಲ್ಲಿಯ ಕಲಾ ಕೌಶಲ್ಯವನು ವರ್ಣಿಸುತ್ತ ಸಿಂಹ, ಹುಲಿ. ಶಾರ್ದೂಲಗಳ ಗೊಂಬೆಗಳು ಜೀವಂತ ಪ್ರಾಣಿಗಳಂತೆ ಹರಿದಾಡುವುದನ್ನು ಉಲ್ಲೇಖಿಸಿದ್ದಾನೆ.

ಕೃಷ್ಣದೇವರಾಯನು ತಿಮ್ಮಣ್ಣ ಕವಿಗೆ ಕುಮಾರವ್ಯಾಸನು ರಚಿಸದೆ ಉಳಿದ ಪರ್ವಗಳನ್ನು ರಚಿಸಲು ತಿಳಿಸಿದ್ದು ಅದರಂತೆ ಅವನು ರಚಿಸಿದನ್ನು ನೋಡಿದರೆ ಕುಮಾರವ್ಯಾಸ ಕೃಷ್ಣದೇವರಾಯನ ಕಾಲಕ್ಕಿಂತ ಮೊದಲೇ ಜೀವಿಸಿರಬೇಕೆಂದು ತಿಳಿಯುತ್ತದೆ. ವೀರನಾರಾಯಣನ ಸನ್ನಿಧಿಯಲ್ಲಿ ಕುಮಾರವ್ಯಾಸನು ಗುಡಿಯ ಹಿಂಬದಿಯಲ್ಲಿರುವ ನರಸಿಂಹತೀರ್ಥದಲ್ಲಿ ಸ್ನಾನ ಮಾಡಿ ರಂಗಮಂಟಪದ ಒಂದು ಕಂಬದ ಆಸರೆ ಪಡೆದು ಕಾವ್ಯ ಬರೆಯುತ್ತಿದ್ದನೆಂದು ಪ್ರತೀತಿ ಇದೆ. ಕುಮಾರವ್ಯಾಸನ ತಂದೆ ಲಕುಸಯ್ಯ ವಿಜಯನಗರದಲ್ಲಿ ಮಂತ್ರಿಯಾಗಿದ್ದನು. ಹುಬ್ಬಳ್ಳಿ ತಾಲೂಕಿನ ಕೋಳಿವಾಡ, ಕುರ್ತಕೋಟಿ ಹಾಗೂ ಮೇವುಂಡಿ ಈ ಮೂರು ಊರುಗಳಲ್ಲಿ ಮನೆತನ ವಿಂಗಡನೆ ಆಯಿತು ಕೋಳಿವಾಡದ ವಂಶಾವಳಿಯಲ್ಲಿ ಕುಮಾರವ್ಯಾಸನ ಚರಿತ್ರೆ ಬರುವುದು.

೩) ಕುಮಾರವ್ಯಾಸ :

ಈ ಲೇಖನ ವಾಗ್ಭೂಷಣ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಹಲಗೆ ಬಳಪದ ಹಿಡಿಯದೊಂದ ಅಗ್ಗಳಿಕೆ ಕುಮಾರವ್ಯಾಸನಗಿತ್ತು. ಅಶ್ವತ್ಥಾಮಾಚಾರ್ಯರನ್ನು ಗುರುತಿಸಿ ಅವರ ಆಶೀರ್ವಾದದ ಮೇರೆಗೆ ದಶಪರ್ವಗಳನ್ನು ಬರೆದನು. ಅದನ್ನು ತನ್ನ ಸ್ನೇಹಿತರಿಗೆ ಹೇಳಿ ಮರಣ ವಿಚಾರವನ್ನು ಬರೆದಿದ್ದಾರೆ. ೨೦ನೇ ಶತಮಾನದ ಆರಂಭದ ಕಾಲದಲ್ಲಿ ಗದ್ಯ ಶೈಲಿ ಹೇಗೆದ್ದಿರಬೇಕೆಂಬುದನ್ನು ಕುಮಾರವ್ಯಾಸ ಹಾಗೂ ಅಶ್ವತ್ಥಾಮರ ನಡುವೆ ನಡೆದ ಸಂಭಾಷಣೆಯಿಂದ ತಿಳಿದುಕೊಳ್ಳಬಹುದು.

**೪) ಕುಮಾರವ್ಯಾಸನಲ್ಲಿ ಹಾಸ್ಯ:**

ಈ ಭಾಷಣವನ್ನು ಧಾರವಾಡ ಆಕಾಶವಾಣಿಯಿಂದ ಪ್ರಸಾರಮಾಡಿದ್ದಾರೆ. ಭೀಮ ಬಾಲಕನಿದ್ದಾಗ ಮಾಡುತ್ತಿದ್ದ ತುಂಟತನದ ಬಗ್ಗೆ ದುರ್ಯೋಧನನು ದೂರುವುದರಲ್ಲಿ ಹಾಸ್ಯವಿದೆ.ದ್ರೌಪದಿ ಸ್ವಯಂವರದಲ್ಲಿ ಬ್ರಾಹ್ಮಣ ವೇಷ ಧರಿಸಿದ್ದ ಅರ್ಜುನನು ಮತ್ಸ್ಯ ಯಂತ್ರ ಬೇಧಿಸಲು ಎದ್ದಾಗ ಅಲ್ಲೊಂದು ಹಾಸ್ಯ ಬರುತ್ತದೆ. ಉತ್ತರ ಕುಮಾರನು ಹೆಂಗಳೆಯರ ಎದುರು ತನ್ನ ಪೌರುಷದ ಜಂಭದ ನುಡಿಗಳನ್ನು ಆಡುವುದರಲ್ಲಿ ಹಾಸ್ಯದ ಹೊನಲನ್ನು ಹರಿಸಿದ್ದಾನೆ. ಉತ್ತರಕುಮಾರನ ಸಾರಥಿಯಾಗಿದ್ದ ಅರ್ಜುನನ್ನು ಕುರಿತು ಹೀಗೆ ಹೇಳುತ್ತಾನೆ. ಏಕೆ ಸಾರಥಿ ರಥ ಮುಂದಕ್ಕೆ ನೂಕಿ ಗಂಟಲಕೊಯ್ದು ಎಂದು ಹೇಳುವಾಗ ಅನಂತರ ರಥದಿಂದ

ಧುಮುಕಿ ಪಲಾಯನ ಮಾಡುವಾಗ ಇಂಥ ಅನೇಕ ಹಾಸ್ಯಗಳ ಮಾತುಗಳನು ನಾರಾಯಣರಾಯರು ಇಡೀ ಭಾಷಣದುದ್ದಕ್ಕೆ ಹಾಸ್ಯವನ್ನು ಬೆರೆಸಿದ್ದಾರೆ.

**೫) ಪುರಂದರದಾಸರ ೩೮೮ ನೇ ಪುಣ್ಯತಿಥಿ :**

ಪುರಂದರದಾಸರ ಹೆಸರು ಕೃಷ್ಣಪ್ಪ ತಿಮ್ಮಪ್ಪ ಇಲ್ಲವೆ ಶೀನಪ್ಪ ನಾಯಕ ಆಗಿರಬಹುದಾದರೂ ಶೀನಪ್ಪ ನಾಯಕನೇಂದೇ ಹೆಚ್ಚು ಜನರು ಕರೆಯುತ್ತಾರೆ. ವಿಜಯನಗರ ಸಾಮ್ರಾಜ್ಯದಲ್ಲಿಯ (ಕೋಟೆಯಿದ್ದ) ಪಟ್ಟಣನಾಥ ಪುರಂದರ ಎಂಬಲ್ಲಿ ಕ್ರಿಶ. ೧೪೮೪ ರಲ್ಲಿ ಶಸ್ತ್ರಗಳ ಅಭ್ಯಾಸ ಹಾಗೂ ಸಂಗೀತ ಅಭ್ಯಾಸ ಮಾಡಿದರು. ಸರಸ್ವತಿ ಎಂಬ ಹೆಂಡತಿಯಲ್ಲಿ ನಾಲ್ವರು ಪುತ್ರರನ್ನು ಪಡೆದರು. ಸಂಸಾರದ ಭಾರ ಇವರ ಮೇಲೆ ಇತ್ತು ಆದುದರಿಂದ ಬಹಳ ಜಿಪುಣರಾಗಿದ್ದರು. ಶ್ರೀ ಹರಿಯು ಬ್ರಾಹ್ಮಣ ವೇಷದಲ್ಲಿ ಬಂದು ಮಗನ ಉಪನಯನಕ್ಕಾಗಿ ಭಿಕ್ಷೆ ಕೇಳಿದನು. ಸುರಿವಿ ಒಂದನ್ನು ಆಯ್ದುಕೊಳ್ಳಲು ಹೇಳಿದರು. ಆದರೆ ಒಂದೂ ಆಯ್ಕೆಗೆ ಯೋಗ್ಯವಾಗಿರಲಿಲ್ಲ. ಬ್ರಾಹ್ಮಣನು ಶೀನಪ್ಪನಾಯಕ ಮನೆಗೆ ಹೋದನು. ಮೂಗುತಿಯನ್ನು ದಾನ ಕೊಡಲು ಅವನ ಹೆಂಡತಿಗೆ ಕೇಳಿದನು. ಧೈರ್ಯದಿಂದ "ಕೃಷ್ಣಾರ್ಪಣ" ಎಂದು ಹೇಳಿಕೊಟ್ಟು, ಬಿಟ್ಟಳು ಅಂಗಡಿಗೆ ಹೋಗಿ ಶೀನಪ್ಪನಾಯಕ ನಿಗೆ ಅದನ್ನು ತೋರಿಸಿ ಹಣ ಕೊಡಲು ಹೇಳಿದಾಗ ಅದು ತನ್ನ ಹೆಂಡತಿಯ ಮೂಗುತಿ ಎಂಬ ಸಂಶಯ ಬಂದಿತು. ಮನೆಗೆ ಹೋಗಿ ಪರೀಕ್ಷಿಸಿದಾಗ ಎಲ್ಲ ಸತ್ಯ ಹೇಳಿದಳು. ಶೀನಪ್ಪನಾಯಕನಿಗೆ ಜ್ಞಾನೋದಯವಾಗಿ, ಎಲ್ಲವನ್ನು ದಾನ ಮಾಡಿ ಹೆಂಡತಿ ಮಕ್ಕಳೊಡನೆ ಭಜನೆ ಮಾಡುತ್ತ ವಿಜಯನಗರಕ್ಕೆ ಬಂದು ವ್ಯಾಸರಾಯರಿಂದ ದೀಕ್ಷೆ ಹೊಂದಿ ಪುರಂದರದಾಸರಾದರು. ಆಗ ಕೃಷ್ಣದೇವರಾಯರು ಆಳುತ್ತಿದ್ದನು . ಭಾಗವತ ಧರ್ಮ ಪ್ರಚಾರವನ್ನು ಪರಂದರದಾಸರು ಮಾಡಿದರು. ಕನ್ನಡ ಕೀರ್ತನೆಗಳು ಪ್ರಾಭಲ್ಯ ಹೊಂದಿದವು. ಕರ್ನಾಟಕ ಸಂಗೀತವನ್ನು ಊರ್ಜಿತ ಸ್ಥಿತಿಗೆ ತಂದರು. ಸುಮಾರು ೪,೭೫,೦೦೦ ಪದ್ಯಗಳನ್ನು ರಚಿಸಿದ್ದಾರೆ ಕ್ಷೇತ್ರ ಮಹಿಮೆ, ಹರಿಮಹಿಮೆ ರೀತಿ, ನಡತೆ, ಭಕ್ತಿ-ಮುಕ್ತಿಗಳ ವಿಚಾರ, ನಾಮಸ್ಮರಣೆ ಮಹತ್ವ ಇತ್ಯಾದಿಗಳ ಕುರಿತು ಕೆಲವು ಉದಾಹರಣೆಗಳನ್ನು ಈ ಲೇಖನದಲ್ಲಿ ಕೊಡಲಾಗಿದೆ. ಪುರಂದರದಾಸರು ವ್ಯಾಸರಾಯರಿಂದ ಕೃಷ್ಣದೇವರಾಯರಿಂದ, ಮನ್ನಣೆ ಪಡೆದಿದ್ದಾರೆ. ವ್ಯಾಸರಾಯರು ಹೀಗೆ ಹಾಡಿದ್ದಾರೆ 'ಕಂಗಳಿಗೆ ಹಬ್ಬವಾಯಿತಯ್ಯ ಮಂಗಳಾತ್ಮಕ ಪುರಂದರದಾಸರು ಕಂಡು ಪುರಂದರದಾಸರು ಕ್ರಿಶ ೧೫೬೪ರಲ್ಲಿ ಮರಣ ಹೊಂದಿದರು. ಹಂಪಿಯಲ್ಲಿ ಅವರ ಹೆಸರಿನ ಕಟ್ಟೆ ಚಕ್ರತೀರ್ಥದ ದಂಡೆಯ ಮೇಲಿದೆ. ಅಲ್ಲಿ ಪ್ರತಿ ವರುಷ ಪುರಂದರದಾಸರ ಆರಾಧನೆ ನಡೆಯುತ್ತದೆ.

೬) ವಿದ್ಯಾರಣ್ಯರ ಪುಣ್ಯತಿಥಿ:

ವಿದ್ಯಾರಣ್ಯರು ರಾಜಕೀಯ, ಸಾಮಾಜಿಕ, ಧಾರ್ಮಿಕ, ಬೌದ್ಧಿಕ, ವಿಷಯದಲ್ಲಿ ಮೇಲ್ಮೆ ಪಡೆದ ವಿಭೂತಿ. ವಿದ್ಯಾರಣ್ಯರು ಹುಕ್ಕ-ಬುಕ್ಕರ ಸಹಾಯದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಅದು ಸ್ಥಿರವಾಗಿ ನೆಲೆಗೊಂಡ ನಂತರ ಶೃಂಗೇರಿ ಪೀಠವನ್ನು ಏರಿದರು.ವಿದ್ಯಾರಣ್ಯರ ಪುಣ್ಯತಿಥಿಯ ಆಚರಣೆಯ ಮಹತ್ವ ಅವರ ಸದ್ಗುಣಗಳು, ಅವರು ಮಾಡಿದ ಮಹತ್ಕಾರ್ಯಗಳು, ಹಾಗೂ ಅದರ ಫಲಗಳು ಇವುಗಳನ್ನು ಅವರ ಕಾವ್ಯದಿಂದ ನಾವು ಅರಿತುಕೊಳ್ಳಬೇಕು. ವಿಜಯನಗರ ಸ್ಥಾಪನೆಯಲ್ಲಿ ತೋರಿದ ಮುತ್ಸದ್ದಿತನ, ಕರ್ತವ್ಯಜಾಗೃತ ಲೋಕದಿಂದ ಸಂಗ್ರಹ, ಯುಕ್ತಿ, ಸಹಮತ, ಸಹಿಷ್ಣುತೆ, ಧ್ಯಾನ, ಸಂಚಯಶಕ್ತಿ, ತ್ಯಾಗ, ನಿಸ್ವಾರ್ಥತೆ, ಬುದ್ಧಿವಂತಿಕೆ ಇವು ಗಮನಾರ್ಹವಾಗಿದೆ. ಅದ್ವೈತ ಮತ ಪುರಸ್ಕೃತರಾಗಿದ್ದರು. ಉಳಿದ ಮತಗಳ ಮುಖ್ಯಸ್ಥರೊಡನೆ ಬಳಕೆ ಮಾಡಿ ಮನವೊಲಿಸಿ ರಾಜ್ಯ ಕಟ್ಟುವ ಕಾರ್ಯದಲ್ಲಿ ನೆರವು ಪಡೆದರು.

ಜನರಲ್ಲಿ ಭಕ್ತಿ, ವಿಶ್ವಾಸ, ದೇಶಾಭಿಮಾನ, ಧರ್ಮಾಭಿಮಾನ ಸ್ವತಂತ್ರ ಪ್ರೇಮ ಹುಟ್ಟಿಸಿದರು. ವಿಜಯನಗರಕ್ಕಾಗಿ ತುಂಗಭದ್ರೆಯ ಉತ್ತರ ಆನೆಗೊಂದಿ ರಾಜಧಾನಿಯನ್ನು ಬಳಸದೆ, ದಕ್ಷಿಣ ದಂಡೆಯಲ್ಲಿಯೇ ನಿಸರ್ಗ ಪೋಷಿತರಾಜಧಾನಿಯನ್ನಾಗಿ ವಿಜಯನಗರವನ್ನು ರಚಿಸಿದರು.

ವಿಜಯನಗರ ಅರಸನು ಸೋತ ನಂತರ ನಿಜವಾಗಿಯೂ ಮುಸಲ್ಮಾನರುನಗರವನ್ನು ಹಾಳು ಮಾಡಲಿಲ್ಲವೆಂದು ನಾರಾಯಣರಾಯರು ಹೇಳುತ್ತಾರೆ. ವಿಜಯನಗರ ಹಾಳಾಗಲು ರಾಮರಾಯನ ಸ್ವಾರ್ಥ ಕಾರಣವೆನ್ನುತ್ತಾರೆ. ನಮಗೆಲ್ಲ ಹೆಮ್ಮೆ ಏಕೆಂದರೆ ವಿದ್ಯಾರಣ್ಯರು ಕನ್ನಡಿಗರು, ಕಟ್ಟಿದ ರಾಜ್ಯ ಕನ್ನಡ ರಾಜ್ಯ, ಅರಸರು ಹುಕ್ಕ-ಬುಕ್ಕರು ಕನ್ನಡ ಕುಲದವರೇ, ಕಾಗದ ಪತ್ರಗಳು ಕನ್ನಡದಲ್ಲಿವೆ. ಅವರು ಓರಂಗಲ್ಲಿನಿಂದ ಬಂದವರಲ್ಲ ಮರಾಠಿಗರು ವಿಜಯನಗರ ಸ್ಥಾಪಿಸಬೇಕೆಂದು ಮರಾಠಿ ಇತಿಹಾಸಕಾರರು ಹೇಳುತ್ತಿದ್ದರು. ತಪ್ಪು ಮರಾಠಿ ಗ್ರಂಥಗಳು ಹುಟ್ಟಲಿಲ್ಲವೇಕೆ? ವಿದ್ಯಾರಣ್ಯರು ಅವತರಿಸಿ ಆರ್ಯಧರ್ಮ ತಿಳಿಯಲು ದಕ್ಷಿಣದಲ್ಲಿ ಒಳ ನುಗ್ಗಿದಾಗ ಅಡ್ಡ ಹಾಕಿ ಅದನ್ನು ತಡೆದರು. ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಕುರಾನ್ ಹಿಡಿದು ಹಿಂದೂಗಳನ್ನು ಕತ್ತರಿಸುತ್ತಾ ಬಂದಾಗ ಅದನ್ನು ತಡೆಗಟ್ಟಿದರು.

ವಿಜಯನಗರದ ೬೦೦ ವರ್ಷಗಳ ಸ್ಮಾರಕ ಉತ್ಸವ ಮಂಡಲಕ್ಕೆ ತನುಮನಧನದಿಂದ ನೆರವು ನೀಡಿರಿ ಎಂದು ನಾರಾಯಣರಾಯರು ಸಭಿಕರಲ್ಲಿ ವಿನಂತಿ ಮಾಡಿಕೊಳ್ಳುತ್ತಾರೆ. ಹೀಗೆ ವಿದ್ಯಾರಣ್ಯರು ಹುರುಪು, ಒಗ್ಗಟ್ಟು ಹುಟ್ಟಿಸಿ,

ಬಾಳಿದರು.ಆರ್ಯ ಧರ್ಮವನನು ಸಲುಹಿ ಬದುಕಿಸಿಕೊಂಡರು.ಶಂಕರಾಚಾರ್ಯರ ಶೃಂಗೇರಿ ಪೀಠ ಏರಿದರು. ಕನ್ನಡದೇಶ ಹಾಗೂ ಭಾರತದೇಶದ ಮರ್ಯಾದೆಯನ್ನುಳಿಸಿದರು. ತನು, ಮನ, ಧನಗಳನ್ನು ಸಮರ್ಪಿಸಿದ ನಿಸ್ವಾರ್ಥಿಗಳಾಗಿ ಜನರಲ್ಲಿ ಕನ್ನಡಾಭಿಮಾನ ಮೂಡಿಸಿದರು.

**೭) ಲೋಕಮಾನ್ಯರ ಸ್ಮರಣೆಗಳು:**

ತಿಲಕರನ್ನು ಮೂರುಸಲಕಂಡುದರ ಸ್ಮರಣೆಗಳಿವೆ. ೧೯೦೩ನೇ ಇಸ್ವಿಯ ಪ್ರಾರಂಭದಲ್ಲಿ ನಾರಾಯಣರಾಯರು ಪುಣೆಯ ಫರ್ಗ್ಯೂಶನ್ ಕಾಲೇಜಿನಲ್ಲಿ ಓದುತ್ತಿದ್ದರು. ಆಗ ಲೋಕಮಾನ್ಯ ಟಿಳಕರ ಮೇಲೆ ಕ್ರಿಮಿನಲ್ ಆರೋಪವಿತ್ತು. ಟಿಳಕರನ್ನು ನೋಡಲು ಸಹಪಾಠಿಗಳೊಡನೆ ಕೋರ್ಟಿಗೆ ಹೋದರು. ಅಲ್ಲಿ ಪ್ರಥಮ ಸಲ ಅವರ ದರ್ಶನವಾಯಿತು. ಎರಡನೇ ಸಲ ಕನ್ನಡಗೆಳೆಯರೋಂದಿಗೆ ನಾರಾಯಣರು ಪುಣೆಯ ಟಿಳಕರ ಮನೆಗೆ ಅವರನ್ನು ಕಾಣಲು ಹೋದರು. "ಆರೋಗ್ಯ ಕಾಪಾಡಿಕೊಳ್ಳಲು ಹಾಗೂ ಚೆನ್ನಾಗಿ ಅಭ್ಯಾಸ ಮಾಡಲು" ಟಿಳಕರು ಇವರಿಗೆ ಉಪದೇಶ ಮಾಡಿದರು. ಹಾಗೂ ಫೇಡೆ ಕೊಡಿಸಿದರು. ೧೯೧೬ರಲ್ಲಿ ತಿಲಕರು ಗದುಗಿಗೆ ಬಂದಾಗ ಅವರನ್ನು ಸಾರ್ವಜನಿಕವಾಗಿ ಸನ್ಮಾಸಿದಾಗ ನಾರಾಯಣರಾಯರು ಟಿಳಕರನ್ನು ನೋಡಿದರು.

**೮) ಧಾರವಾಡ ಜಿಲ್ಲೆಯ ಎರಡನೇ ಕವಿ ಸಮ್ಮೇಳನದ ಸ್ವಾಗತ ಭಾಷಣ :**

ಗದುಗಿನ ಮಹಾಭಾರತ ರಚಿಸಿದ ಕುಮಾರವ್ಯಾಸನ ಊರು ಅವನಿಗೆ ಕಾವ್ಯ ಗದುಗಿನ ಪ್ರೇರಣೆ ನೀಡಿದ ವೀರನಾರಾಯಣ ನೆಲೆನಿಂತ ನಾಡು ಕವಿ ಚಾಮರಸ ಗದುಗಿನ ಪಕ್ಕದ ನಾರಾಯಣಪುರದ ತೋಂಟದ ಮಹಾಸ್ವಾಮಿಗಳು ಗದುಗಿನವರು ಕನ್ನಡ ಕವಿತೆಯ ಗಂಡು ಮೆಟ್ಟಿನ ಸ್ಥಳ ಗದಗು. ಪಂಪ, ರನ್ನ, ಜನ್ನ, ಹರಿಹರ, ರಾಘವಾಂಕ, ರುದ್ರಭಟ್ರ, ಮೊದಲಾದ ಕವಿಗಳಿಂದ ಪೋಷಿತಳಾಗಿ ಕನ್ನಡ ಕಾವ್ಯ ದೇವಿಯು ಇಲ್ಲಿ ಬೆಳಗಿದ್ದಾಳೆ. ಈಗ ಹೊಸ ಕವಿಗಳು ಹೊಸ ಹುರುಪಿನಿಂದ ಹೊಸ ಭಾವ, ಹೊಸರೂಪ , ಹೊಸ ರೀತಿಗಳನ್ನು ಬಳಸಿ ಅವಳನ್ನು ಅಂದಗೊಳಿಸಿದ್ದಾರೆ. ಕಾವ್ಯದಲ್ಲಿಯ ಶಬ್ದಗಳಲ್ಲಿ ಅಡಗಿರುವ ರಸಭಾವಗಳನ್ನು ಹೊರಗೆಳೆದು ಕಾವ್ಯದ ಸ್ವಾರಸ್ಯವು ತಿಳಿಯುವುದು.

ನಾರಾಯಣರಾಯರು ತಾವು ಅಂಥ ಕವಿಯಲ್ಲ ಎಂದು ನಮ್ರವಾಗಿ ಸೂಚಿಸಿ ಕಾವ್ಯದಲ್ಲಿ ಛಂದಸ್ಸು, ಮಾತ್ರಗಣ , ಚರಣ, ತಾಳ,ಪ್ರಾಸ ಇವುಗಳ ಬಂಧನ ಅವಶ್ಯ ಎಂಬ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. "ಆದಿಪ್ರಾಸವು– ಮುಕುಟವಿದ್ದಂತೆ" ಎಂಬ ತಮ್ಮ ಅಭಿಪ್ರಾಯಕ್ಕೆ ಜನರು ಚೇಷ್ಟೆ ಮಾಡಿದುದನ್ನು ತಿಳಿಸಿ, ಹಾಗದರೆ

ಪಂಪರನ್ನರಿಗೂ ಹೀಗೆಯೆ ನಗಬೇಕೋ ಎಂದು ಕೇಳುತ್ತಾರೆ. ಇಲ್ಲಿ ನಾರಾಯಣರಾಯರ ಪರಂಪರಾಪ್ರಿಯತೆ ಎದ್ದು ಕಾಣುತ್ತದೆ. ಅದನ್ನು ಸ್ಪಷ್ಟವಾಗಿ ಹೇಳುತ್ತಾರೆ ಕೂಡ. ನಮ್ಮ ಪರಂಪರೆಯನ್ನು ಬಿಡಬಾರದೆಂದು ಹೇಳುತ್ತಾ ಹಿಂದೆ ವಿದೇಶಕ್ಕೆ ಟಿಳಕರು ಹೊದಾಗ ತಮ್ಮ ಪರಂಪರೆಯಂತೆ ತಲೆಗೆ ಮಹಾರಾಷ್ಟ್ರದ ವಿಶಿಷ್ಟ ರುಮಾಲನ್ನು ಧರಿಸಿಕೊಂಡಿದ್ದನ್ನು ಸ್ಮರಿಸಿಕೊಳ್ಳುತ್ತಾರೆ. ಆದಿಪ್ರಾಸ ತ್ಯಜಿಸುತ್ತಿರುವವರನ್ನು 'ಅಪವಾದ' ಎಂದು ಹೇಳಿ ಸಾಮಾನ್ಯವಾಗಿ ಅದ ಪ್ರಾಸದಿಂದಲೇ ಕಾವ್ಯ ರಚನೆಯಾಗಬೇಕೆಂದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ.

ಕಾವ್ಯದಲ್ಲಿ ಪರಂಪರೆಯಿಂದ ಬಂದ ಬಂಧನಗಳನ್ನು ತ್ಯಜಿಸಬಾರದೆಂಬ ಅಭಿಪ್ರಾಯ ಅವರದು, ಸಂಕ್ರಮಣ ಕಾಲದಲ್ಲಿ ಬಾಳಿದರೂ ಘೋಷಿಸಿದವರು. ಪ್ರೋತ್ಸಾಹಿಸಿದವರು ಶ್ರೀ ಹುಯಿಲಗೋಳರು.

೯) ಸಂಶೋಧನ ಲೇಖನ :

ಗದಗ ಜಿಲ್ಲೆಯ ಲಕ್ಕುಂಡಿ ಐತಿಹಾಸಿಕ ಮಹತ್ವವುಳ್ಳ ಗ್ರಾಮ. ಹೊಯ್ಸಳರ ಎರಡನೇ ರಾಜಧಾನಿಯಾಗಿತ್ತೆಂದು ಶಿಲಾಶಾಸನದ ಆಧಾರದಿಂದ ನಾರಾಯಣರಾಯರು ವಿವರಿಸಿದ್ದಾರೆ. ನಾವಿಲ್ಲಿ ಅವರ ಸಂಶೋಧನಾ ಪ್ರವೃತ್ತಿಯಿದೆ ಈ ಲೇಖನದಲ್ಲಿ ತೂಗಿದರೆ ಲೊಕ್ಕಿಗುಂಡಿಭಾರವಾಗಿ (ಲಕ್ಕುಂಡಿ) ಅಮರಾವತಿ ಹಗುರವಾಗಿದ್ದರಿಂದ ಊರ್ಧ್ವಲೋಕ ಮುಟ್ಟಿತೆಂದೂ ಈ ಲೇಖನದಲ್ಲಿ ಹೇಳಲಾಗಿದೆ.

ಸೋಮೇಶ್ವರ ಭಟ್ಟನು ವಿಕ್ರಮಾದಿತ್ಯನ ಆಸ್ಥಾನದಲ್ಲಿಯ ಹದಿನೆಂಟು ಮಹಾಪ್ರಧಾನರಲ್ಲಿ ಒಬ್ಬನು ಅನನ್ಯ ಗುಣ ಕೀರ್ತಿ, ವಿದ್ವತ್ತುಗಳನ್ನು ಈ ಶಾಸನದಲ್ಲಿ ಬಣ್ಣಿಸಲಾಗಿದೆ. ಎಂದು ನಾರಾಯಣರಾಯರು ಹೇಳುತ್ತಾರೆ.

೧೦) ವಿಜಯನಗರದ ಕಾಲದ ಕೌಶಲ್ಯ ಕೈಗಾರಿಕೆಗಳು :

ವಿಜಯನಗರದಲ್ಲಿ ೨೦-೨೫ ಲಕ್ಷ ಜನರು ವಾಸಿಸುತ್ತಿದ್ದಾರೆಂದೂ ಮಹಾನವಮಿ ಮೊದಲಾದ ಹಬ್ಬಗಳಿಗೆ ನಗರಕ್ಕೆ ಹೊರಗಿನಿಂದ ಜನರು ಬರುತ್ತಿದ್ದರೆಂದೂ ಹೇಳಿದ್ದಾರೆ. ಪ್ರವಾಸಿಗರಿಗೆ ಕಲಾಕೌಶಲ್ಯ ತೋರಿಸಲು ಪ್ರದರ್ಶನಗಳನ್ನೂ ಏರ್ಪಡಿಸಲಾಗುತ್ತಿತ್ತು. ಬೀದಿಗಳಲ್ಲಿ ಸಿಂಹ, ಹುಲಿ, ಹೊನ್ನಿಗ ಮೊದಲಾದ ಪ್ರಾಣಿಗಳ ಬೊಂಬೆಗಳನ್ನು ಮಾಡಿಟ್ಟು ಅವು ಜೀವಂತ ಪ್ರಾಣಿಗಳ ಹಾಗೆ ಓಡಾಡುವ ಹಾಗೆ ಮಾಡಿದ್ದರೆಂದೂ ತಿಳಿಸುತ್ತಾರೆ. ಕುಮಾರವ್ಯಾಸನ ಪದ್ಯಗಳಲ್ಲಿಯ ವರ್ಣನೆ ಉದಾಹರಿಸಿ ಸೂತಿಸಿದ ಸಾಲಭಂಜಿಕೆಗಳು ಯಂತ್ರದ ಪುತ್ಥಳಿಗಳೂ ಇದ್ದವೆಂದೂ ಅಬ್ದುಲ್‌ರಜಾಕ್ ಉಲ್ಲೇಖಿಸಿದನ್ನು ನಾರಾಯಣರಾಯರು ತಿಳಿಸಿದ್ದಾರೆ.

ಹಾಗೆಯೇ ರಸ್ತೆಗಳು, ಬೆಳ್ಳಿ ಬಂಗಾರದ ಒಡವೆಗಳು, ಬಣ್ಣಗಳನ್ನು ಮಾಡಲು ಬೇಕಾಗುವ ದ್ರವ್ಯಗಳು ನೀರನ್ನು ಒದಗಿಸಲು ಕಟ್ಟಿದ ಆಣೆಕಟ್ಟು, ಮರದ ಕೆತ್ತನೆ ಕೆಲಸ ಮಾಡಿದ ವಸ್ತುಗಳು ಹಾಗೂ ಕಲಾಕೌಶಲ್ಯ ಹಾಗೂ ಕೈಗಾರಿಕೆಗಳಿಂದ ವಿಜಯನಗರಕೂಡಿತ್ತು ಎಂದು ನಾರಾಯಣರಾಯರು ಹೇಳಲು ತಮಗೆ ಆಧಾರವೆಂದು ವಿದೇಶಿ ಪ್ರಯಾಣಿಕರು ಆಗ ವಿಜಯನಗರವನ್ನು ನೋಡಿ ಬರೆದುದನ್ನು ಉಲ್ಲೇಖಿಸಿದ್ದಾರೆ. ಹೀಗೆ ಬಂದ ಪ್ರಯಾಣಿಕರಲ್ಲಿ ಇಟಲಿಯ ನಿಕೋಲಸ್ ಡಿ. ಕೊಂಟೆ , ಇರಾಣದ ವಕೀಲ ಅಬ್ದುಲ್ ರಝಾಕ ಸಾಹೇಬ, ಪೋರ್ತುಗಾಲದ ನೂನಿಝ್ ಹಾಗೂ ಪೇಯಸರನ್ನು ಆಧರಿಸಿ ನಾರಾಯಣರಾಯರು ಈಲೇಖನ ಬರೆದಿದ್ದಾರೆ.

**೧೧) ಪ್ರಚಲಿತ ಸಂಗೀತ ನಾಟಕಗಳನ್ನು ಮೊದಲು ಹುಡುಕಿದವರಾರು ? :**

ಬೆಳಗಾವಿಯ ಅಚ್ಚಕನ್ನಡಿಗರಾದ ದಿವಂಗತ ಚುರಮರಿ ಶೇಷಗಿರಿರಾಯರು ಪ್ರಚಲಿತ ಸಂಗೀತ ನಾಟಕಗಳನ್ನು ಮೊದಲು ಹುಡುಕಿದರೆಂಬುದನ್ನು ಈ ಪ್ರಬಂಧದಲ್ಲಿ ತಿಳಿಸಿದ್ದಾರೆ.

ಆಗಿನ ಕಾಲದಲ್ಲಿ ( ಸು ೧೯೬೦) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಬೈಲಹೊಂಗಲ, ಮೊದಲಾದ ತಾಲೂಕುಗಳಲ್ಲಿ ನಡೆಯುತ್ತಿದ್ದ ಶ್ರೀ ಕೃಷ್ಣ ಪಾರಿಜಾತದ ಆಟಗಳಲ್ಲಿ ಧಾರವಾಡ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಆಡುತ್ತಿದ್ದ ಬೈಲಾಟ, ದೊಡ್ಡಾಟ, ಮೂಡಲ ಪಾಯದ ಆಟಗಳಲ್ಲಿ ಮಂಗಳೂರು, ಉಡುಪಿ ಮೊದಲಾದ ಕಡೆಗಳಲ್ಲಿಯು ಗೊಂಬೆಯಾಟ, ಯಕ್ಷಗಾನದ ಆಟಗಳನು ಈಗ ನಡೆಯುತ್ತವಂತೆ ನಾಟಕ ಗೃಹಗಳಲ್ಲಿ ನಡೆಯುತ್ತಿರಲಿಲ್ಲ. ಇಂಥ ಆಟಗಳಲ್ಲಿ ಸಂಗೀತ, ನೃತ್ಯ ಹಾಗೂ ಅಭಿನಯ ಪ್ರದರ್ಶಿಸಲಾಗುತ್ತಿತ್ತು. ಪಾತ್ರಗಳು ಸಂಗೀತ ಹೇಳುತ್ತಿದ್ದರು. ಶೇಷಗಿರಿರಾಯರು ಪಾತ್ರಗಳಿಂದ ಹಾಡುಗಳನ್ನು ಹೇಳಿಸುವಂತೆ ನಾಟಕ ರಚಿಸಿದರು. ಕಾಳಿದಾಸನ ಶಕುಂತಲಾ ನಾಟಕವನ್ನು ಈ ರೀತಿಯಲ್ಲಿ ಶೇಷಗಿರಿರಾಯರು ಕಣ್ಣಾಡಿಸಿದರು.

ಆಗಿನ ಕಾಲದಲ್ಲಿ ಮುಂಬಯಿಯ ಇಲಾಖೆಯಲ್ಲಿ ಮರಾಠಿ ಭಾಷೆಯ ಪ್ರಾಬಲ್ಯವಿತ್ತು. ಕನ್ನಡಿಗರು ಈ ನಾಟಕಕ್ಕೆ ಪ್ರಾಶಸ್ತ್ಯಕೊಟ್ಟು ರಂಗಭೂಮಿಯಲ್ಲಿ ಪ್ರದರ್ಶಿಸಲಿಲ್ಲ. ೧೯೦೦ರಲ್ಲಿ ಇದನ್ನು ಅಂಶತಃ(ನಾಲ್ಕು ಅಂಕ) ಬಾದಾಮಿಯ ನಾದ ವಿಲಾಸಿ ವೆಂಕಣ್ಣ, ವಿಜಾಪುರದ ಮುಗಲಿ ಶ್ರೀನಿವಾಸರಾಯರು ಆಡಿ ತೋರಿಸಿದರು. ಮುದವೀಡು ಕೃಷ್ಣರಾಯರು "ಭಾರತ ಕಲೋತ್ತೇಜಕ ನಾಟಕ ಮಂಡಳಿ" ಸ್ಥಾಪಿಸಿ ಸಂಪೂರ್ಣ ನಾಟಕ ಆಡಿ ತೋರಿಸಿದರು. ಆದ್ದರಿಂದ

ಶೇಷಗಿರಿರಾಯರು ಪ್ರಚಲಿತವಿರುವ ಸಂಗೀತ ನಾಟಕವನ್ನು ಮೊದಲು ಹುಡುಕಿದವರು ಎನ್ನಲೇಬೇಕು.

೧೨) ವೃತ್ತಿ ರಂಗಭೂಮಿಯ ಸಮಸ್ಯೆ (೧೯೫೬)

ಬಹುಕಾಲದಿಂದ ನಡೆದು ಬರುತ್ತಿರುವ ವ್ಯವಸಾಯ (ವೃತ್ತಿ) ಭೂಮಿಗೆ ಅವನತಿ ಉಂಟಾಗುತ್ತಿದ್ದುದನ್ನು ನಾರಾಯಣರಾಯರು ಗಮನಿಸಿ ನಾಟ್ಯಕಲೆಯನ್ನು ಉದ್ಧರಿಸಲು ವಿಲಾಸಿಗಳಿಂದ ಸಾಧ್ಯವಿಲ್ಲ ಬುದ್ಧಿವಂತರು ವ್ಯವಸಾಯಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಅಭಿಪ್ರಾಯ ಪಡುತ್ತಾರೆ.

ಸಿನೇಮಾಕ್ಕೆ ಪ್ರೋತ್ಸಾಹ ಸುರುವಾದಾಗಿನಿಂದ ವ್ಯವಸಾಯ ರಂಗಭೂಮಿಗೆ ಅವನತಿ ಉಂಟಾಗತೊಡಗಿದೆ ಎಂಬುದು ಸರಿಯಲ್ಲ ಎಂಬುದಕ್ಕೆ ಗುಬ್ಬಿ ಕಂಪನಿಯ ನಾಟಕಗಳಿಗೆ ದೊರೆಯುತ್ತಿರುವ ಪ್ರೋತ್ಸಾಹವನ್ನು ನೋಡಬಹುದು. ಆದರೆ, ತಕ್ಕ ಮಟ್ಟಗೆ ರಂಗಭೂಮಿಗೆ ಪ್ರೋತ್ಸಾಹ ಕಡಿಮೆಯಾಗಿದೆ.

ನಾರಾಯಣರಾಯರು ಸರಕಾರವು ನಾಟಕಗೃಹಗಳನ್ನು ಕಟ್ಟಿಸಿ ಬಾಡಿಗೆ ಕೊಟ್ಟರೆ ವ್ಯವಸಾಯ ರಂಗಭೂಮಿಗೆ ಪ್ರಯೋಗ ನಡೆಸಿ ಹಣಗಳಿಸಿ ಸುಸ್ಥಿತಿಗೆ ಬರಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ .

೧೩) ಏಳುಕೋಟಿಗೋ :

ಶಿವನ ಇಲ್ಲವೆ ಮಲ್ಲಾರಿ ಭಕ್ತರು 'ಏಳುಕೋಟಿಗೋ' ಎಂದು ಏಕೆ ಕೂಗುತ್ತಾ ದೇವಸ್ಥಾನಕ್ಕೆ ಹೋಗುತ್ತಾರೆ ಎಂಬುದರ ಸೂಕ್ಷ್ಮ ವಿವೇಚನೆ ಇಲ್ಲಿದೆ .

ಮಲ್ಲನೆಂಬ ದೈತ್ಯನು ಹುಟ್ಟಿ ಕೊಡುತ್ತಿದ್ದಉಪದ್ರವವನ್ನು ಹೋಗಲಾಡಿಸಲು ಜನರು ಶಿವನ ಮೋರೆ ಹೊಕ್ಕಾಗ ಅವನುದೈತ್ಯ ಸಂಹಾರಕ್ಕೆ ಹೊರಡುವ ಮುನ್ನ ತನ್ನ ಗಣಗಳಿಗೆ ಸನ್ನದ್ದರಾಗಲು ಅಪ್ಪಣೆ ಮಾಡಲು ಅವನ ಸೈನಿಕರೆಲ್ಲ ಹಾಗೆ ಕೂಗುತ್ತಾ ಹೊರಟಿದ್ದು ಕೂಗಾಯಿತು. ಅನಂತರ ಅವನ ಭಕ್ತರು ಮಲ್ಲಾರಿಯ 'ಏಳುಕೋಟಿಗೋ' ಎಂದು ಕೂಗುತ್ತಾ ಪೂಜಿಸತೊಡಗಿದರು. ಮಲ್ಲಾರಿ ಸೇನಾಪತಿಯಾಗಿದ್ದರಿಂದ ಸೈನಿಕರ ಗಾಯ ಮಾಯಿಸಲು ಅರಿಷಿನ ಪುಡಿ ಹಾಗೂ ಕೊಬ್ಬರಿಯೆಣ್ಣೆ ಬಳಸಿದನು. ಆದುದರಿಂದ ಈಗಲೂ ಅವನ ಭಕ್ತರು ಭಂಡಾರವೆಂದು ಅರಿಷಿನ ಪುಡಿ ಕೊಡುತ್ತಾರೆ. ಅರಿಷಿನದಲ್ಲಿ ಗಾಯ ಮಾಯಿಸುವ ಗುಣವಿರುವುದು. ಸರ್ವರಿಗೂ ತಿಳಿದಿದೆ. ಈ ಲೇಖನದಲ್ಲಿ ನಾರಾಯಣರಾಯರು ಪೌರಾಣಿಕ ಕಥೆಗಳಲ್ಲಿಯ ಸತ್ಯಾಂಶಗಳನ್ನು ಪರೀಕ್ಷಿಸುವ ಪ್ರವೃತ್ತಿಯನ್ನು ನೋಡಬಹುದು.

## ೧೪) ವಿಜಾಪುರ ಜಿಲ್ಲೆಯ ನಾಟ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ:

ನಾಟಕದಲ್ಲಿ ಎಲ್ಲ ಸಾಹಿತ್ಯಗಳು ಎಲ್ಲ ಕಲೆಗಳು ಸಮಾವೇಶಗೊಂಡಿವೆ. ನಾಟಕ ಸಂಸಾರಚಿತ್ರವಾಗಿದ್ದು ಅದು ಮನೋರಂಜನೆಯೊಡನೆ ವಿದ್ಯೆಯನ್ನು ದೊರಕಿಸಿಕೊಡುವ ಸಾಧನವೂ ಆಗಿದೆ. ಭಾಷೆ ಬೆಳೆಯಲು ಅದರ ಬಗ್ಗೆ ಸಾಮಾನ್ಯ ಜನರಲ್ಲಿ ಅಭಿರುಚಿ ಮೂಡಬೇಕು . ನಾಟಕ ಈ ಅಭಿರುಚಿ ಮೂಡಿಸಬಲ್ಲದು.

ಸುಶಿಕ್ಷಿತ ಜನರು ಉದಾಸೀನ ಭಾವದ ಪರಿಣಾಮವಾಗಿ ನಾಟಕ ಅಶಿಕ್ಷಿತರ ಕೈಯಲ್ಲಿ ಸಿಕ್ಕು ಹಾಳಾಗುತ್ತದೆ. ನಾಟ್ಯ ಕಲೆಯ ಮಹತ್ವ ತಿಳಿಯಲು ಕಾರಣವಾಯಿತು ಅಭಿನಯ, ಸಂಗೀತ ಜನರಲ್ಲಿ ನಿರಾಶೆ ಉಂಟುಮಾಡುತ್ತದೆ, ಒಳ್ಳೆಯ ಸ್ವತಂತ್ರ ನಾಟಕಗಳು ಇದ್ದವು. ಸರಿಯಾಗಿ ಪ್ರಯೋಗ ಕಾಣುತ್ತಿಲ್ಲ.

## ೧೫) ಉತ್ತರ ಕರ್ನಾಟಕ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ:

ಉತ್ತರ ಕರ್ನಾಟಕ ರಂಗಭೂಮಿಯ ಸಂಕ್ಷಿಪ್ತ ಇತಿಹಾಸವನ್ನೊಳಗೊಂಡ ನಾರಾಯಣರಾಯರ ಲೇಖನ ರಂಗಭೂಮಿ ಪತ್ರಿಕೆಯ ಸಂಪುಟ-೧, ಸಂಚಿಕೆ ೩ ರಲ್ಲಿ ಅವರ ಫೋಟೋದೊಡನೆ ಪ್ರಕಟವಾಗಿದೆ, ಈ ಲೇಖನಕ್ಕಿಂತ ಪೂರ್ವದಲ್ಲಿ ಸುಮಾರು ೬೦-೭೦ ವರ್ಷಗಳ ಕಾಲ ಉತ್ತರ ಕರ್ನಾಟಕದಲ್ಲಿ ಸೂತ್ರದ ಗೊಂಬೆಯಾಟಗಳನ್ನು ಆಡದವರು ಆಡಿಸಿ ತೋರಿಸುತ್ತಿದ್ದರು. ಪ್ರಾರಂಭದಲ್ಲಿ ಪಾರಿಜಾತರ ಆಟ ಉಳಿದೆಲ್ಲ ಆಟಗಳಿಗಿಂತ ಹಚ್ಚು ಪ್ರಚಾರದಲ್ಲಿತ್ತು. ಮುಂದೆ ಸುಭದ್ರಕಲ್ಯಾಣ, ವತ್ಸಲಹರಣ , ಮೊದಲಾದ ಭಾರತ ರಾಮಾಯಣ, ಭಾಗವತ ಪುರಾಣಗಳಲ್ಲಿಯ ಕಥೆಗಳನ್ನು ಗೊಂಬೆಗಳಿಂದ ನಟಿಸಿ ತೋರಿಸುತ್ತಿದ್ದರು. ಇವುಗಳನ್ನು ನೋಡಿ ಗೊಂಬೆಗಳ ಬದಲಾಗಿ ಜನರೇ ಆಯಾ ಪಾತ್ರಗಳಿಗನುಸಾರವಾಗಿ ವೇಷಗಳನ್ನು ಧರಿಸಿ ಮಾತನಾಡುತ್ತ ಆಟ (ನಾಟಕ) ಗಳನ್ನು ಅಭಿನಯಿಸತೊಡಗಿದರು. ಇವೇ ಭಾಗವತರ ಆಟಗಳೆಂದು ಉತ್ತರ ಕರ್ನಾಟಕದಲ್ಲಿ ಕರೆಯಲ್ಪಟ್ಟರೆ ಘಟ್ಟದ ಕೆಳಗೆ (ಉಡುಪಿ) ಘಟ್ಟದ ಆಟಗಳೆಂದು ಕರೆಯಲ್ಪಡುತ್ತಿದ್ದವು. ಇವಲ್ಲದೆ. ಯಕ್ಷಗಾನದಿಂದ ಯುಕ್ತವಾದ ಕೆಲವು ಪೌರಾಣಿಕ ಕಥೆಗಳನ್ನು ಆಡುತ್ತಿದ್ದರು.

ಘಟ್ಟದ ಆಟದವರು ಮಿರಜ,ಕೊಲ್ಲಾಪುರ,ಸಾಂಗಲಿಗಳಿಗೆ ಹೋಗಿ ಇಂಥ ಆಟಗಳನ್ನು ಆಡಿ ತೋರಿಸುತ್ತಿದ್ದರು. ಈ ಭಾಗದಲ್ಲಿಯು ಮಹಾರಾಷ್ಟ್ರದ ಸಂಸ್ಥಾನಗಳಲ್ಲಿ ಕನ್ನಡಿಗರೇ ಹೆಚ್ಚಾಗಿದ್ದುದರಿಂದ ಈಜನರು ಹೆಚ್ಚಾಗಿ ಬಂದು ನೋಡುತ್ತಿದ್ದರು. ಮರಾಠಿಯಲ್ಲಿ ಇಂಥ ಆಟಗಳನ್ನು ರಚಿಸಿ ಆಡಿಸಬೇಕೆಂದು ಸಾಂಗಲಿಯ ರಾಜನು ಅರಿತು ಕೆಲವು ತಜ್ಞರನ್ನು ಕರೆದು ಮರಾಠಿ ಭಾಷೆಯಲ್ಲಿ

ಇಂತಹ ನಾಟಕ ಬರೆಯಿಸಿ ಆಡಿಸಲಾಯಿತು. ಆಟದ ಬದಲಾಗಿ ನಾಟಕ ಗೃಹಗಳಲ್ಲಿ ನಾಟಕ ಆಡುವ ಪದ್ಧತಿ ಶುರುವಾಯಿತು. ಸಾಂಗಲಿಯ ರಾಜನ ಆಶ್ರಯದಲ್ಲಿ ನಾಟಕ ಮಂಡಳಿ ಬೆಳೆಯಿತು. ಮಿರಜ, ಕೊಲ್ಲಾಪೂರ, ಈಚಲಕರಂಜಿ ಮುಂತಾದ ಪಟ್ಟಣಗಳಲ್ಲಿ ಇಂತಹ ನಾಟಕ ಮಂಡಳಿಗಳು ಜನಪ್ರೀಯತೆ ಗಳಿಸಿದವು. ಪರದೆ ದೃಶ್ಯಗಳಲ್ಲಿ ಸುಧಾರಣೆ ಮಾಡಿದವು. ಇದನ್ನು ಕಂಡು ಕನ್ನಡ ನುಡಿಯ ಅಭಿಮಾನಿಗಳಾದ ಶಾಂತ ಕವಿಗಳು (ಸಕ್ಕರಿ ಬಾಳಾಚಾರ್ಯರು) ಸ್ಫೂರ್ತಿಯನ್ನು ಹೊಂದಿ ೧೮೭೭ರಲ್ಲಿ "ಕರ್ನಾಟಕ ನಾಟಕ ಕಂಪನಿ" ಸ್ಥಾಪಿಸಿ, 'ಕೀಚಕ ವಧೆ' ಬಾಣಾಸುರ 'ವತ್ಸಲಾಹರಣ 'ಎಂಬ ನಾಟಕಗಳನ್ನು ಬರೆದು ಆಡಿಸಲಾರಂಭಿಸಿದರು. ಈಗ ಕನ್ನಡಿಗರಿಗೆ ತಮಗೆ ತಿಳಿಯುವ ಭಾಷೆಯಲ್ಲಿ ಸುಧಾರಣೆ ಹೊಂದಿದ ನಾಟಕಗಳೂ ದೊರೆತುದರಿಂದ ಸ್ವಾಭಾವಿಕವಾಗಿ ಜನರು ನಾಟಕಗಳಿಗೆ ಪ್ರೋತ್ಸಾಹ ನೀಡಿದರು. ಒಳ ಜಗಳಗಳಿಂದಾಗಿ ಈ ಕಂಪನಿ ೧೮೮೫ರಲ್ಲಿ ಮುಚ್ಚಿ ಹೋಯಿತು. ಬಳೀಕ ಮುಳಗುಂದ, ನವಲಗುಂದ, ನರಗುಂದ ಮುಂತಾದ ಪಟ್ಟಣಗಳಲ್ಲಿ ಕೆಲವು ನಾಟಕಮಂಡಳಿಗಳು ಹುಟ್ಟಿ ಕೆಲ ಕಾಲ ಬಾಳಿದವು.

ಅಷ್ಟರಲ್ಲಿ ನಾಟಕ ರಚನೆಯಲ್ಲಿ ಉತ್ತರ ಕರ್ನಾಟಕದ ಚುರಮರಿ ಶೇಷಗಿರಿರಾಯರು ಒಂದು ಕ್ರಾಂತಿಯನ್ನು ಮಾಡಿದರು. ಗೊಂಬೆಆಟ, ಘಟ್ಟದವರ ಆಟಗಳಲ್ಲಿ ಪಾತ್ರಗಳಿಂದ ಬರಬೇಕಾದ ಮಾತುಗಳನ್ನು ಸಂಗೀತ ರೂಪದಿಂದ ಕಥೆಗಾರನೇ (ಸೂತ್ರಧಾರ) ಹೇಳುತ್ತಿದ್ದುದನ್ನು ಆಯಾ ಪಾತ್ರಗಳ ವಿಷಯಗಳ ಸಂಗೀತವನ್ನು ಆಯಾ ಪಾತ್ರಗಳ ಮುಖದಿಂದಲೇ ಹೇಳಿಸುವಂತೆ ಕಾಳಿದಾಸನ ಶಕುಂತಲ ನಾಟಕವನ್ನು ೧೮೭೯ರಲ್ಲಿ ರಚಿಸಿದರು. ಆದರೆ ಉತ್ತರ ಕರ್ನಾಟಕದ ದುರ್ದೈವದಿಂದ ಆ ನಾಟಕ ಅಭಿನಯಿಸಲ್ಪಡದೆ ಅದಕ್ಕೆ ಸಲ್ಲಬೇಕಾಗಿದ್ದ ಮನ್ನಣೆ ಆಗ ದೊರೆಯಲಿಲ್ಲ ಅವರ ಆತ್ಮೀಯ ಮಿತ್ರರಾಗಿದ್ದ 'ಅಣ್ಣಾ ಕಿರ್ಲೋಸ್ಕರ' ಶಕುಂತಲ ನಾಟಕವನ್ನು ಅದರ ನಾಟಕ ನೋಡಿ ಆನಂದ ಆಶ್ಚರ್ಯದಿಂದ ಕೂಡಿದ ಜನರು ಅಣ್ಣಾ ಕಿರ್ಲೋಸ್ಕರ ಅವರನ್ನು ಸಂಗೀತ ನಾಟಕಗಳ ಉತ್ಪಾದಕರೆಂದು ಕರೆಯತೊಡಗಿದರು.ಇದು ಕರ್ನಾಟಕದ ದುರ್ದೈವವಲ್ಲದೆ ಮತ್ತೇನು? ಅಣ್ಣಾ ಕಿರ್ಲೋಸ್ಕರ ಅವರು ಕರ್ನಾಟಕದ ಬೆಳಗಾವಿ ಜಿಲ್ಲೆಯ ಗುರ್ಲಹೊಸೂರ ಎಂಬ ಗ್ರಾಮದವರು ಅವರ ಮರಾಠಿ ಸಂಗೀತ–ಶಾಕುಂತಲ, ಸಂಗೀತ–ಸೌಭಿದ್ರಗಳಲ್ಲಿ ಕನ್ನಡ ಪಾರಿಜಾತ ಪುರಂದರ ದಾಸರ ಪದಗಳ ದಾಟಿಗಳನ್ನು ಕಾಣಬಹುದಾಗಿದೆ.

ಈ ಸಂಗೀತ ನಾಟಕ ಮಂಡಳಿಯನ್ನು ಅನುಕರಿಸುವ ಮಂಡಳಿಗಳು ರಾಣೆಬೆನ್ನೂರ, ಹಿರೇಹರಕುಣಿ, ಲಕ್ಷ್ಮೇಶ್ವರ, ಹುಬ್ಬಳ್ಳಿ, ಧಾರವಾಡದ ಮೊದಲಾದ

ಪಟ್ಟಣಗಳಲ್ಲಿ ಹುಟ್ಟಿದವು. ಪರಿಣಾಮವಾಗಿ ಗದ್ಯ ನಾಟಕಗಳ ಮಂಡಳಿಗಳು ಮೆಲ್ಲ ಮೆಲ್ಲನೆ ಕರಗಿದವು ನಾಟಕ ಆಡುವುದು ಕೀಳು ಜನರ ಕೆಲಸವೆಂದು ಶಿಕ್ಷಿತರು ಕಲ್ಪಿಸತೊಡಗಿದ್ದರಿಂದ ಅವರಿಂದ ಉತ್ತೇಜನ ದೊರೆಯಲಿಲ್ಲ. ಸಣ್ಣ ಸಣ್ಣ ನಾಟಕ ಮಂಡಳಿಗಳು ಹುಟ್ಟುವುದು ಕೂಡಲೆ ಸಾಯುವುದು ನಡೆಯಿತು.

೧೮೯೮ರ ಸುಮಾರಲ್ಲಿ ಬಾದಾಮಿಯ ಕೆಲವು ಗಾಯಕರು ಶೇಷಗಿರಿರಾಯರ ಶಕುಂತಲ ಅಡಲು ಯತ್ನಿಸಿದರು. ೧೯೦೩ರಲ್ಲಿ ಶಿರಹಟ್ಟಿ ವೆಂಕೋಬರಾಯ "ಶ್ರೀ ಮಹಾಲಕ್ಷ್ಮೀ ಪ್ರಾಸಾದಿತ ಸಂಗೀತ ನಾಟಕ ಮಂಡಳಿ" ಹುಟ್ಟಿ ಉತ್ತರ ಕರ್ನಾಟಕದಲ್ಲಿ "ಪದ್ಮಾವತಿ ಪರಿಣಾಮ 'ಭೋಜ ಪ್ರಬಂಧ' ಮೊದಲಾದ ನಾಟಕಗಳನ್ನು ಆಡತೊಡಗಿತು. ಲೋಕಪ್ರಿಯವೂ ಆಯಿತು. ಆದರೆ ಅದು ಒಡೆದು ಎರಡು ಮಂಡಳಿಗಳಾದವು. ಮತ್ತೊಂದು ಕಡೆಗೆ ಗರುಡ ಸದಾಶಿವರಾಯರು ಅನೇಕ ನಾಟಕ ಮಂಡಳಿಗಳನ್ನು ಸ್ಥಾಪಿಸಿದರು. ದತ್ತಾತ್ರೇಯ ಸಂಗೀತ ಕರ್ನಾಟಕ ನಾಟಕ ಮಂಡಳಿ ಪ್ರಸಿದ್ಧವಾಗಿತ್ತು. ಕರ್ನಾಟಕ ವೃತ್ತ ಪತ್ರಿಕೆಯ ಸಂಪಾದಕರಾದ ಮುದವೀಡ್ಕರ್ ಕೃಷ್ಣರಾಯರು ಧಾರವಾಡದಲ್ಲಿ 'ಭಾರತ ಕಲೋತ್ತೇಜಕ ಸಂಗೀತ ಸಮಾಜ ಸ್ಥಾಪಿಸಿದರು. ಅದರಲ್ಲಿ ಸುರಕ್ಷಿತ ನಟರು ಸಂಬಳವಿಲ್ಲದೆ ಕೇವಲ ನಾಟ್ಯ ಕಲೆಯ ಅಭಿಮಾನದಿಂದ ಕೆಲಸ ಮಾಡುತ್ತಿದ್ದರು. ಚುರಮರಿ ಶೇಷಗಿರಿರಾಯರ ಶಕುಂತಲ ಮತ್ತು ಇತರ ನಾಟಕಗಳನ್ನು ಆಡಿ ಆರೇಳು ವರ್ಷಗಳಲ್ಲಿ ಅದು ಕರಗಿ ಹೋಯಿತು. ಬೆಳಗಾವಿ ಜಿಲ್ಲೆಯಲ್ಲಿ 'ಕೊಣ್ಣೂರಕರ ಸಂಗೀತ ನಾಟಕ ಮಂಡಳಿ' ಯನ್ನು ರಾ.ನಾ. ಶಿವಮುರ್ತಿಸ್ವಾಮಿಕಣಬರಗಿಮಠ ಅವರು ಸ್ಥಾಪಿಸಿ ನಾಟ್ಯ ಕಲೆಗೆ ತನು, ಮನ, ಧನ, ದಿಂದ ಸಹಾಯ ಮಾಡಿದರು. ಇನ್ನೂ ಅನೇಕ ನಾಟಕ ಮಂಡಳಿಗಳು ೧೯೦೫ ರಿಂದ ೧೯೧೫ರ ವರೆಗೆ ಸ್ಥಾಪಿಸಲ್ಪಟ್ಟವು, ಮಹಾಲಕ್ಷ್ಮಿ ಪ್ರಸಾದಿತ ವಿಶ್ವಗುಣಾದರ್ಶ, ಚಿಕ್ಕೋಡಿಕರ, ಹೊಂಬಳಕರ, ಇತ್ಯಾದಿ ಗದಗಿನ 'ಯಂಗ್ ಮೆನ್ಸ' ಫುಟ್ ಬಾಲ್ ಕ್ಲಬ್ ಅಮೇಚೂರ್ಸ ಮುಂತಾದ ಎಷ್ಟೋ ನಾಟಕ ಮಂಡಳಿಗಳು ಹುಟ್ಟಿದವು. ಆದರೆ ಒಂದೆರಡನ್ನು ಬಿಟ್ಟರೆ ಉಳಿದೆಲ್ಲವೂ ಅಶಿಕ್ಷಿತರ ಕೈಯಲ್ಲಿಯೇ ಇದ್ದವು. ನಾಟಕ ಮಂಡಳಿಗಳು ಹೆಚ್ಚಾದರೂ ಕಲೆ ಊರ್ಜಿತ ಸ್ಥಿತಿಯನ್ನು ಹೊಂದಲಿಲ್ಲ. ಮಂಡಳಿಗಳು ಹುಟ್ಟಿದವು. ಆದರೆ ಒಂದೆರಡನ್ನು ಬಿಟ್ಟರೆ ಉಳಿದೆಲ್ಲವೂ ಅಶಿಕ್ಷಿತರ ಕೈಯಲ್ಲಯೇ ಇದ್ದವು. ನಾಟಕ ಮಂಡಳಿಗಳು ಹೆಚ್ಚಾದರೂ ಕಲೆ ಊರ್ಜಿತ ಸ್ಥಿತಿಯನ್ನು ಹೊಂದಲಿಲ್ಲ. ಮಂಡಳಿಗಳು ನಾಯಕಸಾನಿಯನ್ನು ನಿಯಮಿಸಿ ಹಣಗಳಿಸಿದರೂ ನಾಟ್ಯ ಕಲೆಯಲ್ಲಿ ಸುಧಾರಣೆಯಾಗಲಿಲ್ಲ. ಸದ್ಯ (೧೯೨೦)

ಎಷ್ಟೋ ಮಂಡಳಿಗಳು ಕಾಲ್ಮುರಿದುಕೊಂಡು ಬಿದ್ದಿವೆ. ಕೆಲವು ಅರೆ ಜೀವ ಹಿಡಿದುಕೊಂಡಿವೆ. ಕೆಲವು ಸತ್ತು ಹೋಗಿವೆ. ವಿದ್ವಜ್ಜನರು ನಾಟ್ಯ ಕಲೆಯ ಕಡೆಗೆ ಗಮನಹರಿಸಿ ಅದನ್ನು ಊರ್ಜಿತ ಸ್ಥಿತಿಗೆ ತರಬೇಕಾಗಿದೆ.

**೧೬) ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿಯ ಸಂಕ್ಷಿಪ್ತ ಇತಿಹಾಸವು :**

ಮಂಡಳಿಯು ಶಾಂತಕವಿಗಳು ಬರೆದ ಬಾಣಾಸುರ : ಕೀಚಕವಧ, ವತ್ಸಲಾಹರಣ, ಸೀತಾರಣ್ಯ ಪ್ರವೇಶ, ಸುಂದೋಪಸುಂದ್ರ, ನಾಟಕಗಳನ್ನು ಪ್ರಯೋಗಿಸಿತು.

ಸೂತ್ರಧಾರನು ವಿದೂಷಕನ ನೆರವಿನಿಂದ ಗಣಪತಿ ಶಾರದೆಯರನ್ನು ಆಹ್ವಾನಿಸಿ ಅನುಗ್ರಹ ಪಡೆದ ನಂತರ ಒಂದೊಂದೆ ಸೂತ್ರದ ಪರಿಚಯ ನಡೆಯುತ್ತಿತ್ತು ನಾಟಕದ ಕೊನೆಗೆ ಮಂಗಳಾರತಿಯಾಗುತ್ತಿತ್ತು.

ಶಾಂತಕವಿಗಳು ಗದುಗಿನಲ್ಲಿ ಶಿಕ್ಷಕರಾಗಿದ್ದರು. ಈ ಮಂಡಳಿಗೆ ಅವರು ಮಾಡುತ್ತಿದ್ದ ಸಹಾಯವನ್ನು ಸಹಿಸದ ಮರಾಠಿ ಅಧಿಕಾರಿ ಡೆಪ್ಯೂಟಿ ಇನ್ಸಸ್ಪೆಕ್ಟರ್ ಅವರನ್ನು ಹೊಂಬಳಕ್ಕೆ (ಗದಗಿನಿಂದ ೯ ಮೈಲು) ವರ್ಗ ಮಾಡಿದರು. ಆದರೇನು ಕುದುರೆಯೇರಿ ಸಂಜೆ ಬಂದು ಮಂಡಳಿಗೆ ಸೂಚನೆಗಳನ್ನು ಕೊಟ್ಟು ಮರಳಿ ಮರುದಿನ ಕೆಲಸಕ್ಕೆ ಹಾಜರಾಗುತ್ತಿದ್ದರು ಸೂತ್ರಧಾರರೂ ಹಾಗೂ ಮುಖ್ಯ ವ್ಯವಸ್ಥಾಪಕರೂ ಆಗಿದ್ದ ಜೀವು ಬಾಳಪ್ಪನವರ ಮರಣ ಹಾಗೂ ಡಂಬಳ ಹುಚ್ಚಾಚಾರ್ಯರ ಆಕಸ್ಮಿಕ ಮರಣದಿಂದ ಈ ಮಂಡಳಿ ಮಂಡಳಿ ೧೮೯೪-೯೫ರಲ್ಲಿ ಮುಚ್ಚಿ ಹೋಯಿತು.

**೧೭) ರಂಗಭೂಮಿಯ ಹಿರಿಯರು : ಗರೂಡ ಸದಾಶಿವರಾಯರು**

ಗರೂಡರಿಗೆ 'ಅಭಿನಯ ಕೇಸರಿ', 'ನಾಟಕಾಲಂಕಾರ' ಬಿರುದುಗಳು ದೊರಕಿದವು. "ಚವತಿ ಚಂದ್ರ, ಕೃಷ್ಣ ಸುಧಾಮ,ಕಂಸವಧೆ, ಭಸ್ಮಾಸುರ ಮೋಹಿಸಿ, ತಾರಕಾಸುರ ವಧೆ, ಎಂಬ ಪೌರಾಣಿಕ ನಾಟಕಗಳನ್ನು 'ಎಚ್ಚಮ್ಮ ನಾಯಕ' ಎಂಬ ಐತಿಹಾಸಿಕ ನಾಟಕವನ್ನು ಹಾಗೂ 'ವಿಷಯ ವಿವಾಹ' ಉಗ್ರಕಲ್ಯಾಣ ಎಂಬ ಸಾಮಾಜಿಕ ನಾಟಕಗಳನ್ನು ರಚಿಸಿ ಅಭಿನಂದಿಸಿದರು. ಗರೂಡರು ಎಲ್ಲ ರೀತಿಯ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಆದರೆ ಸ್ತ್ರೀ ಪಾತ್ರ ಮಾತ್ರ ಮಾಡುತ್ತಿರಲಿಲ್ಲ. ಅವರು ಒಟ್ಟು ೪೦ ನಾಟಕಗಳನ್ನು ರಂಗಭೂಮಿಗೆ ತಂದಿದ್ದಾರೆ. ಗಾಯನಜ್ಞಾನ ಅವರಿಗಿತ್ತು. ತಮ್ಮದೇ ಆದ ಇಲೆಕ್ಟ್ರಿಕ್ ಲೈಟ್ ವ್ಯವಸ್ಥೆ ನಾಟಕಕ್ಕೆ ಮಾಡಿಕೊಂಡಿದ್ದರು.

ನಟರು ಕುಟುಂಬ ಸಹಿತ ಮಂಡಳಿಯಲ್ಲಿಯೇ ಇರುತ್ತಿದ್ದರು. ಗರೂಡರು ನೀತಿವಂತ ಬಾಳ್ವೆ ನಡೆಸಿದರು. ಸ್ವತಃ ಧರ್ಮನಿಷ್ಠೆ, ಕರ್ಮಠರಾಗಿದ್ದರು. ಮನೋರಂಜನೆಕರವನ್ನೂ ರದ್ದು ಮಾಡಿಸಲು ಪ್ರಯತ್ನಿಸಿದರು. ಸಿನೇಮಾಹಾವಳಿ ನೋಡಿ, ನಾಟಕಗೃಹ ಬೇರೆಯಾಗಬೇಕೆಂದು ಅಭಿಪ್ರಾಯಪಟ್ಟರು.

ಹೀಗೆ ಗರೂಡರು ರಂಗಭೂಮಿಗೆ ಮಾಡಿದ ಸೇವೆ ಚಿರಸ್ಮರಣೀಯವಾಗಿದೆ. ಗರೂಡರು ಮಾಡಿದ ಸೇವೆಯನ್ನು ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ನಾರಾಯಣರಾಯರು ನಿರೂಪಿಸಿದ್ದಾರೆ.

**೧೮ ದಿ. ಮರಾಠಿಸ್ಟೇಜ್ :**

ಮೊದಲು ಮರಾಠಿರಂಗಭೂಮಿ ಇರಲಿಲ್ಲವೆಂದೂ ಅದು ಕನ್ನಡ ರಂಗಭೂಮಿಯಿಂದ ನಾಟಕ ಶಕ್ತಿಯನ್ನೂ, ಅಭಿರುಚಿಯನ್ನೂ ಪಡೆದು ಕೊಂಡಿತೆಂದೂ ಪ್ರತಿಪಾದಿಸಿದ್ದಾರೆ. ಮರಾಠಿರಂಗ ಭೂಮಿಯ ಸಂಕ್ಷಿಪ್ತ ಇತಿಹಾಸವನ್ನು ಕೊಟ್ಟಿದ್ದಾರೆ.

ರಾಮಾಯಣ, ಮಹಾಭಾರತಗಳಿಂದ ಆಯ್ದ ಭಾಗಗಳಿಂದ ವಸ್ತುವನ್ನಿಟ್ಟು ಗೊಂಬೆಯಾಟ ಭಾಗವತರ ಆಟ, ಯಕ್ಷಗಾನ, ಪಾರಿಜಾತ ಆಟಗಳ ಕಲಾವಿದರು ಸಾಂಗ್ಲಿ, ಮಿರಜ್, ಕೊಲ್ಲಾಪುರ, ಈಚಲಕರಂಜಿ, ಕುರಂದವಾಡ ಮೊದಲಾದ ಮರಾಠಿ ಸಂಸ್ಥಾನಗಳಲ್ಲಿಯೂ ಈ ಆಟಗಳನ್ನಾಡುತ್ತಿದ್ದು. ಸಾಂಗ್ಲಿ ಸಂಸ್ಥಾನದ ದೊರೆಯ ಆದೇಶದಂತೆ ಅವರು ಒಂದು ಮರಾಠಿ ನಾಟಕ ಕಂಪನಿ ಪ್ರಾರಂಭಿಸಿದ್ದರು.

ರ ಕಾಲದಲ್ಲಿ (೧೮೭೦) ರಂಗಭೂಮಿ ಮೇಲೆ ಮೊದಲು ಸೂತ್ರಧಾರನು
ವಿದೂಷಕನನನ್ನು ಕರೆದು ಗಣಪತಿ, ಸರಸ್ವತಿಯರನೂ ಆಹ್ವಾನಿಸಿ
ಮಾಡಿ ನಾಟಕ ಆರಂಭಿಸುತ್ತಿದ್ದರು.

ಗೀತಾ–ನಾಟಕ ಜನಕ' ಎಂಬ ಖ್ಯಾತಿಯಿಂದ ಅಣ್ಣಾಸಾಹೇಬ ಕಿರ್ಲೋಸ್ಕರ
ಕಂಪನಿ ಕಟ್ಟಿಕೊಂಡು ಪ್ರಸಿದ್ಧ ಪಡೆಯುತ್ತಿದ್ದುದನನು ನಿಜವಾಗಿಯೂ
ನಾಟಕದ ಜನಕರಾಗಿದ್ದ ಚುರಮುರಿ ಶೇಷಗಿರಿರಾಯರು
ಸುಕತೆಯಿಂದ ನೋಡಿ ಸುಮ್ಮನಿರಬೇಕಾದ ಕನ್ನಡಿಗರು ಅವರಿಗೆ ಸರಿಯಾದ
ಹವನ್ನು ಕೊಡದಿದ್ದುದೇ ಈ ದುರ್ದೈವಕ್ಕೆ ಕಾರಣ ಎಂಬುದನ್ನು ಇಲ್ಲಿ
ವಾಗಿ ಪ್ರತಿಪಾದಿಸಿದ್ದಾರೆ.

ರಾಠಿಯಲ್ಲಿ ಸಂಗೀತ ನಾಟಕಗಳು ಗದ್ಯ ನಾಟಕಗಳಿಗಿಂತ ಹೆಚ್ಚಿನ

ಮಾನ್ಯತೆಗಳಿಸಲು ಹಲವಾರು ಕಂಪನಿಗಳು ಹುಟ್ಟಿ ನಾನಾ ಭಾಗಗಳಲ್ಲಿ ಪ್ರಯೋಗ ನಡೆಸಿದ್ದುದೇ ಮುಖ್ಯ ಕಾರಣ ಎನ್ನುತ್ತಾರೆ. ಕೇಳಕರ್, ಅಗರ್ಕರ್, ದೇವಲ್ ರಂಥವರು ಶೇಕ್ಸಪಿಯರ್‍ನ ನಾಟಕಗಳಾದ ಹ್ಯಾಮ್ಲೆಟ್, ಅಥೆಲ್ಲೊ ನಾಟಕಗಳನ್ನು ಮರಾಠಿ ರಂಗಭೂಮಿಯ ಮೇಲೆ ತಂದರು. ದೇವಲ್ ಮತ್ತು ಕೊಲಟಕರ್ ಸಾಮಾಜಿಕ ನಾಟಕ ರಚಿಸಿ ಹಿಂದೂ ಸಮಾಜದ ನ್ಯೂನ್ಯತೆಗಳನ್ನು ಎತ್ತಿ ತೋರಿಸಿದರು. ಇದೊಂದು ರೀತಿಯ ಕ್ರಾಂತಿಯನ್ನುಂಟು ಮಾಡಿತು.

ಜೋಗಳೇಕರ, ಬಾಲಗಂಧರ್ವ ಮತ್ತು ಬೋರಸ್, ಇವರ ರಂಗಭೂಮಿಯ ಕೊಡುಗೆಯನ್ನು ಸ್ಮರಿಸಬೇಕು. ನಾಟಕದಲ್ಲಿ ಹಾಡುಗಳನ್ನು ಮತ್ತೆ ಮತ್ತೆ ಹೇಳುವುದರ ನಿಜವಾದ ಉದ್ದೇಶವೆಂದರೆ ನಟನು ಹೇಳಬೇಕೆಂಬುದನ್ನು ಪ್ರೇಕ್ಷಕರು ಅರ್ಥಮಾಡಿಕೊಳ್ಳಬೇಕೆಂಬುದು ಎಂಬ ವಿಚಾರವನ್ನು ನಾರಾಯಣರಾಯರು ಬಹಳ ಕಳಕಳಿಯಿಂದ ತಿಳಿಸಿದ್ದಾರೆ ಕೇವಲ ಸಂಗೀತದ ಮೇಲೆಯೇ ಇತ್ತು ಕೊಟ್ಟರೆ ಅದು ಸಾಧ್ಯವಾಗುವುದಿಲ್ಲ. ಆದುದರಿಂದ ವಿಚಾರಗಳ ಸಂವಹನಕ್ಕೆ ಹೆಚ್ಚು ಮಹತ್ವ ಕೊಡಬೇಕೆಂಬ ಸೂಚನೆಯನ್ನು ನಾರಾಯಣರಾಯರು ಮಾಡುತ್ತಾರೆ.

ಮರಾಠಿ ರಂಗಭೂಮಿ ಮೇಲೆ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳನ್ನು ನಾಟಕಗಳಲ್ಲಿ ತರಲಾಗಿದೆ. ಎಂದೂ ವಿಧವಾ ವಿವಾಹ, ಬಾಲ್ಯ ವಿವಾಹ, ಸದ್ಯದ ಭಾರತದಲ್ಲಾದ ಸ್ಥಿತಿ ಇಂಥ ವಿಷಯಗಳನ್ನು ಅಳವಡಿಸಿಕೊಳ್ಳ ಬರುತ್ತದೆ ಎಂದೂ ಹೇಳುತ್ತಾರೆ. ಹಿಂದುಳಿದ ನಮ್ಮ ರಂಗಭೂಮಿಯು ಮೈಸೂರು ಮಹಾರಾಜರ ಆಶ್ರಯದಲ್ಲಿ ಬೆಳೆದು ಬರಲಿ ಎಂದು ಆಶಿಸುತ್ತಾರೆ.

ಹೀಗೆ ನಾರಾಯಣರಾಯರ ಈ ವಿಭಾಗದಲ್ಲಿಯ ಇತರ ಗದ್ಯ ಸಾಹಿತ್ಯವನ್ನು ಅವಲೋಕಿಸಿದಾಗ ನಮಗೆ ಅವರ ಕಥನ ಸಾಹಿತ್ಯದಲ್ಲಿ ಹೆಚ್ಚು ಕೃತಿಗಳು ದೊರೆಯುವುದಿಲ್ಲ "ಮೂಡಲು ಹರಿಯಿತು" ಎಂಬ ಕಾದಂಬರಿ ಉಪಲಬ್ಧವಿಲ್ಲ ಎಂದು ಈ ಅಧ್ಯಾಯದ ಪ್ರಾರಂಭದಲ್ಲಿ ಹೇಳಿದೆ ದೊರೆಯುವ ಏಕಮೇವ ಕಥೆ ಚಾರಿತ್ರಿಕವಾಗಿದೆ. ನೆತ್ತರದ ಕವಿತೆಗಳನ್ನು ಔತಣವು ಎಂಬ ಶೀರ್ಷಿಕೆ ಕಥೆಯ ಹೂರಣವನ್ನು ಸೂಚಿಸುತ್ತದೆ.

ನಾರಾಯಣರಾಯರ ಹದಿನೆಂಟು ಲೇಖನ, ಭಾಷಣ ಸಂದರ್ಶನಗಳು ಸಂಗ್ರಹಿಸಲ್ಪಟ್ಟಿವೆ. ಮುಖ್ಯವಾಗಿ ಕುಮಾರವ್ಯಾಸನ ಬಗ್ಗೆ ನಾರಾಯಣರಾಯರ ಚಿಂತನೆ ಹಾಗೂ ಕನ್ನಡರಂಗ ಭೂಮಿಯ ಸ್ಥಿತಿಗತಿಯ ಬಗ್ಗೆ ಇದ್ದ ಕಾಳಜಿ ಹೆಚ್ಚಿನ ಲೇಖನಗಳಲ್ಲಿ ವ್ಯಕ್ತವಾಗಿವೆ. ಇನ್ನುಳಿದ ಕೆಲವು ಬಿಡಿ ಬರಹಗಳಲ್ಲಿ

ನಾರಾಯಣರಾಯರಿಗಿದ್ದ ವಿವಿಧ ವಿಷಯಗಳಲ್ಲಿ ಆಸಕ್ತಿಗಳನ್ನು ಕಾಣಬಹುದು.

ಹೀಗೆ ನಾರಾಯಣರಾಯರು ಇತರ ಗದ್ಯ ಸಾಹಿತ್ಯದಲ್ಲಿ ವಿಷಯ ವೈವಿಧ್ಯ ಕಾಣುವುದಲ್ಲದೆ ನಾರಾಯಣರಾಯರ ವಿಶೇಷ ವಸ್ತುಗಳಲ್ಲಿಯ ಚಿಂತನೆಯನ್ನು ಕಾಣಬಹುದಾಗಿದೆ.

■

## ನಾಟಕ ಸಾಹಿತ್ಯ

"ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಈ ನಾಡಗೀತೆಯನ್ನು ಅಖಂಡ ಕರ್ನಾಟಕದ ಜನತೆಗೆ ಚಿರಪರಿಚಿತರಾದ ಹುಯಿಲಗೋಳ ನಾರಾಯಣರಾಯರು ಕನ್ನಡ ಸಾಹಿತ್ಯದ ಅರುಣೋದಯ ಕಾಲದ ಲೇಖಕರಾಗಿದ್ದರು. ನಾಡು ನುಡಿಗಳ ಅಭಿಮಾನವನ್ನು ಮೈಗೂಡಿಸಿದ್ದು ಅವರು ನಾಟಕ ಕಾವ್ಯ ನೀಡಿದರಲ್ಲದೇ ಸಾಮಾಜಿಕ ಕ್ಷೇತ್ರಕ್ಕೂ ಸೇವೆ ಸಲ್ಲಿಸಿದರು. ವೃತ್ತಿಯಿಂದ ವಕೀಲರಾಗಿದ್ದರೂ ನಾಡಿನ ಸಾಂಸ್ಕೃತಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧೀಜಿಯವರ ಪ್ರಭಾವದಲ್ಲಿ ಬೆಳೆದ ಇವರ ವಿಚಾರಗಳು ಉದಾತ್ತವಾಗಿದ್ದವು. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿರುವ ಒಳ್ಳೆಯ ವಿಚಾರಗಳನ್ನು ಅವರು ಸ್ವೀಕರಿಸಿದರು. ದೇಶೀಯ ಸಂಸ್ಕೃತಿಯನ್ನು ಬಹುವಾಗಿ ಪ್ರೀತಿಸಿದರು. ಆಲೂರು ವೆಂಕಟರಾಯರು, ಗಳಗನಾಥರು, ಕೆರೂರು ವಾಸುದೇವಾಚಾರ್ಯರಂಥವರ ಸಮಕಾಲೀನರ ಹತ್ತಿರವಾಗಿದ್ದರು.

ಕನ್ನಡವನ್ನು ಕಟ್ಟಿದವರಲ್ಲಿ ಒಬ್ಬರಾದ ಹುಯಿಲಗೋಳ ನಾರಾಯಣರಾಯರು ಕನ್ನಡದಲ್ಲಿ ನಾಟಕಗಳ ಕೊರತೆಯಿದ್ದಾಗ ಹಲವು ಹೊಸ ಹೊಸ ಮಾರ್ಪಾಡುಗಳನ್ನು ಮಾಡಿದರು.' ಕರ್ನಾಟಕದ ನಾಟಕ ಹುಟ್ಟಿದುದು ಕೃತಪುರದೊಳು' ಎಂದು ಶಾಂತಕವಿಗಳು ಹೇಳಿದ್ದಾರೆ. ಶ್ರೀ ವೀರನಾರಾಯಣಪ್ರಸಾದಿತ ಕೃತಪುರ ಕರ್ನಾಟಕ ನಾಟಕ ಮಂಡಳಿ ಗದಗ ೧೮೭೨-೭೩ರಲ್ಲಿ ಹುಟ್ಟಿಕೊಂಡಿತು. ಇದಕ್ಕೆ ಪ್ರೇರಕರಾದವರು. ಈ ಮಂಡಳಿಯು ೧೮೯೪-೯೫ರವರೆಗೂ ಅಸ್ತಿತ್ವದಲ್ಲಿದ್ದಿತು.

ಶಾಂತಕವಿಗಳ 'ಉಷಾಹರಣ' ಈ ಕಂಪನಿ ಆಡಿದ ಮೊದಲ ನಾಟಕ

ಸ್ವತಂತ್ರ ನಾಟ್ಯ ರಚನೆಯ ಕ್ಷೇತ್ರದಲ್ಲಿ ಹೊಸ ಹೆಜ್ಜೆ ಇಟ್ಟ ಶ್ರೇಯಸ್ಸು ಹುಯಿಲಗೋಳರ ೧೯೦೨ ರಲ್ಲಿಯೇ ಸ್ಥಾಪಿತವಾಗಿದ್ದು 'ದಿ ಯಂಗ್‌ಮೆನ್ಸ್ ಫುಟ್‌ಬಾಲ್ ಕ್ಲಬ್'ನ ಸದಸ್ಯರು.೧೯೧೧ ರಿಂದ ೧೯೨೪ ವರೆಗಿನ ಅವಧಿಯಲ್ಲಿ ನಾರಾಯಣರ ೧೫ ನಾಟಕಗಳು ಈಗ ಲಭ್ಯವಿದೆ. ಅವರೇ ಆದ್ಯರಂಗಾಚಾರ್ಯರಿಗೆ ಒದಗಿಸಿದ ಮಾಹಿತಿಯಂತೆ ಈ ನಾಟಕಗಳ ರಚನೆ ಹಾಗೂ ಪ್ರದರ್ಶನಗಳಿವೆ

ಸಂಬಂಧಿಸಿದ ವಿವರಗಳು ಹೀಗೆವೆ:

| ಕ್ರಸಂ | ನಾಟಕಗಳ ಹೆಸರು | ರಚನೆಯ ವರ್ಷ | ಮೊದಲನೇ ಪ್ರಸರಣ |
|---|---|---|---|
| ೧ | ವಜ್ರಮುಕುಟ | ೧೯೧೦ | ೧೯೧೧ |
| ೨ | ಪ್ರಮಾರ್ಜನ | ೧೯೧೧ [ಧಾರವಾಡಕರನ್ನೊಳಗೊಂಡು ಕೆಲವರು ಇದನ್ನು ತಪ್ಪಾಗಿ 'ಪ್ರೇಮಾರ್ಜುನ' ಎಂದು ಕರೆದಿದ್ದಾರೆ.] | ೧೯೧೨ |
| ೩ | ಕನಕವಿಲಾಸ | ೧೯೧೨ | ೧೯೧೩ |
| ೪ | ಮೋಹಲಹರಿ | ೧೯೧೩ | ೧೯೧೪ |
| ೫ | ಅಜ್ಞಾತವಾಸ | ೧೯೧೪ | ೧೯೧೫ |
| ೬ | ಪ್ರೇಮವಿಜಯ | ೧೯೧೫ | ೧೯೧೬ |
| ೭ | ಕುಮಾರರಾಮ | ೧೯೧೬ | ೧೯೧೭ |
| ೮<br>೯ | ಭಾರತ ಸಂಧಾನ<br>ಸ್ತ್ರೀ ಧರ್ಮ ರಹಸ್ಯ | ೧೯೧೭<br>೧೯೧೮ | ೧೯೧೮<br>೧೯೧೯ |
| ೧೦ | ಶ್ರೀ ವಿದ್ಯಾರಣ್ಯ | ೧೯೧೯ | ೧೯೨೦ |
| ೧೧ | ಶಿಕ್ಷಣ ಸಂಭ್ರಮ | ೧೯೨೦ | ೧೯೨೧ |
| ೧೨ | ಉತ್ತರ ಗೋಗ್ರಹಣ | ೧೯೨೦ | ೧೯೨೩ |
| ೧ | ಪತಿತೋದ್ಧಾರ | ೧೯೨೩ | ೧೯೫೨ |
| ೧೪ | ಪುನರಾಗಮನ | | |
| ೧೫ | ಶ್ರೀ ಕನಕದಾಸ ನಾಟಕವು [ಅಪೂರ್ಣ] | | |

ನಾರಾಯಣರಾಯ ಹುಯಿಲಗೋಳರ ತಮ್ಮ ನಾಟಕಗಳನ್ನು ವಸ್ತುವನ್ನು ವಿಜಯನಗರ ಸಾಮ್ರಾಜ್ಯದ ಇತಿಹಾಸ ಹಾಗೂ ಮಹಾಭಾರತದಿಂದ ಆಯ್ದುಕೊಂಡರು. ಅವರು ಬರೆದ ಮೂರು ಸಾಮಾಜಿಕ ನಾಟಕಗಳು ಅಪೂರ್ವವಾಗಿವೆ. ಒಂದು ಹಂತದಲ್ಲಿ ಸಾಮಾಜಿಕ ನಾಟಕಕಾರರಲ್ಲಿ ಮೊದಲಿಗರು ಎನ್ನಬಹುದು. ಅವರ ಸಾಮಾಜಿಕ ನಾಟಕಗಳು ರಂಗಭೂಮಿಯ ಮೇಲೆ ಪ್ರದರ್ಶಿತಗೊಂಡು ಬಹಳಷ್ಟು ಪ್ರಭಾವವನ್ನು ಬೀರಿದವು. ಅವರ ೧೫ ನಾಟಕಗಳಲ್ಲಿ ೫ ನಾಟಕಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಸಂಬಂಧಿಸಿದ ಪಾತ್ರಗಳು ಹಾಗೂ ಘಟನೆಗಳು. ಮೋಹಲಹರಿ ಹಾಗೂ ವಿದ್ಯಾರಣ್ಯ ಇವೆರಡೂ ವಿಜಯನಗರ ಸಾಮ್ರಾಜ್ಯ ವಿಷಯಗಳು. ಇಂಪೀರಿಯಲ್ ಗೆಜೆಟ್ ಮೊದಲಾದ ಆಕರಗಳಿಂದ ಇಂಗ್ಲೀಷನಲ್ಲಿರುವ ವಿಷಯಗಳನ್ನು ನಾಟಕಗಳ ವಸ್ತುಗಳನ್ನಾಗಿ ಆಯ್ದುಕೊಂಡು ಅವರ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿದೆ.

### ೧. ವಜ್ರಮುಕುಟ [೧೯೧೦]

ಬುಕ್ಕಾರಾಯನ ವಜ್ರಮುಕುಟ ಕಳುವಾಗುವುದರೊಂದಿಗೆ ಪ್ರಾರಂಭವಾಗುವ ಈ ನಾಟಕವನ್ನು ಅದು ಅವನಿಗೆ ಮರಳಿ ದೊರೆಯುವುದರೊಂದಿಗೆ ಮುಕ್ತಾಯವಾಗುತ್ತದೆ. ದುರ್ನಿತಿಯೆಂಬ ಶತ್ರು ಸರದಾರನು ಡಕ್ಕ–ಎಕ್ಕರೆಂಬ ಅರಮನೆಯ ಸೇವಕರಿಗೆ ಹಣದಾಸೆ ತೋರಿಸಿ ಮುಕುಟವನ್ನು ಕದ್ದಿರುತ್ತಾರೆ. ಹಾಗೂ ಈ ಕಳುವಿನ ಅಪರಾಧದ ಹೊರೆ ನಿರಪರಾಧಿಯಾದ ಬುಕ್ಕರಾಯನ ಅಣ್ಣನ ಮಗ ಸುಗುಮರಾಯನ ಮೇಲೆ ಬರುವಂತೆ ತಂತ್ರ ರಚಿಸುತ್ತಾರೆ. ಆದರೆ ಬುಕ್ಕರಾಯನ ಆಶ್ರಯವನ್ನು ಅರಸಿ ಬಂದ ವಾರಂಗಲ್ಲಿನ ಈ ತಂತ್ರವನ್ನು ವಿಫಲಗೊಳಿಸುತ್ತಾನೆ. ಮುಕುಟ ಬುಕ್ಕರಾಯನಿಗೆ ಮರಳಿ ದೊರೆಯುತ್ತದೆ ದುರ್ನಿತನಿಗೆ ಶಿಕ್ಷೆಯಾಗುತ್ತದೆ. ಇದು ರಾಯರ ಮೊದಲ ನಾಟಕವಾದರೂ ನಾಟಕೀಯ ಸನ್ನಿವೇಶಗಳು ಸಹಜ ಸಂಭಾಷಣೆ ಹಾಗೂ ಔಚಿತ್ಯಪೂರ್ಣವಾದ ಹಾಡುಗಳನ ಸಂಗಮದಿಂದಾಗಿ ಯಶಸ್ವಿಯಾಗಿದೆ. ಇಲ್ಲಿ ಎರಡು ಪ್ರಣಯ ಕಥೆಗಳನ್ನು ನಾಟಕದಲ್ಲಿ ಅಳವಡಿಸಿಕೊಂಡಿದ್ದಾರೆ. ನಾಟಕದಲ್ಲಿ ಶೃಂಗಾರ, ವೀರರಸಗಳ ಜೊತೆಗೆ ಹಾಸ್ಯರಸವನ್ನು ಬಳಸಿಕೊಂಡಿದ್ದಾರೆ. ಅರಮನೆಯ ಸೇವಕ ಕೋನಪ್ಪ ಹಾಗೂ ದುರ್ಗಿ ಇವರ ಸಂಸಾರ ಕಾಮಾಕ್ಷಿಯ ಬರುವ ಸಂಗ್ರಾಮರಾಯನ ತಂಗಿ ಕಾಮಾಕ್ಷಿ ಕೃಷ್ಣರಾಯನನ್ನು ಪ್ರೀತಿಸಿ ಲಗ್ನವಾದದ್ದು ಹಾಗೂ ಕಾಮಾಕ್ಷಿಯ ಗೆಳತಿ ತರಲಿಕೆಯನ್ನು ಪ್ರೇಮಿಸಿ ವಿವಾಹವಾದ ಪ್ರಸಂಗ ಇಲ್ಲಿ ಬಂದಿದೆ

### ೨. ಕನಕವಿಲಾಸ [೧೯೧೨]

ಇದೊಂದು ನೀತಿ ಪ್ರಧಾನ ನಾಟಕ. ಹಣ ಮತ್ತು ಅಧಿಕಾರದ ಆಸೆಗಾಗಿ

ಮನುಷ್ಯರು ಎಂತಹ ಕೃತ್ಯಗಳಿಗೂ ಹೇಸುವುದಿಲ್ಲ ಎಂದು ತೋರಿಸುವುದು ಈ ನಾಟಕದ ಉದ್ದೇಶ. ರಾಣಿ ಮಾನಿನಿ ಮತ್ತು ಅವಳ ಸಹಾಯಕ ಜಿಂಕಭಟ್ಟ ಇಂತಹ ಮನುಷ್ಯರು ವೃದ್ಧ ರಾಜ ಮಾನಹರನನ್ನು ಮದುವೆಯಾದ ಮಾನಿನಿ ನಿಷ್ಠಾವಂತ ಮಂತ್ರಿಯನ್ನು ಕೊಲ್ಲಿಸಿ ಅವನ ಮಗ ದಮನನನ್ನು ಅಡವಿಗಟ್ಟುತ್ತಾಳೆ. ರಾಜ ಅವಳಿಗೆ ಹೆದರಿ ತನ್ನ ಮೊದಲನೇಯ ರಾಣಿಯ ಮಗ ಪ್ರತಾಪನನ್ನು ಜಿಂಕಭಟ್ಟನ ರಕ್ಷಣೆಯಲ್ಲಿಟ್ಟಿರುತ್ತಾನೆ. ರಾಣಿ ಇವರಿಬ್ಬರ ವಿರುದ್ಧ ತಂತ್ರ ರಚಿಸಿ ಅವರ ನಾಶಕ್ಕಾಗಿ ಯತ್ನಿಸುತ್ತಾಳೆ. ಹಣಕ್ಕಾಗಿ ಏನನ್ನೂ ಮಾಡಬಲ್ಲ ಜಿಂಕಭಟ್ಟ ಅವಳಿಗೆ ಸಹಾಯ ಮಾಡುತ್ತಾನೆ. ಆದರೆ ಕೊನೆಗೆ ಗೆಲ್ಲುವರವರು ದಮನ ಹಾಗೂ ಪ್ರತಾಪರೇ. ಅವರು ರಾಜನ ಕಣ್ಣು ತೆರೆಯಿಸಿ ಅವನನ್ನು ಸನ್ಮಾರ್ಗಕ್ಕೆ ಹಚ್ಚುತ್ತಾರೆ. ಈ ಕಥೆಗೆ ಪೂರಕವಾಗಿ ಪ್ರತಾಪ ಹಾಗೂ ದಮನನ ತಂಗಿ ಗಂಧೆಯರ ಪ್ರೇಮಕಥೆ ರಾಣಿ ಹಾಗೂ ಜಿಂಕಭಟ್ಟರು ರಹಸ್ಯಗಳನ್ನು ಹೊರಗೆಡುಹುವ ದಂಡ ಚಂಡರ ಯುಕ್ತಿಗಳ ಕಥೆ ಮುಂತಾದ ಉಪಕಥೆಗಳು ಬರುತ್ತವೆ. ಇವೆಲ್ಲವನ್ನೂ ಒಂದು ಅಚ್ಚುಕಟ್ಟಾದ ಸಂವಿಧಾನದಲ್ಲಿ ಹೆಣೆಯುವುದರಲ್ಲಿ ರಾಯರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಎಂದಿನಂತೆ ನಾಟಕದಲ್ಲಿ ಬರುವ ಹಾಡುಗಳು ಅರ್ಥಪೂರ್ಣಗಿದ್ದು ವೈವಿಧ್ಯತೆಯಿಂದ ಕೂಡಿವೆ.

ದಂಡ : "ಎಲ್ಲಿ ಅಡಿಕೆಯನ್ನಷ್ಟೇ ಕೊಡಿರಿ."

ಜಿಂಕ : [ಟೊಂಕದಲ್ಲಿರುವ ಅಡಕಿ ಬೆಟ್ಟವನ್ನು ತೆಗೆದು ದಂಡನ ಮುಂದೆ ಹಿಡಿಯುತ್ತಾನೆ ]

ದಂಡ : "ಎಲ್ಲಿ ತರ್ರಿ"

ಜಿಂಕ : "ಹಾಗಲ್ಲದು ನನ್ನ ಧೋತರವನ್ನು ಮೊದಲು ತಾ."

ದಂಡ : [ಗಾಬರಿಯಾಗಿ] "ಧೋತರವ್ಯಾತಕ್ಕೆ ?

ಜಿಂಕ : "ಇದನ್ನು ಧೋತರದೊಳಗೆ ಕಟ್ಟಿ ಶೀಪಬೇಕು ."

ದಂಡ : "ಅಯ್ಯಯ್ಯೋ ನಮ್ಮಪ್ಪ [ಹಣೆ ಬಡಕೊಳ್ಳತ್ತಾ] ಏನು ?
ಅಡಿಕೆ ಶೀಪಬೇಕು ?"

ಇಂದ್ರ : " ಅಡಿಕೆಯನ್ನಲ್ಲೋ ! ಅಡಿಕೆ ಮೇಲಿನ ಧೋತರ ಸವೆದರೆ
ಎರಡನೆಯದವರದೇ ಸವೆಯಲಿ."

ಇಲ್ಲಿ ಬರುವ ಪಾತ್ರಗಳೆಲ್ಲವೂ ಸಂಪ್ರದಾಯಕವಾಗಿದ್ದರು ಪಾತ್ರಗಳಲ್ಲಿ

ನಾವಿನ್ಯತೆಯಿದೆ. ಜಿಂಕಭಟ್ಟನಿಗೆ ಬಂಗಾರ ಹಾಗೂ ಹಣದ ಬಗ್ಗೆ ವ್ಯಾಮೋಹವಿರುತ್ತದೆ ಊರೊಳಗಿನ ಬಂಗಾರವೆಲ್ಲ ನನ್ನ ಮುಂದೆ ಬೀಳಬೇಕು. ನಾನು ಮುಟ್ಟಿದ್ದೆಲ್ಲ ಚಿನ್ನವಾಗಬೇಕು. ಹೀಗೆಲ್ಲ ಬಡಬಡಿಸುತ್ತಾನೆ. ನಾನು ರಾಣಿ ವಾಸದ ಕಂಬ ಮುಟ್ಟಿದರೆ ಅದು ಬಂಗಾರವಾದರೆ ಹೇಗೆ ? ಅದಕ್ಕೆ ನನ್ನ ಮನೆಯಲ್ಲಿ ಮುಟ್ಟಿ ಪ್ರಯತ್ನಿಸೋಣ ಎಂದು ವಿಚಾರಿಸುತ್ತಾನೆ. ಅವರು ಯಾರಿಗೂ ಸಂಪತ್ತು ಸಾಗಬಾರದೆಂದು ಅಂದುಕೊಂಡು ಮನೆಗೆ ಹೋಗುತ್ತಾನೆ. ಅಲ್ಲಿ ಅವನ ಜೀನತನವೂ ಅಷ್ಟೇ ಅದ್ಭುತವಾಗಿ ಮೇಲೆ ವಿವರಿಸಿದ ದಂಡ, ಜಿಂಕಭಟ್ಟನ ಸಂಭಾಷಣೆಯಲ್ಲಿ ಕಾಣಬಹುದು.

೩. ಮೋಹಲಹರಿ [೧೯೧೩]

ಮೊದಲನೇಯ ದೇವರಾಯ ೧೪೦೬– ೧೪೨೨ ಆಳ್ವಿಕೆಗೆ ಸಂಬಂಧಿಸಿದ ಈ ನಾಟಕದಲ್ಲಿ ಬರುವ ಬಹಳಷ್ಟು ಪಾತ್ರಗಳು ದೇವರಾಯ, ಬಲ್ಲಾಳ, ಫಿರೋಜ್ ಷಾಹ ಹಾಗೂ ಘಟನೆಗಳು ಆದರೂ ನಾರಾಯಣರಾಯರ ಕಲ್ಪನೆ ಅವುಗಳಲ್ಲಿ ಜೀವ ತುಂಬಿದೆ. ಮುಗ್ಗಲ್ಲು ನಗರದ ಅಕ್ಕಸಾಲಿಗನ [ರಾಮಶರ್ಮರು ಬರೆದ ಇತಿಹಾಸದಲ್ಲಿ ರೈತ] ಮಗಳು ಪ್ರೀತಳೆಯೆಂಬುವಳಲ್ಲಿ ಅನುರಕ್ತನಾಗಿ ದೇವರಾಯ ಮುಗ್ಗಲ್ಲುಕೋಟೆಗೆ ಮುತ್ತಿಗೆ ಹಾಕುತ್ತಾನೆ. ಆದರೆ ಫಿರೋಜ್ ಷಾಹನಿಂದ ಸೋಲು ಅನುಭವಿಸಿ ಹಿಂದಿರುಗಬೇಕಾಗಿತ್ತದೆ. ಪ್ರೀತಳೆ ಅವಳು ಅಲ್ಲಿಂದ ತಪ್ಪಿಸಿಕೊಂಡು ಬರುತ್ತಾಳೆ. ಮೊದಲು ದೇವರಾಯನನ್ನು ಧಿಕ್ಕರಿಸಿದ ಅವಳಿಗೆ ಈಗ ಅವನಲ್ಲಿ ಪ್ರೀತಿ ಹುಟ್ಟುತ್ತದೆ. ಆದರೆ ಬಲ್ಲಾಳನು ಅವಳಲ್ಲಿ ಅನುರಕ್ತನೆಂದು ತಿಳಿದಾಗ ದೇವರಾಯ ಅವಳ ತ್ಯಾಗಕ್ಕೆ ಸಿದ್ಧನಾಗುತ್ತಾನೆ. ಅವಳ ಸಲುವಾಗಿ ತನಗೆ ಸೋಲಾಯಿತು ಎನ್ನುವ ವಿಷಾದ ಭಾವನೆಯೂ ಅವನಲ್ಲಿದೆ. ಪ್ರೀತಿಳೆಯ ಬಿಡುಗಡೆಯಲ್ಲಿ ಮಹತ್ವದ ಪಾತ್ರವಹಿಸಿದಂಬಲ್ಲಾಳನ ಸಹೋದರಿ ಪೊನ್ನಳೆ ಅವನಿಗೆ ಲಭಿಸುತ್ತಾಳೆ. ಪ್ರೀತಳೆ ಕುಮಾರಿಯಾಗಿಯೇ ಉಳಿಯಲು ನಿರ್ಧರಿಸುತ್ತಾಳೆ.

ಪ್ರೀತಳೆಯ ತಂದೆ ತಾಯಿಯರ ವಿಚಾರ ವ್ಯವಹಾರಗಳು, ಪೆದ್ದಂಭಟ್ಟನ ಸಂಸಾರದ ತಾಪತ್ರಯಗಳು ಇವು ನಾಟಕ ಪ್ರಮುಖ ಆಕರ್ಷಣೆಗಳು. ನಾಟಕದಲ್ಲಿ ಹಲವಾರು ತಿರುವುಗಳನ್ನು ಹೊಂದಿದ್ದು ಅವುಗಳನ್ನು ಸಮರ್ಥವಾಗಿ ಬಳಸಿದ್ದಾರೆ.

೪.ಅಜ್ಞಾತವಾಸ [೧೯೧೪]

ಈ ನಾಟಕದಲ್ಲಿ ಅಜ್ಞಾತವಾಸ ಅನುಭವಿಸುವವರು ವಿಜಯನಗರದ ರಾಜಕುಮಾರರಾದ ಕೃಷ್ಣದೇವರಾಯ ಹಾಗೂ ಅಚ್ಯುತರಾಯ, ಎರಡನೇಯ ವೀರ ನರಸಿಂಹರಾಯರು [೧೫೦೩–೧೫೦೯] ಮಲತಮ್ಮಂದಿರಾದ ಕೃಷ್ಣರಾಯ

ಹಾಗೂ ಅಚ್ಯುತರಾಯರ ಕಣ್ಣು ಕೀಳಿಸಿ ಸೆರೆಮನೆಯಲ್ಲಿಡಲು ಮಂತ್ರಿ ತಿಮ್ಮರಸನಿಗೆ ಆಜ್ಞೆ ಮಾಡುತ್ತಾನೆ. ಆದರೆ ತಿಮ್ಮರಸ ಯುಕ್ತಿಯಿಂದ ಅವರನ್ನು ಪಾರು ಮಾಡಿತ್ತಾನೆ. ಅವರು ಗುರುತು ಮರೆಸಿಕೊಂಡು ವಾರಂಗಲ್ಲಿನ ದೊರೆ ತೈಲಪರಾಯನ ಆಶ್ರಯ ಪಡೆಯುತ್ತಾರೆ. ತಿಮ್ಮರಸನ ಸಲಹೆಯಂತೆ ತೈಲಪರಾಯನ ಸಹಾಯ ದೊರಕಿಸಿ ಕೃಷ್ಣದೇವರಾಯ ವಿಜಯನಗರವನ್ನು ವಶಮಾಡಿಕೊಳ್ಳಲು ಸಿದ್ದತೆ ನಡೆಸುತ್ತಾನೆ. ಇದು ನಾಟಕದಲ್ಲಿ ಬರುವ ಐತಿಹಾಸಿಕ ಕತೆ.

ನಾರಾಯಣರು ಒಂದು ಪ್ರೇಮಕಥೆಯನ್ನು ಜೋಡಿಸಿದ್ದಾರೆ. ಚಿನ್ನಾದೇವಿ ಕೃಷ್ಣದೇವರಾಯರ ಪ್ರೇಮ, ತೈಲಪರಾಯನ ಚಿಕ್ಕಹೆಂಡತಿ ಕೇತಲಾದೇವಿ ಕೃಷ್ಣದೇವರಾಯನನ್ನು ಮೋಹಿಸಿದರೂ ಅವನು ಇವಳಿಗೆ ಒಪ್ಪದೇ ಇರುವುದು ಕೊನೆಯಲ್ಲಿ ಅವಳಿಗೆ ಪಶ್ಚಾತ್ತಾಪವಾಗುವುದು, ಇದು ನಾಟಕದ ಸುಖಾಂತ್ಯವಾಗುತ್ತದೆ. ಇಲ್ಲಿ ಬರುವ ಹಾಡುಗಳು ವೈವಿಧ್ಯಪೂರ್ಣವಾಗಿವೆ. ಲಾವಣಿ ಹಾಡುಗಳು ಈ ನಾಟಕದಲ್ಲಿ ಬಂದಿರುವುದು ವಿಶೇಷ.

### ೫. ಪ್ರೇಮ ವಿಜಯ ನಾಟಕ [೧೯೧೫]

ರಾಯರ ಹಲವಾರು ನಾಟಕಗಳಂತೆ ಈ ನಾಟಕವು ಐತಿಹಾಸಿಕ ಹಿನ್ನಲೆಯುಳ್ಳ ಕಾಲ್ಪನಿಕ ನಾಟಕ. ಇಲ್ಲಿಯೂ ಕೃಷ್ಣದೇವರಾಯ [೧೫೦೯-೧೫೩೦] ಚರಿತ್ರೆಗೆ ಸಂಬಂಧಿಸಿದ ವ್ಯಕ್ತಿ ಘಟನೆಗಳಿವೆ. ಆದರೆ ಮುಖ್ಯ ಆಸ್ಥೆ ಅದರ ಶೀರ್ಷಿಕೆಯೇ ಸೂಚಿಸುವಂತೆ ಪ್ರೇಮ. ಪ್ರತಾಪದೇವರಾಯನೊಡನೆ ನಡೆದ ಯುದ್ದಗಳಲ್ಲಿ ಕೃಷ್ಣದೇವಗಿರಿಯ ಜಯಗಳಿಸುತ್ತಾನೆ. ಪ್ರತಾಪದೇವ ಓಡಿ ಹೋದರೂ ಅವನ ಮಗ ಹಾಗೂ ಬಂಧುಗಳು ಕೃಷ್ಣದೇವರಾಯನ ಕೈವಶವಾಗುತ್ತಾರೆ. ಮಗ ಅವಮಾನ ತಾಳದೇ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವನ ತಂಗಿ ಸಿಂಗಳೆ ಅಣ್ಣನ ಸಾವಿನ ಸೇಡು ತೀರಿಸಿಕೊಳ್ಳಲು ಪುರುಷ ವೇಷದಿಂದ ಕೃಷ್ಣದೇವರಾಯನ ಪಾಳೆಯನ್ನು ಪ್ರವೇಶಿಸಿ ಅವನ ಕೊಲೆಗೆ ಯತ್ನಿಸುತ್ತಾಳೆ. ಅದು ವಿಫಲವಾಗಿ ಅವಳು ಅವರ ಬಂಧಿಯಾಗುತ್ತಾಳೆ. ಇವರೀವರಲ್ಲಿ ಪ್ರೇಮ ಬೆಳೆದು ತಿಮ್ಮರಸನ ಮಧ್ಯಸ್ಥಿಕೆಯಿಂದ ವಿವಾಹ ನೆರವೇರುತ್ತದೆ. ಇದರೊಂದಿಗೆ ಪ್ರತಾಪರಾಯನ ಸ್ನೇಹವೂ ದೊರಕುತ್ತದೆ.

ನಾಟಕದ ರಚನೆ ಸರಳವಾಗಿದ್ದು ಕಥೆಯು ಓಟಕ್ಕೇ ಹೆಚ್ಚಿನ ಗಮನ ದೊರಕಿದೆ. ಆದರೂ ರಾಯರು ವೈವಿಧ್ಯ ದೊರಕಿಸಿದ್ದಾರೆ ಮಲ್ಲಣ್ಣನಂಥ ಸ್ವಾಭಿಮಾನ ಸ್ವಾಮಿ ನಿಷ್ಠರು ಮಧುಪರಾಯನ ಸುಖ ವಸ್ತುಗಳು ಕೇಸರಿಯಂಥ ಸ್ವಾಭಿಮಾನಿ ಕ್ಷತ್ರಿಯ ಮಹಿಳೆಯರು ನಾಟಕದ ಸ್ವಾರಸ್ಯವನ್ನು ಹೆಚ್ಚಿಸಿದ್ದಾರೆ. ಹಾಡುಗಳಂತೂ ತಮ್ಮಲಯ ವೈವಿಧ್ಯ ಹಾಗೂ ಸಾಹಿತ್ಯ ಗುಣಗಳಿಂದ ಮೆಚ್ಚುಗೆ ಗಳಿಸುತ್ತದೆ.

೬. ಕುಮಾರರಾಮ [೧೯೧೬]

ಈ ನಾಟಕದ ವಸ್ತುವನ್ನು ತಾವು ಬಯಲಾಟವೊಂದರಿಂದ ತೆಗೆದುಕೊಂಡಿದ್ದಾಗಿ ರಾಯರು ಹೇಳಿದ್ದಾರೆ. ಕುಮಾರರಾಮನ ಚರಿತ್ರ, ಕುಮಾರರಾಮನ ಸಾಂಗತ್ಯ, ಚನ್ನಬಸವ ಪುರಾಣ ಇಂಥ ಹಲವಾರು ಆಕರಗಳಲ್ಲಿಯೂ ದೊರೆಯುತ್ತದೆ. ಕುಮಾರರಾಮನ ತಂದೆ ಕಂಪಿಲ ಐತಿಹಾಸಿಕ ವ್ಯಕ್ತಿಯಾಗಿದ್ದು,೧೪ನೇಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಕರ್ನಾಟಕ ರಾಜ್ಯವನ್ನು ಆಳಿದನೆಂದು ಚರಿತ್ರೆಗಳಿಂದ ತಿಳಿದುಬರುತ್ತದೆ ಈ ಕಥೆಯನ್ನು ರಾಯರು ತುಂಬ ಸಮರ್ಥರಾಗಿ ನಾಟ್ಯರೂಪಕ್ಕಿಳಿಸಿದ್ದಾರೆ.

ಕುಮಾರರಾಮನಲ್ಲಿ ಚಿಕ್ಕ ವಯಸ್ಸಿನ ಅವನ ಮಲತಾಯಿ ರತ್ನಾಜಿಯ ಮೋಹ ಅದು ವಿಫಲವಾದಾಗ ಅವಳಲ್ಲಿ ಉಕ್ಕುವ ಸೇಡಿನ ಭಾವನೆ, ಅದರ ಪರಿಣಾಮಗಳು ನಾಟಕದಲ್ಲಿ ಹಲವಾರು ನಾಟಕೀಯ ಸನ್ನಿವೇಶಗಳಿಗೆ ಎಡೆಮಾಡಿಕೊಟ್ಟಿವೆ. ಕೆಲವೊಂದು ಸನ್ನಿವೇಶಗಳು ಕೃತ್ರಿಮವೆನಿಸಿದರೂ ಪರಿಣಾಮಕಾರಿಯಾಗಿವೆ. ರತ್ನಾಜಿ ಎಂಥ ನಾಟಕಕಾರನಿಗೂ ಆಹ್ವಾನವಾಗಬಲ್ಲ ಗಟ್ಟಿ ಪಾತ್ರ. ಈ ಪಾತ್ರವನ್ನು ರಾಯರು ತುಂಬ ಕುಶಲತೆಯಿಂದ ನಿರ್ವಹಿಸಿದ್ದಾರೆ. ಕುಮಾರರಾಮನನ್ನು ತನ್ನ ಇಚ್ಛೆಗೆ ಒಗ್ಗಿಸಿಕೊಳ್ಳಲು ಅವಳು ಕೈಗೊಳ್ಳು ವ ತಂತ್ರಗಳು,ಹೂಡುವ ವಾದಗಳು ನಾಟಕಗಳಲ್ಲಿ ಪ್ರಭಾವಿಯಾಗಿ ಮೂಡಬಂದಿದೆ.

ರತ್ನಾಜಿ: ರಾಮಕುಮಾರಾ, ರಾಮನ ವ್ಯಥೆಯಿಂದ ತುಂಬಿದ ನೀನು ಹೇಳುವ ಯಾವ ಮಾತುಗಳೂ ಕೇಳಿಸಲೊಲ್ಲವು. ಈ ಜನ್ಮ ಹೋದ ಮೇಲೆ ಮುಂದೆ ನರಕಕ್ಕೋ, ಸ್ವರ್ಗಕ್ಕೋ ಯಾರಿಗೆ ಗೊತ್ತು ? ನರಕವನ್ನು ನೋಡಿವರು ಯಾರೂ ಇಲ್ಲ. ಸ್ವರ್ಗವನ್ನು ನೋಡಿದವರೂ ಯಾರೂ ಇಲ್ಲ. ಒಂದು ವೇಳೆ ಇದ್ದರೆ ಯಾವುದು ದೊರಕುತ್ತದೋ ಹೇಳುವವರೂ ಯಾರೂ ಇಲ್ಲ. ಮುಂದಿನ ಜನ್ಮದಲ್ಲಿ ಇಂಥವರೇ ಆಗಿ ಹುಟ್ಟುತ್ತೇವೆಂದು ಹೇಳುವವರಾದರೂ ಯಾರೂ ಇದ್ದಾರೆ ? ಹೇಳು. ಅಂದಮೇಲೆ ಜನ್ಮದಲ್ಲಿ ನಮ್ಮ ಮನಸ್ಸಿಗೆ ಬಂದ ಎಲ್ಲ ತರಹದ ಸೌಖ್ಯವನ್ನು ಅನುಭೋಗಿಸಿ ಸಾಯುವುದು ಲೇಸಲ್ಲವೆ ? ಆ ನಿನ್ನ ಒಣ ವೇದಾಂತವನ್ನು ಬಿಟ್ಟುಬಿಡು.........

ಕಥೆಯಲ್ಲಿ ಅನೇಕ ನಾಟಕೀಯ ತಿರುವುಗಳಿರುವುದರಿಂದ ಎಲ್ಲಿಯೂ ಬೇಸರ ಬರುವುದಿಲ್ಲ. ಭಾಷೆ ಅವಶ್ಯವಿದ್ದಾಗ ಉಜ್ವಲತೆಯನ್ನು ಪಡೆದಿದೆ. ಹಾಡುಗಳು ಅರ್ಥಪೂರ್ಣವಾಗಿದ್ದು ನಾಟಕಕ್ಕೆ ಕಳೆ ತಂದಿವೆ.

೭. ಭಾರತ ಸಂಧಾನ [೧೯೧೭]

ಪಾಂಡವರು ವನವಾಸ ಅಜ್ಞಾತವಾಸಗಳನ್ನು ಕಳೆದು ಕೌರವರೊಂದಿಗೆ

ಸಂಧಾನಕ್ಕಿಳಿಯುವ ಮೂಲಕ ಮಹಾಭಾರತದ ಉದ್ಯೋಗಪರ್ವದಲ್ಲಿ ಬರುವ ಕತೆಯನ್ನು ಇಲ್ಲಿ ಕುಮರವ್ಯಾಸನನ್ನು ಆಧಾರವಾಗಿಟ್ಟುಕೊಂಡು ರಾಯರು ನಾಟ್ಯೀಕರಿಸಿದ್ದಾರೆ, ಹೆಚ್ಚಿನ ಬದಲಾವಣೆಗಳನ್ನೇನೂ ಮಾಡಿಕೊಂಡಿಲ್ಲ. ಪಾತ್ರಗಳ ಕಲ್ಪನೆಯಲ್ಲಿಯೂ ವ್ಯತ್ಯಾಸವಿಲ್ಲ. ಭಾಷೆಯ ಸರಳತೆ ಹಾಗೂ ವಿಷಯದ ಸಮಗ್ರತೆ ಇಲ್ಲಿ ಅವರ ಪ್ರಮುಖ ಸಾಧನೆಗಳಾಗಿವೆ. ಈ ನಾಟಕ ಹಾಡುಗಳಿಲ್ಲದೇ ಸಂಪೂರ್ಣವಾಗಿ ಗದ್ಯದಲ್ಲಿರುವುದು ಅದರ ವೈಶಿಷ್ಟ್ಯವಾಗಿದೆ. ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಈ ನಾಟಕ ಪ್ರದರ್ಶಿತನಾಗಿ ಮೆಚ್ಚುಗೆ ಪಡೆಯಿತು

೮. ಸ್ತ್ರೀ ಧರ್ಮ ರಹಸ್ಯ [ರಚನೆ : ೧೯೧೮ ಪ್ರಕಟಣೆ : ೧೯೨೧]

ರಾಯರು ಬದುಕಿರುವಾಗಲೇ ಪ್ರಕಾಶಿತವಾದ ಮೂರು ನಾಟಕಗಳಲ್ಲಿ ಇದು ಮೊದಲನೆಯದು. ನಾಟಕಕ್ಕೆ ಬರೆದ ಪ್ರಸ್ತಾವನೆಯಲ್ಲಿ "ಕನ್ನಡನಾಡಿನಲ್ಲಿ ಹುಟ್ಟಿಬೆಳೆದು ಜನ್ಮವನ್ನು ಕಳೆಯುತ್ತಿರುವುದರಿಂದ ನಾನು ನಮ್ಮ ಕನ್ನಡ ತಾಯಿಯ ಸೇವೆಯನ್ನು ಕೈಕೊಳ್ಳುವುದು ನನ್ನ ಧರ್ಮವೆಂದು ಬಗೆದು ಈ ಯತ್ನಕ್ಕೆ ಕೈಕೊಟ್ಟಿರುತ್ತೇನೆ" ಎಂದು ಹೇಳಿ ತಮ್ಮ ನಾಡು – ನುಡಿಗಳ– ಪ್ರೇಮಕ್ಕೆ ಅಭಿವ್ಯಕ್ತಿ ಕೊಟ್ಟಿದ್ದಾರೆ. ಈ ಪ್ರಸ್ತುತ ನಾಟಕವು ಕರ್ನಾಟಕದ ಸ್ವಲ್ಪೇ ಸ್ವಲ್ಪಾದ ಮೂಲ ನಾಟಕಗಳಲ್ಲಿಯೂ ಒಂದಾಗಿರುವುದು ಎಂಬ ಅವರ ಹೇಳಿಕೆಯಲ್ಲಲಿ ಸತ್ಯವಿದೆ. ನಾರಾಯಣರಾಯರಲ್ಲಿ ಎದ್ದು ಕಾಣುವ ಗುಣವೆಂದರೆ ಭಾಷೆಯ ಬಗ್ಗೆ ಎಚ್ಚರ. ಕನ್ನಡ ನುಡಿಯನ್ನು ಒಂದೇ ಸ್ವರೂಪದ್ದಾಗಿ ಮಾಡಲು ವಿದ್ವಾಂಸರು ಆಗ ನಡೆಸಿದ್ದ ಪ್ರಯತ್ನಗಳನ್ನು ಗಮನಿಸುತ್ತಾರೆ. ನಾಟಕಕಾರನಾಗಿ ತಮ್ಮ ಉದ್ದೇಶ ಭಾಷಾ ಭೇದಗಳನ್ನು ತೋರಿಸುವುದಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. "ಆಯಾ ಪ್ರಾಂತಗಳಲ್ಲಿ ಕಲಿತ ಮತ್ತು ಗ್ರಾಮ್ಯಜನರು ಆಡುತ್ತಿರುವ ವಿಧ ವಿಧದ ಭಾಷೆಗಳನ್ನು ಕೂಡ ಹಾಕಿದ್ದೇನೆ."

ಸ್ತ್ರೀ ಧರ್ಮರಹಸ್ಯದಲ್ಲಿ ದೋಷಗಳಿಲ್ಲವೆಂದಲ್ಲ. ಆದರೆ ಅದು ಸಾಮಾಜಿಕ ನಾಟಕಗಳ ವಿನ್ಯಾಸವನ್ನು ಮೊಟ್ಟಮೊದಲು ನಿರ್ಧರಿಸಿತು ಎನ್ನುವ ಸತ್ಯವನ್ನು ಅಲ್ಲಗಳೆಯಲಾಗುವುದಿಲ್ಲ. ಇದನ್ನು ಕೆ. ಮರುಳಸಿದ್ದಪ್ಪನವರು, "ಹೊಸ ನಾಟಕಗಳಿಗೆ ಮಾದರಿಯಾಗಿ ಪರಿಣಮಿಸಿದ ಉತ್ತಮ ಕಲಾಕೃತಿ" ಎಂದು ಅದನ್ನು ಹೊಗಳಿದ್ದಾರೆ. ಸ್ತ್ರೀ ಸ್ವಾತಂತ್ರ್ಯಗಳನ್ನು ಸೃಷ್ಟಿಸಿ ನಾಟಕಕ್ಕೆ ಒಂದು ವೈಚಾರಿಕ ಕೇಂದ್ರವನ್ನು ರಾಯರು ಒದಗಿಸಿದ್ದಾರೆ. ಈ ದೃಷ್ಟಿಯಿಂದ ಎರಡನೇಯ ಅಂಕದ ಎರಡನೇಯ ಪ್ರವೇಶದಲ್ಲಿ ಬಿಜ್ಜೋದರರಾಯನ ಅಧ್ಯಕ್ಷತೆಯಲ್ಲಿ ನಡೆಯುವ ಸಭೆ ವಿಶೇಷ ಮಹತ್ವದ್ದಿದೆ.

ಈ ನಾಟಕದಲ್ಲಿ ಸ್ತ್ರೀಯೇ ಸೂತ್ರಧಾರಳು. ಪುರುಷರಿಗಿದ್ದಷ್ಟೇ ಸ್ತ್ರೀಯರಿಗೂ ಅಧಿಕಾರವಿರುತ್ತದೆ ಎಂದು ಹೇಳುತ್ತಾಳೆ. ಇಲ್ಲಿ ವಿಜ್ಞೋದರ ನಾಯಕನನ ಪಾತ್ರದಲ್ಲಿದ್ದರೆ, ಸೂಸಿಲೆ ಸ್ತ್ರೀ ಸಂಸ್ಕೃತಿಯ ಪ್ರತೀಕಳಾಗಿರುತ್ತಾಳೆ. ನಮ್ಮ ಸ್ತ್ರೀಯರಲ್ಲಿ ಶಿಕ್ಷಣವನ್ನು, ಸುಧಾರಣೆಯನ್ನು ಬಯಸುವ ಪಂಡಿತರು ನಮ್ಮ ಆರ್ಯ ಧರ್ಮದ ತತ್ವಗಳನ್ನು ಬಿಡದೇ ಅವುಗಳಿಗೆ ಹೊಂದಿಕೊಂಡು ಅವರಲ್ಲಿ ಸುಧಾರಣೆ ಬಯಸುವರು.

ಭಾಷಾ ವೈವಿಧ್ಯತೆಯನ್ನು ತರುವ ಒಂದೇ ಉದ್ದೇಶದಿಂದ ಚೆನ್ನಕೇಶವನಂಥ ಅನವಶ್ಯಕ ನಾಟಕಗಳಲ್ಲಿ ಅಳವಡಿಸಿದ್ದಾರೆ. ಚೆನ್ನಕೇಶವ ಮೈಸೂರು ಭಾಗದವ. ಆತ ಧಾರವಾಡಕ್ಕೆ ಬಂದಾಗ ಇಲ್ಲಿಯ ಜನಗಳ ಭಾಷೆ ಬಗೆಗೆ ತಾತ್ಸಾರ ಬರುವುದು ಕಂಡುಬರುತ್ತದೆ.

೯. ಶ್ರೀ ವಿದ್ಯಾರಣ್ಯ [ ೧೯೧೯]

ಅಚ್ಚಕನ್ನಡಿಗರಾದ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಪುಣ್ಯ ರೂಪವಾದ ಈ ನಾಟಕದಲ್ಲಿ ನಾರಾಯಣರಾಯರು ನಾಡು. ನುಡಿಗಳ ಅಭಿಮಾನಕ್ಕೆ ಸುಂದರ ಅಭಿವ್ಯಕ್ತಿ ದೊರಕಿದೆ. ಈ ನಾಟಕಕ್ಕೂ ೧೯೨೩ ರಲ್ಲಿ ಪ್ರಕಟವಾದ ಗಳಗನಾಥರ' ಮಾಧವ ಕರುಣಾ ವಿಲಾಸ'ಕ್ಕೂ ಎದ್ದು ಕಾಣುವ ಹೋಲಿಕೆಗಳಿವೆ. ವಿಜಯನಗರ ಸಾಮ್ರಾಜ್ಯವನ್ನು ಕಟ್ಟುವುದರಲ್ಲಿ ಮಾಧವಾಚಾರ್ಯರ ಮಾರ್ಗದರ್ಶನವನ್ನೂ ಎರಡೂ ಕೃತಿಗಳು ಪ್ರಶಂಶಿಸುತ್ತವೆ. ಇದಕ್ಕೂ ಹೆಚ್ಚಾಗಿ ಈ ಕಾರ್ಯದಲ್ಲಿ ಮುಸಲ್ಮಾನರನ್ನೂ ಒಳಗೊಂಡಂತೆ ಎಲ್ಲ ಜಾತಿ- ಧರ್ಮಗಳ ಜನರು ಇದರಲ್ಲಿ ಸಹಭಾಗಿಯಾಗಿದ್ದರು ಎನ್ನವುದನ್ನು ಇವು ಒತ್ತಿ ಹೇಳುತ್ತವೆ. ಎರಡು ಕೃತಿಗಳಲ್ಲಿಯೂ ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯವನ್ನು ಸಂಗ್ರಾಮದ ರಾಜಕೀಯ ಬೆಳೆವಣಿಗೆಗಳ ಮುನ್ನೋಟಗಳಿವೆ.

ನಾಟಕದಲ್ಲಿ ಬುಕ್ಕ ಮತ್ತು ನೀಲಾಂಬಿಕೆಯ ಪ್ರೇಮ ಕತೆಯು ಅದು ಅವರಿಬ್ಬರ ಮದುವೆ ಆಗುವ ಮೂಲಕ ಬುಕ್ಕ ಆನೆಗೊಂದಿಯ ಜಂಬುಕೇಶ್ವರನ ರಾಜವಂಶ ಮುಂದುವರೆಯುವುದಕ್ಕೆ ಕಾರಣವಾಗುತ್ತದೆ. ಈ ನಾಟಕದಲ್ಲಿ ನಾಟಕ ಕಲೆಯ ಸಂವಾದ ಸನ್ನಿವೇಶಗಳು ತುಂಬಾ ಸೊಗಸಾಗಿವೆ. 'ಮಾಧವ ಕರುಣಾ ವಿಲಾಸ' ದಲ್ಲಿದ್ದಂತೆ ಮಾಧವಾಚಾರ್ಯರ ಮಾತುಗಳಲ್ಲಿ ಧರ್ಮ ಸಹಿಷ್ಣುತೆಯ ಅಭಿವ್ಯಕ್ತಿಯಿದೆ. ಉದಾಹರಣೆಗೆ ಹಿಂದೂ-ಮುಸ್ಲಿಮರ ಉಪೇಕ್ಷೆಗೆ ಗುರಿಯಾದ ಖಾಜಾಖಾನ ತನ್ನ ಸಮಸ್ಯೆಯನ್ನು ಮಾಧವಾಚಾರ್ಯರ ಮೂಲಕ ಬಗೆಹರಿಸಿಕೊಳ್ಳುತ್ತಾನೆ. ಖಾಜಾಖಾನ ತನಗೆ ಇಸ್ಲಾಮಿನಲ್ಲಿ ನಂಬಿಕೆಯಿಲ್ಲ ಎಂದು ಹೇಳಿದಾಗ ಮಾಧವಾಚಾರ್ಯರು ಮತಾಂತರಕ್ಕೆ ಅವಕಾಶ ನೀಡುವುದಿಲ್ಲ. ಹೀಗಾಗಿ ಈ ಮೂಲಕ 'ವಿದ್ಯಾರಣ್ಯ' ಇಂದಿಗೂ ನಮಗೆ ಪ್ರಸ್ತುತವಾಗಿ ಕಾಣುತ್ತದೆ.

೧೦. ಶಿಕ್ಷಣ ಸಂಭ್ರಮ [೧೯೨೦ ಪ್ರಕಟಣೆ : ೧೯೨೩]

ಈ ಜಗದ ಮಾನವ ಸಮಾಜವ ಸುಧಾರಿಸಲು

ನೈಜ ಮರ್ಮವ ತಿಳುಹಿ ಸಾಜಮಾರ್ಗವ ತೋರ್ಪೆ

ಎಂದು ನಾಂದಿಯಲ್ಲಿ ಹೇಳಿ ಸೂತ್ರಧಾರ ನಾಟಕದ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ನಮ್ಮ ದೇಶದ ಸ್ಥಿತಿಗೆ ಅನುಕೂಲವಾಗುವಂತಹ ಶಿಕ್ಷಣವು ಯಾವ ತೆರನಾಗಿರಬೇಕು ? ಯಾರಿಂದ ದೊರೆಯಬೇಕು ? ಇಂಥ ಪ್ರಶ್ನೆಗಳನ್ನು ಎತ್ತುವುದರ ಮೂಲಕ ನಾಟಕ ತನ್ನ ಪ್ರಸ್ತುತತೆಯನ್ನು ಸ್ಥಾಪಿಸುತ್ತದೆ. ನಾಟಕದಲ್ಲಿ ಆಧುನಿಕ ಶಿಕ್ಷಿತರ ಹಲವಾರು ಮಾದರಿಗಳಿವೆ. ಸದಾಶಿವರಾಯ ಶಿಕ್ಷಕ ವೃತ್ತಿಯಲ್ಲಿದ್ದಾನೆ. ಹಳೆಯ ನಂಬಿಕೆಗಳ ಟೀಕೆ, ಸ್ತ್ರೀ ಶಿಕ್ಷಣದ ಅನವಶ್ಯಕತೆಯ ಪ್ರಚಾರ ಅವನಿಗೆ ಪ್ರಿಯವಾದ ವಿಷಯಗಳು ಅವನ ಹೆಂಡತಿ ವರದಾಬಾಯಿ ಮುಂಬೈಯಲ್ಲಿ ಶಿಕ್ಷಣ ಪಡೆದವಳು. ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವವಿಲ್ಲದಿದ್ದರೂ ಪ್ರೀತಿಯಿದೆ. ಮಿಸೆಸ್ ಮಂಜಮ್ಮ ವಿದೇಶದಲ್ಲಿ ಶಿಕ್ಷಣ ಪಡೆದು ಫೀ ಮೇಲ್ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲ್‌ಳಾಗಿದ್ದಾಳೆ, ಮನೆಯಲ್ಲಿ ಇವನ ಸ್ಥಾನ ಅಡುಗೆಯವನದು. ಇವರಲ್ಲದೇ ಅಮೃತರಾಯ – ವತ್ಸಲಾ ಎಂಬ ಇನ್ನೊಂದು ಜೋಡಿಯೂ ಇದೆ. ಅಮೃತರಾಯ ರೆವಿನ್ಯೂ ಇಲಾಖೆಯಲ್ಲಿ ತಹಶೀಲ್ದಾರನೆಂದು ದುಡಿದು ಸಾಕಷ್ಟು ಲಂಚ ಗಳಿಸಿ ನಿವೃತ್ತನಾಗಿದ್ದಾನೆ. ಚಿಕ್ಕ ಹೆಂಡತಿಯನ್ನು ಮದುವೆಯಾದ ಇವನನ್ನು ಯಾವಾಗಲೂ ಅಸುರಕ್ಷಿತತೆ ಕಾಡುತ್ತದೆ. ಇವನ ಮಗ ಬೊಧರಾಯ ಅಮೆರಿಕೆಯಲ್ಲಿ ಶಿಕ್ಷಣ ಪಡೆದು ಬಂದಿದ್ದರೂ ಸ್ವದೇಶೀ ಚಳುವಳಿ ಸೇರಿ ಕಾರ್ಯನಿರತನಾಗಿದ್ದಾನೆ. ಇವನನ್ನು ನಾಟಕಗಳ ಮುಖವಾಣಿ ಎಂದು ಕರೆಯಬಹುದು. ಮಂಜಮ್ಮನ ಪ್ರಭಾವದಿಂದ ಒಡೆಯುತ್ತಿರುವ. ಸಂಸಾರಗಳನ್ನು ಸರಿಯಾದ ಹಾದಿಗೆ ಹಚ್ಚುವುದು ಇವನ ವಿಧಾಯಕ ಕಾರ್ಯ. ಅವನಲ್ಲಿ ಪಾಶ್ಚಾತ್ಯ ಶಿಕ್ಷಣದ ಶಕ್ತಿ, ದೌರ್ಬಲ್ಯಗಳ ನಿಜವಾದ ಅರಿವು ಇರುವುದರಿಂದ ಅವನು ಈ ಶಿಕ್ಷಣ ಭಾರತೀಯ ಸಂದರ್ಭದಲ್ಲಿ ಸೃಷ್ಟಿಸಿದ ವಿಪರ್ಯಾಸಗಳನ್ನು ಗುರುತಿಸಲು ಶಕ್ತನಾಗುತ್ತಾನೆ.

ಈ ಪೊಳ್ಳು ಸಂಸ್ಕೃತಿಯ ಒಂದು ಬಲವಾದ ಸಂಕೇತ ಚಹದ ಚಟ. ಸದಾಶಿವನ ಆಳು ಮುಕ್ಕಣ್ಣ ಇದನ್ನು ಸರಿಯಾಗಿಯೇ ಗುರುತಿಸಿದ್ದಾನೆ. ಆದರೆ ಇದು ಚಹದ ಬಗೆಗೆ ಅದು ವಿಶೇಷವಲ್ಲ. ಎಲ್ಲರ ಮನೆಯಲ್ಲೂ ಬಾಲಕರಿಂದ ಹಿಡಿದು ದೊಡ್ಡವರವರೆಗೂ ಚಹಾ ಸೇವನೆ ಇದ್ದೇ ಇದೆ.

ಮುಕ್ಕ ಛಿ ಹೋಗೊ ಇವನ ಮಂಚಾಳ ಹೋಗಲಿ ! ಏನ ಹೋಲಿ

ಬಂಡಾಟಪಾ ಈ ಚಾದ್ದು ? ಕುಂತರ ಚಾ, ನಿಂತರ ಚಾ, ಎದ್ದರ ಚಾ, ಎಲ್ಲಿ ನೋಡಿದರೂ ಚಾನ ಚಾ.

## ೧೧. ಉತ್ತರಕುಮಾರ ಇಲ್ಲವೇ ಗೋಗ್ರಹಣ ನಾಟಕವು [೧೯೨೦]

ಈ ನಾಟಕದ ಮೂಲ ಕುಮಾರವ್ಯಾಸನ ಭಾರತ ಕಥಾಮಂಜರಿಯಲ್ಲಿದೆ. ನಾರಾಯಣರಾಯರು ಕತೆಯಲ್ಲಿ ಹೆಚ್ಚಿನಬದಲಾವಣೆಯನ್ನೇನೂ ಮಾಡಿಕೊಂಡಿಲ್ಲ. ಅವರ ಉತ್ತರ ಬಹುಮಟ್ಟಿಗೆ ಕುಮಾರವ್ಯಾಸನ ಉತ್ತರವನ್ನೆ ಹೋಲುತ್ತಾನೆ ಆದರೆ ಇಲ್ಲಿ ಕುತೂಹಲಕಾರಿಯಾದ ಹೊಸ ಅಂಶಗಳೂ ಇವೆ. ರಾಯರು ಉತ್ತರಕುಮಾರನನ್ನು ತಮ್ಮ ಕಾಲದ ಕರ್ತೃತ್ವ ಶಕ್ತಿಯಲ್ಲದ ಮಾತಿನಲ್ಲಿಯೇ ತೃಪ್ತಿಪಡಿಸುವ ದುರ್ಬಲ ತರುಣ ಪೀಳಿಗೆಯ ಪ್ರತಿನಿಧಿಯಾನ್ನಾಗಿ ಪರಿವರ್ತಿಸುವುದು. ಒಂದು ಎದ್ದುಕಾಣುವ ವಿಶೇಷ. ಈ ಪ್ರಶ್ನೆ ನೇರವಾಗಿ ಅವರ ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ಪರಿಸರಕ್ಕೆ ಸಂಬಂಧಿಸಿದ ಪ್ರಶ್ನೆ. ಶ್ರೀರಂಗರ ಹಲವಾರು ನಾಟಕಗಳಲ್ಲಿಯೂ ಇಂಥ ಚಿತ್ರಗಳನ್ನು ನೋಡಬಹುದು.

ಉತ್ತರ ಕುಮಾರನ ಪೌರುಷದ ಮಾತುಗಳು ಕೇವಲ ಭಾಷಣದಲ್ಲಿ ಮುಗಿಯುತ್ತವೆ. ಈ ಚರ್ಚೆ ಪಾರತಂತ್ರ್ಯದಲ್ಲಿ ಅಸಹಾಯಕರಾಗಿದ್ದ ಭಾರತೀಯಯರ ರಾಜಕೀಯ ನಿಲುವಿನ ಅಣಕದಂತಿದೆ ಎನವುದನ್ನು ಎಲ್ಲರಿಗೂ ತಿಳಿಯುವಂಥ ವಿಷಯ.

ಬೇಂದ್ರೆಯವರ 'ಮಕ್ಕಳಿವರೇನಮ್ಮ ಮೂವತ್ತು ಮೂರು ಕೋಟಿ ?' ಎಂಬ ಅವರ ಮಾತಿನ ಹಿಂದೆಯೇ ಅಂಥದೇ ಭಾವನೆಗಳನ್ನು ಕಾಣುತ್ತೇವೆ.

## ೧೨. ಪತಿತೋದಾರ [೧೯೨೩. ರಂಗ ಆವೃತ್ತಿ ಪ್ರಕಟಣೆ : ೧೯೫೩]

ಸಾಮಾಜಿಕ ಅವನತೆ ಈ ನಾಟಕದ ವಸ್ತು. ಈ ಅವನತಿ ಸಮಾಜದ ಯಾವುದೊಂದು ನಾಟಕದ ಮುಖ್ಯ ಪಾತ್ರಗಳಲ್ಲೊಂದಾದ ವರ್ಗಕ್ಕೆ ಸೀಮಿತವಾಗಿರದೇ ವ್ಯಾಪಕ ಸ್ವರೂಪದ್ದಾಗಿದೆ. ನಾಟಕದ ಮುಖ್ಯ ಪಾತ್ರಗಳಲ್ಲೊಂದಾದ ಸರ್ವೋತ್ತಮ ಹೇಳುವಂತೆ, "ಒಟ್ಟು ಸಮಾಜದ ಕಟ್ಟಡವೇ ಅದರ ಹತ್ತಿದೆ ? ನೀವೇನು ? ಯಾರೇನು ? ಎಲ್ಲರೂ ಪತಿತರು !" [ಈ ದೃಷ್ಟಿಯಿಂದ ಶ್ರೀರಂಗದ ಹರಿಜನ್ವಾರ ಹಾಗೂ ಸಂಧ್ಯಾಕಾಲಗಳಂಥ ನಾಟಕಗಳಿಗೂ ಈ ನಾಟಕಕ್ಕೂ ನೇರವಾದ ಸಂಬಂಧವಿದೆ.] ಆದರೆ ನಾಟಕದ ಮುಕ್ತಾಯ ಸೂಚಿಸುವಂತೆ "ಜಾತಿ ಹೋಯಿತು: ನೀತಿ ಹೋಯಿತು. ಹೆಣ್ಣು ಗಂಡು ಸಮಾನರಾದರು, ಮತ್ತಿನ್ನೇನು ಉಳಿದುದು ?" ಎಂಬ ಚೆನ್ನ ಮುದ್ದಣಾಚಾರ್ಯರ ಹಳಹಳಿಯಲ್ಲಿಯೇ ಸಮಾಜದ ಪ್ರಗತಿಯ ಸೂಚನೆಯೂ ಇದೆ. ಸರ್ವೋತ್ತಮನಲ್ಲಿ ಒಂದು ಆದರ್ಶದ ಕಲ್ಪನೆಯೂ

ಇದೆ. ವ್ಯಕ್ತಿಧರ್ಮ, ಸಮಾಜದಧರ್ಮ, ರಾಷ್ಟ್ರಧರ್ಮ ಇವು ಬೇರೆ ಬೇರೆ ಇದ್ದರೂ ಒಂದಕ್ಕೊಂದು ಆಧೀನ ಇವೆ. ಒಂದರೊಳಗೊಂದು ಲೀನ ಆಗತಾವ. ವರ್ತುಳದೊಳಗಿನ ವರ್ತುಳದಂತೆ."ನಾಟಕದ ಮುಖ್ಯ ಉದ್ದೇಶ ಸಮಾಜದ ಪತನದ ಚಿತ್ರಣವೇ ಅಗಿದ್ದರೂ ಅಲ್ಲಿ ಉದ್ಧಾರದ ಸೂಚನೆಗಳೂ ಇವೆ. ಉದಾಹರಣೆಗೆ ಕನಕರಾಯನ ಕುಟುಂಬದ ಘಟನೆಗಳನ್ನು ನಾಟಕಕಾರರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಅವರು ಬ್ರಿಟೀಷ್ ಆಡಳಿತದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನಿವೃತ್ತರಾದರೂ ದಾಸ್ಯವೃತ್ತಿಯೇ ಬಾಳಿದ ಅವನತಿಗೆ ದೇಶ ಹಾಗೂ ಸಮಾಜಗಳ ಬಗೆಗೆ ಯಾವ ಕಳಕಳಿಯೂ ಇಲ್ಲ. ಮಗ ನಿರುದ್ಯೋಗಿ, ಹೆಂಡತಿ ಅಸಹಾಯಕಳು, ಮಗಳು ಹಾಗೂ ಅಳಿಯಂದಿರನ್ನೂ ದೂರಮಾಡಿಕೊಂಡು ತಾನು ಮನೆಯಲ್ಲಿ ದಪ್ಪಿಂದ ಇದ್ದವ. ಹೀಗೆ ನಾಟಕ ಸರಳವಾಗಿ ಸಾಗಿದೆ. ಭಾಷೆಯ ವಿಷಯದಲ್ಲಿ ನಾರಾಯಣರಾಯರು ಒಳ್ಳೇ ಚೆನ್ನಾಗಿ ನಿರೂಪಣೆ ಮಾಡಿರುವುದು ನಾಟಕಕ್ಕೆ ವಿಶೇಷ ಕಳೆಬಂದಿದೆ.

೧೩. ಪುನರಾಗಮನ

ಈ ನಾಟಕದ ವಸ್ತು ಪ್ರೇಮ. ಶ್ರೀಮಂತ ನಂಜುಂಡರಾಯನ ಮಗಳು ಪ್ರಮೀಲೆ ಉಚ್ಚ ಶಿಕ್ಷಣ ಪಡೆದಳು. ಸ್ತ್ರೀ ಸ್ವಾತಂತ್ರ್ಯ ಹಾಗೂ ಸ್ತ್ರೀ ಪುರುಷ ಸಮಾನತೆಗಳಲ್ಲಿ ನಂಬಿಕೆ ಇರದವಳು. ತಾಯಿಯಿಲ್ಲದ ಮಗಳಾದ್ದರಿಂದ ಅಜ್ಜಿಯಲ್ಲಿ ಬೆಳೆದಿದ್ದಾಳೆ. ಅವಳ ಒಂದು ಭಾಷಣದಿಂದಾಗಿ ಸಮಾಜದಲ್ಲಿ ಅಲ್ಲೋಲಕಲ್ಲೋಲುವಾಗುತ್ತದೆ. ಅಗಸರಭರನು ಸರಸವ್ವರಿಂದ ಪ್ರಾರಂಭಿಸಿ ಕೋರ್ಟ ನಾಝರ್ ಕಾಮತರಾಯ ಹಾಗೂ ಹೆಂಡತಿ ಭಾಮಾದೇವಿಯವರವರೆಗಿನ ಸಂಸಾರಗಳು ಒಡೆದುಹೋಗುವ ಸ್ಥಿತಿಗೆ ಬರುತ್ತವೆ. ಆದರೆ ಅವರ ಸಮಯೋಚಿತ ವಿವೇಕದಿಂದಾಗಿ ಈ ಗಂಡಾಂತರ ತಪ್ಪುತ್ತದೆ. ತನ್ನ ವಿಚಾರಗಳಿಂದಾಗಿ ತನ್ನನ್ನು ಮೂರೂ ಮದುವೆಯಾಗಲು ಸಿದ್ಧರಾಗದಾದಾಗ ಪ್ರಮೀಲೆ ತಂದೆಯ ಮನಃಶಾಂತಿಯ ಕಾರಣದಿಂದಾಗಿ ತನ್ನ ವಿಚಾರಗಳನ್ನು ಬದಲಿಸಿತ್ತಾಳೆ. ಭಾಮಾಳ ಮಧ್ಯಸ್ಥಿಕೆಯಿಂದಾಗಿ ಅವಳು ಬಡವನಾದರೂ ಸದ್ಗುಣಿಯಾದ ವಿಜಯನ ಕೈಹಿಡಿಯುವಂತಾಗುತ್ತದೆ. ವಿಜಯ ಅರ್ಜುನನ ಹೆಸರುಗಳಲ್ಲೊಂದು ಇಲ್ಲಿಯೂ ಕೂಡ ಮಹಾಭಾರತದ ಕಥೆಯಲ್ಲಿದ್ದಂತೆ ಪ್ರಮೀಲಾ – ವಿಜಯರ ಸಂಬಂಧ ಯುದ್ಧದಲ್ಲಿ ಪ್ರಾರಂಭವಾಗಿ ಪ್ರೇಮದಲ್ಲಿ ಕೊನೆಗೊಳ್ಳುತ್ತದೆ. ನಾರಾಯಣರಾಯರ ಉಳಿದ ನಾಟಕಗಳಿಗೆ ಹೋಲಿಸಿದರೆ ಈ ನಾಟಕ ಹೆಚ್ಚು ಸರಳವಾದರೂ ಆಕರ್ಷಕವಾಗಿದೆ. ಅವರ ವಿಚಾರಗಳಲ್ಲಿ ಬದಲಾವಣೆಯಾಗಲಿಲ್ಲ. ನಾಟಕದಲ್ಲಿ ವಿಜಯ ಇವುಗಳನ್ನು ಪ್ರತಿನಿಧಿಸುತ್ತಾನೆ. ಎಂದಿನಂತೆ ಪಾತ್ರ ಹಾಗೂ ಭಾಷೆಗಳಲ್ಲಿ ವೈವಿಧ್ಯವಿದೆ.

## ೧೪. ಶ್ರೀ ಕನಕದಾಸ ನಾಟಕವು

ನಾರಾಯಣರಾಯರ 'ನಾಂದಿ' ಗಳು ನಾಟಕೀಯತೆ ಹಾಗೂ ವೈವಿಧ್ಯಗಳಿಂದಾಗಿ ನಮ್ಮ ಗಮನ ಸೆಳೆಯುತ್ತವೆ ಈ ನಾಟಕದ ನಂದಿಯಲ್ಲಿ ಸೂತ್ರಧಾರ ಮಾರೀಷನರಿಗೆ ಹೇಳುವ 'ಉದಾಸ ನಾನು' 'ಉದಾಶನಾಗು' ಎಂಬ ಮಾತು 'ದಾಸನಾಗು' 'ದಾಸನಾಗು' ಎಂಬ ಕನಕದಾಸನಿಗೆ ಕೇಳಿಸಿ ಅವನನ್ನು ಸಿಟ್ಟಿಗೆಬ್ಬಿಸುತ್ತದೆ. ತನ್ನ ಶೌರ್ಯದ ಬಗ್ಗೆ ಅಹಂಕಾರ ಹೊಂದಿದ ಕನಕನಿಗೆ 'ದಾಸನಾಗು'

ಎಂಬ ಉಪದೇಶ ಅವಮಾನಕರವೆನಿಸುತ್ತದೆ. ಆದರೆ ಯುದ್ದದಲ್ಲಿ ಸೋತು ಗಾಯಗೊಂಡು ರಣಭೂಮಿಯಲ್ಲಿ ಬಿದ್ದುಕೊಂಡಾಗ ತಿರುಪತಿ ತಿಮ್ಮಪ್ಪ ಸ್ವತಃ ಬಂದು ಉಪಚರಿಸುವ ಪವಾಡದಿಂದಾಗಿ ಅವನಲ್ಲಿ ಮಹತ್ವದ ಪರಿವರ್ತನೆಯಾಗುತ್ತದೆ. ಹರಿಯ 'ದಾಸತ್ವವನ್ನು ಈಗ ಸಂತೋಷದಿಂದ ಒಪ್ಪಿಕೊಳ್ಳುವವನಿಗೆ 'ದಾಸ' ಶಬ್ದ ಅವಮಾನಕರವೆನಿಸುವುದಿಲ್ಲ ದೈವೀ ಅಂಶಗಳನ್ನು ನೇರವಾಗಿ ಬಳಸಿಕೊಳ್ಳುವ ಮೂಲಕ ಈ ನಾಟಕ ಹೊಸ ಪ್ರಯೋಗವೆಂದೆನಿಸುತ್ತದೆ. ನಾಟಕ ಈಗ ಒಂದೇಅಂಕದಲ್ಲಿ ಲಭ್ಯವಿದೆ. ಅದರೆ ಅದು ತನ್ನಷ್ಟಕ್ಕೆ ತಾನೇ ಪರಿಪೂರ್ಣವಾಗಿದೆಯೆಂದೆನಿಸುತ್ತದೆ. ಒಂದು ವೇಳೆ ನಾಟಕ ಅಪೂರ್ಣವಾಗಿದ್ದರೆ ಇದೇ ನಾರಾಯಣರಾಯರ ಕೊನೆಯ ನಾಟಕವಾಗಿರಬೇಕು.

" ಸ್ವತಃ ಅವರು [ನಾರಾಯಣರಾಯರು] ರಂಗಭೂಮಿಯ ಬರಲಿಲ್ಲ. ಆದರೆ ನಾಟಕವನ್ನು ಆಡಿಸುವಲ್ಲಿ ನಾಟಕದ ತಾಲೀಮು ನಡೆದಾಗ ನಿರ್ದೇಶನ ಮಾಡುವಲ್ಲಿ ಬಹಳ ಆಸಕ್ತಿವಹಿಸುತ್ತಿದ್ದರು. ಒಂದು ನಾಟಕವು ರಂಗಭೂಮಿಯ ಮೇಲೆ ಬರುವ ಮುನ್ನ ೫ – ೬ ತಿಂಗಳಾದರೂ ಆ ನಾಟಕದ ತಾಲೀಮು ಸತತವಾಗಿ ನಡೆಯುತ್ತಿತ್ತು" ಎಂದು ಪ್ರತ್ಯಕ್ಷದರ್ಶಿಗಳಾಗಿದ್ದ ವರದರಾಜ ಹುಯಿಲಗೋಳರು ಬರೆದಿದ್ದಾರೆ. ನಾರಾಯಣರಾಯರ ರಂಗಭೂಮಿಯಲ್ಲಿಯ ಸಂಕ್ಷಿಪ್ತ ಇತಿಹಾಸ ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿಯ ಇತಿಹಾಸ' ಪ್ರಚಲಿತ ಸಂಗೀತ ನಾಟಕಗಳನ್ನು ಮೊದಲು ಹುಡುಕಿ ತೆಗೆದವರು ಯಾರು ? ಕನ್ನಡ ರಂಗಭೂಮಿಯ ಹಿರಿಯರು ಗರೂಡ ಸದಾಶಿವರಾಯರು, 'ವ್ಯವಸಾಯ ರಂಗಭೂಮಿಯ ಸಮಸ್ಯೆ' ಕನ್ನಡ ನಾಟಕದಲ್ಲಿಯ ಗುಣದೋಷಗಳು The Marathi Stage ಹಾಗೂ ೧೯೩೪ರಲ್ಲಿ ನಡೆದ ವಿಜಾಪುರ ಜಿಲ್ಲೆಯ ನಾಟಕ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಸಾಕ್ಷಿಯಾಗಿದೆ.

■

೧] ರಂಗಭೂಮಿಯ ಬಗ್ಗೆ ಸುಶಿಕ್ಷಿತರ ಔದಾಸೀನ್ಯ :

ನಮ್ಮ ನಾಟ್ಯಕಲೆಯ ಕೇವಲವಾಗಿ ಅಶಿಕ್ಷಿತರ ಕೈಯಲ್ಲಿ ಸಿಕ್ಕಿ ನುಗ್ಗಾಗಿ ಹೋಗಿದೆ. ನಾಟ್ಯಕಲೆಯ ಬಗ್ಗೆ ತುಸುವಾದರೂ ಕಲ್ಪನೆ ಇಲ್ಲದ ಜನಗಳೇ ನಾಟಕವನ್ನಾಡಲಿಕ್ಕೆ ನಿಂತಿದ್ದಾರೆ ಅವರಾಡುವ ಮಾತುಗಳು, ಮಾಡಿ ತೋರಿಸುವ ಅಭಿನಯಗಳೂ, ಹೇಳುವ ಸಂಗೀತಗಳು ಜನಗಳಲ್ಲಿ ತುಂಬಾ ಹೇಸಿಗೆಯನ್ನು ಹುಟ್ಟಿಸಿವೆ.

೨] ಒಳ್ಳೆಯ ನಾಟಕಗಳ ಕೊರತೆ ;

"ಕನ್ನಡದಲ್ಲಿ ರಂಗಭೂಮಿಯ ಮೇಲೆ ಆಡಿ ತೋರಿಸಲಿಕ್ಕೆ ತಕ್ಕವುಗಳಾದ ನಾಟಕಗಳನ್ನು ಮೂಲ ಮತ್ತು ಸ್ವತಂತ್ರ ನಾಟಕಗಳನ್ನು ಬರೆಯುವವರು ಕಡಿಮೆಯಾಗಿದ್ದರೆ" ಕೆಲವು ಒಳ್ಳೆಯ ನಾಟಕಗಳಿದ್ದರೂ ನಾಟಕ ಮಂಡಳಿಗಳೂ ಅವುಗಳನ್ನು ಆಯ್ದುಕೊಳ್ಳುವುದಿಲ್ಲ.

೩] ಮರಾಠಿ ನಾಟಕಗಳ ಹಾವಳಿ :

"ಕನ್ನಡ ಜನಗಳಲ್ಲಿ ಮರಾಠಿ ನಾಟಕಗಳೇ ನಾಟಕಗಳು. ಅವರು ಅಭಿನಯವೇ ಅಭಿನಯ. ಅವರ ಸಂಗೀತವೆಂಬ ತಿಳುವಳಿಕೆಯು ಬಲವಾಗಿ ಹಬ್ಬಿಕೋಡಿತು. ಕನ್ನಡ ನಾಟಕ ಮಂಡಳಿಗಳನ್ನು ಮರಾಠಿ ನಾಟಕಗಳು ಕನ್ನಡದಲ್ಲಿ ಪರಿವರ್ತಿಸಿ ಆಡಿ ತೋರಿಸಹತ್ತಿದರು. ರೂಪಾಂತರಿತ ಮಾಡಿದರೂ ಮಾಡಲಿ ನಮ್ಮ ಕೆರೂರು ವಾಸುದೇವಾಚಾರ್ಯರ 'ಪತಿವಶೀಕರಣ' ಇಲ್ಲವೇ ಶ್ರೀಯುತ ಮುದವೀಡು ಕೃಷ್ಣರಾಯರ 'ಸೌಭದ್ರ'ದಂತೆ ಕನ್ನಡ ಸಂಸ್ಕೃತಿಯನ್ನಾದರೂ ಇಟ್ಟುಕೊಂಡು ಮಾಡಿದರೆ ? ಅದೂ ಇಲ್ಲ" ಮರಾಠಿ ರಂಗಭೂಮಿಯ ದುಷ್ಪರಿಣಾಮಗಳನ್ನು ತಡೆಗಟ್ಟಲು ನಾರಾಯಣರಾಯರು ಮಾಡಿದ ಪ್ರಯತ್ನವನ್ನು ಅ.ನ.ಕೃಷ್ಣರಾಯರು ಗುರ್ತಿಸಿದರು. " ಶ್ರೀ ನಾರಾಯಣರಾಯರು ಉತ್ತರ ಕರ್ನಾಟಕದ ರಂಗಭೂಮಿಯನ್ನು ಮರಾಠಿ ರಂಗಭೂಮಿಯ ಅನಾರೋಗ್ಯಕರ ಪ್ರಭಾವದಿಂದ ಮುಕ್ತಗೊಳೀಸಲು ಪ್ರಯತ್ನಿಸಿದರು. ಆದರೆ ಈ ಪ್ರಯತ್ನದಲ್ಲಿ ಅವರಿಗೆ ಹೇಳಿಕೊಳ್ಳುವಂತಹ ಯಶಸ್ಸು ದೊರೆಯಲಿಲ್ಲ. ಆದರೆ ಯಶಸ್ಸಿನ ಪ್ರಮಾಣ ಏನೂ ಇರಲಿ ಕನ್ನಡಕ್ಕೆ ತನ್ನದೇ

ಆದ ರಂಗಭೂಮಿಯನ್ನು ಕಟ್ಟಿಕೊಡಲು ಅವರು ನಡೆಸಿದ ಧೀರ ಪ್ರಯತ್ನಗಳೆಲ್ಲ ಗಮನಿಸಲೇಬೇಕಾಗುತ್ತದೆ" [ ಕಲೋಪಾಸಕ ಮಂಡಳಿ ಜನೆವರಿ ೧೦ - ೧೯೫೨ರಂದು ಬರೆದ ಇಂಗ್ಲೀಷ್ ಪತ್ರ.]

**೪] ನಾಟಕ ಮಂಡಳಿಗಳ ಕೊರತೆ :**

"ಉತ್ತರ ಕರ್ನಾಟಕದಲ್ಲಿ ನಾಟಕ ಮಂಡಳಿಗಳು ತೀರ ಕಡಿಮೆ ಸಂಖ್ಯೆಯಲ್ಲಿ ಹುಟ್ಟಿದರು. ಒಂದೊಂದು ಮಂಡಲದಲ್ಲಿಗೆ ೨೦ ರಿಂದ ೩೦ ಜನಗಳ ಇಡೀ ಉತ್ತರ ಕರ್ನಾಟಕದಲ್ಲಿ ಇಷ್ಟೇ ಜನ ನಟರು."

**೫] ರಂಗ ಪರಿಕರಗಳ ಸಂಗತತೆ ಹಾಗೂ ಮೇಕಪ್ ಕಲೆಯ ದೋಷಗಳು**

**೬] ನಾಟ್ಯ ವ್ಯವಸಾಯಿಗಳಿಗೆ ತರಬೇತಿ ಅಭಾವ :**

ನಾಟ್ಯ ಸಮ್ಮೇಳನಗಳ ವಿರಳತೆ.

**೭] ಸಿನೇಮಾದಿಂದ ರಂಗಭೂಮಿಗೆ ಧಕ್ಕೆಯಾಗಿದೆ** ಎಂಬ ವಾದವನ್ನು ನಾರಾಯಣರಾಯರು ಗುಬ್ಬಿ ಕಂಪನಿ ಹಾಗೂ ಕಲಾ ವೈಭವ ಕಂಪನಿಗಳ ಉದಾಹರಣೆ ಕೊಟ್ಟ ತಿರಸ್ಕರಿಸಿದರು.

**೮] ಭಾಷೆಯ ಬಗ್ಗೆ ವಾದ :**

ಭಾಷೆ, ವ್ಯಾಕರಣ ಶುದ್ಧವಾಗಿರಬೇಕೆ ಅಥವಾ ಆಡುಮಾತಿನಲ್ಲಿರಬೇಕೇ ಎನ್ನುವುದರ ಬಗ್ಗೆ ಅನಿಶ್ಚತತೆ.

ಕನ್ನಡ ರಂಗಭೂಮಿಯ ಉದ್ಧಾರಕ್ಕಾಗಿ ನಾರಾಯಣರಾಯರು ಮಾಡಿದ ಸೂಚನೆಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ ಈ ವಿಷಯದಲ್ಲಿ ಸರಕಾರದ ಹೊಣೆ ಏನು ಎನ್ನುವುದನ್ನು ಒತ್ತಿ ಹೇಳಿರುವುದು. ನಾಟ್ಯ ಕಲೆಯ ಬಗ್ಗೆ ಅಭಿರುಚಿಯನ್ನು ಹುಟ್ಟಿಸಿ ಈ ಕಲೆಯನ್ನು ಅಭಿವೃದ್ಧಿಗೊಳಿಸುವುದು ನಿಜವಾಗಿ ಮಂದಿರವನ್ನು ಕಟ್ಟಿಸಿ ಯೋಗ್ಯ ಭಾಡಿಗೆಯಿಂದ ಕೊಡಬೇಕು. ಈ ನಾಟ್ಯಮಂದಿರದಲ್ಲಿ ಎಲ್ಲ ಅನುಕೂಲವಾದ ಏರ್ಪಾಟನ್ನು ಮಾಡಬೇಕು. ಎಂದರೇನೇ ಈಗಿನ ಪರಿಸ್ಥಿಯನ್ನು ನಾಟ್ಯ ಕಲೆಗೆ ಪ್ರೋತ್ಸಾಹ ನೀಡಿದಂತಾಗಿತ್ತದೆ ಸ್ವಾತಂತ್ರೋತ್ತರ ಕಾಲದಲ್ಲಿ ಈ ನಿಟ್ಟಿನಲ್ಲಿ ಪ್ರಗತಿಯಾಗಿದೆಯಾದರೂ ಅದು ತೃಪ್ತಿಕರವಾಗಿಲ್ಲ ಎನ್ನುವುದನ್ನು ರಂಗಾಸಕ್ತರು ಬಲ್ಲರು.

ನಾರಾಯಣರಾಯರು ಮಾಡಿದ ಇನ್ನೊಂದು ಮಹತ್ವದ ಸೂಚನೆಯೇನೆಂದರೆ ವ್ಯವಸಾಯ ರಂಗಭೂಮಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕೆನ್ನುವುದು.

ಹೊಸದಾಗಿ ಅಲ್ಲಲ್ಲಿ ತಲೆ ಎತ್ತಿದ ವಿಲಾಸೀ ರಂಗಭೂಮಿಯನ್ನು ನಾರಾಯಣರಾಯರು ಗಮನಿಸಿದ್ದರು. ಆದರೆ ಅವುಗಳು ಬಗ್ಗೆ ಒಂದು ಎಚ್ಚರದ ಮಾತನ್ನು ಅವರು ಹೇಳಿದರು. ಕೇವಲವಾಗಿ ಇಂಥ ಸಂಘಗಳಿಂದ ನಾಟಗಯ ಕಲೆಯ ಪುನರುಜ್ಜೀವನವಾಗುವುದೆಂದು ತಿಳಿಯಬಾರದು. ವ್ಯವಸಾಯಿಗಳಾದ ಈ ಕೆಲಸವು ಎಷ್ಟು ಸುಕಭ ಸಾಧ್ಯವೋ ಅಷ್ಟು ಇವರಿಂದಲ್ಲ ಇವರೇನೇ ನಾಟ್ಯ ಕಲೆಯ ತಿದ್ದುಪಡಿಯನ್ನು ಮಾಡಿ ಅದರ ಮೇಲೆಯೇ ಮಾರ್ಗವನ್ನು ವ್ಯವಸಾಯಿಗಳಿಗೆ ತೋರಿಸಿಕೊಡಬಲ್ಲರು. ಆಗಾಗ ನಡೆಯುವ ವಿಲಾಸಿಗಳ ಒಂದೆರಡು ಪ್ರಯೋಗಗಳಿಂದ ರಂಗಭೂಮಿಯ ಉನ್ನತಿಯಾಗದು ಎಂದು ಅವರು ನಂಬಿದ್ದರು.

ನಾಟಕ ಹಾಗೂ ಭಾಷೆಗಳ ಸಂಬಂಧದಲ್ಲಿ ನಾರಾಯಣರಾಯರಲ್ಲಿ ಅಪರೂಪದ ಒಳನೋಟಗಳಿದ್ದವು. ನಾಟಕದ ಸಾಮಾನ್ಯ ಜನಗಳಲ್ಲಿ ನುಡಿಯ ಬಗೆ ಅಭಿರುಚಿಯನ್ನು ಹುಟ್ಟಿಸುವಂತಹ ಹಗುರವಾದ ಸಾಧನಗಳು. ಬುಡಿಯ ಬಗ್ಗೆ ಸಾಮಾನ್ಯರಲ್ಲಿ ಸವಿಯನ್ನು ಹುಟ್ಟಿಸದೇ ಹೋದರೆ ನಮ್ಮ ಭಾಷೆಯ ಬೆಳವಣಿಗೆಯಾಗುವುದು ಹೇಗೆ ? ಎಂದು ಅವರು ಪ್ರಶ್ನಿಸಿದರು. ಇಡೀ ಕರ್ನಾಟಕದಲ್ಲಿ ಬಳಕೆಯಾಗಬಲ್ಲ ಇಂದೇ ಕನ್ನಡವಿರಬೇಕು ಎಂದು ಅವರು ಸಮ್ಮತಿ ನಂಬಿದ್ದರಿಂದ ಗ್ರಂಥಸ್ಥ ಭಾಷೆಯನ್ನು ನಾಟಕಕಾರರು ಬಿಟ್ಟುಕೊಡುವುದಕ್ಕೆ ಅವರ ಸಮ್ಮತಿ ಇರಲಿಲ್ಲ. " ಕೇವಲ ಬಳಕೆಯ ಮಾತುಗಳನ್ನೇ ನಾಟಕ ಗ್ರಂಥದಲ್ಲಿ ಗ್ರಂಥಸ್ಥ ಭಾಷೆಯೊಡನೆ ಬಳಕೆಯ ಮಾತನ್ನೊ ಧಾರಾಳವಾಗಿ ಪ್ರಯೋಗಿಸಿ ಮಾದರಿಗಳನ್ನು ಸೃಷ್ಟಿಸಿದರು.

**ಕೊನೆಯದಾಗಿ**

ಹತ್ತೊಭತ್ತನೇ ಶತಮಾನದ ಕೊನೆಯ ದಶಕಗಳು ಮತ್ತು ಇಪ್ಪತ್ತನೇ ಶತಮಾನದ ಆದಿಭಾಗ ಭಾರತೀಯ ಇತಿಹಾಸದಲ್ಲಿ ಒಂದು ಪರ್ವಕಾಲ. ಸ್ವಾತಂತ್ರ ಚಳುವಳಿ ಪ್ರಾರಂಭವಾಗಿ ಮಂದಗಾಮಿತ್ವವನ್ನು ಬಿಟ್ಟುಕೊಟ್ಟು ತೀವ್ರಗಾಮಿತ್ವದೆಡೆಗೆ ದಾಪು ಹೆಜ್ಜೆಯನ್ನಿಟ್ಟು ನಡೆಯುತ್ತಿದ್ದ ಕಾಲ. ಇಂಗ್ಲೀಷ್ ವಿದ್ಯಾಭ್ಯಾಸವು ಮಧ್ಯಮ ವರ್ಗದಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡಿದ ಕಾಲ. ಗಾಂಧೀ ಯುಗದ ದೇಶೀ ಶಿಕ್ಷಣಕ್ಕೆ ಮಹತ್ವಕೊಟ್ಟು ಮೂಲ ಶಿಕ್ಷಣದಿಂದ ಸ್ವಾವಲಂಬನೆಗೆ ಪ್ರಾಶಸ್ತ್ಯವಿತ್ತು. ಭಾರತೀಯ ಪುನರುತ್ಥಾನಕ್ಕೆ ಕಹಳೆಯೂದಿದ ಕಾಲ. ಇಂಥ ಸಂದರ್ಭದಲ್ಲಿ ಮಧ್ಯಮ ವರ್ಗವು ದ್ವಂದ್ವಕ್ಕೆ ಒಳಗಾಯಿತು. ಪಾಶ್ಚಾತ್ಯೀಕರಣಕ್ಕೆ ಸಂಪೂರ್ಣ ಮಾರುಹೋಗಿ ಭಾರತೀಯ ಸಂಸ್ಕೃತಿಯಲ್ಲಿ ಬೇರುಬಿಟ್ಟ ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡರೂ ತಮ್ಮತನವನ್ನು ಕಳೆದುಕೊಳ್ಳದೇ ಎಚ್ಚರವನ್ನು ಉಳಿಸಿಕೊಂಡ ವರ್ಗ ಇನ್ನೊಂದು. ಒಂಥ

ಸಂದರ್ಭದಲ್ಲಿ ಅದಕ್ಕಿದ್ದ ಪರ್ಯಾಯವೆಂದರೆ ಭಾರತೀಯ ಇತಿಹಾಸದಲ್ಲಿ ಪುರಾಣಗಳಲ್ಲಿ ಸಂಸ್ಕೃತಿಯ ಮೈಮನವನ್ನು ಹುಡುಕಿ ಅದರ ಸಂಪೂರ್ಣ ಪುನರುಜ್ಜೀವನಕ್ಕೆ ಯತ್ನಿಸುವುದು. ಗೋಖಲೆ. ಟಿಳಕ, ಗಾಂಧಿ ಈ ನೆಲೆಗೆ ಸೇರಿದವರು. ಇವರ ವೈಚಾರಿಕತೆ ಸಹಜವಾಗಿಯೇ ಅಂದಿನ ಯುವ ಜನಾಂಗವನ್ನು ಪ್ರಭಾವಿಸಿತು ಅವರು ಎಲ್ಲ ರಂಗಗಳಲ್ಲೂ ತಮ್ಮ ಕೃಷಿಯನ್ನು ನಡೆಸಿದರು.

ಈ ಸನ್ನಿವೇಶಕ್ಕೆ ಕರ್ನಾಟಕವು ಅಲ್ಲಿಯ ಮಧ್ಯಮ ವರ್ಗವೂ ಹೊರತಾಗಿರಲಿಲ್ಲ. ಕರ್ನಾಟಕದಲ್ಲಿ ಯುವ ಜನತೆಗೆ ಶಿಕ್ಷಣ ಪಡೆಯಲು ಇದ್ದ ಕೇಂದ್ರವೆಂದರೆ ಪುಣೆಯಾಗಿತ್ತು. ಅದು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಬೀಡಾಗಿತ್ತು. ಅಂತೆಯೇ ಅಲ್ಲಿ ಶಿಕ್ಷಣ ಪಡೆಯಲು ಹೆಚ್ಚು ಯುವಕರು ಅದರೆಡೆಗಡ ಆಕರ್ಷಿತರಾಗಿ ಬಂದು ಅಲ್ಲಿಯ ಪ್ರಭಾವಗಳಿಗೆ ಒಳಗಾದರು. ಹಾಗೆ ಪ್ರಭಾವಗಳಿಗೆ ಒಳಗಾದವರಲ್ಲಿ ಹುಯಿಲಗೋಳ ನಾರಾಯಣರಾಯರು ಒಬ್ಬರು. ಮಹಾರಾಷ್ಟ್ರದಲ್ಲಿ ರಾಷ್ಟ್ರೀಯ ಖ್ಯಾತಿ ಪಡೆದ ನಾಯಕರ ವಿಚಾರ ಧಾರೆಗಳು, ಸಮಾಜ ಸುಧಾರಣಾ ಚಳುವಳಿಗಳು, ಮರಾಠಿ ಹಾಗೂ ಘಾರ್ಸಿ ರಂಗಭೂಮಿ ಇವು ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ಕನ್ನಡದಲ್ಲಿ ಅಂಥ ನಾಟಕಗಳು ಇಲ್ಲದ್ದು ಅವರಿಗೆ ನಾಟಕಗಳ ರಚನೆಗೆ ಪ್ರಚೋದನೆಯನ್ನು ಕೊಟ್ಟಿತು. ಅಲ್ಲಿಂದ ಕರ್ನಾಟಕಕ್ಕೆ ಮರಳಿದ ನಾರಾಯಣರಾಯರು ವಕೀಲ ವೃತ್ತಿಯನ್ನು ಅವಲಂಬಿಸಿದರೂ ಅವರ ಪ್ರವೃತ್ತಿಯು ಸಾಹಿತ್ಯ ರಚನೆಗೆ ಅವರನ್ನು ತೊಡಗಿಸಿತು.

ಅಂದಿನ ಕರ್ನಾಟಕವೂ ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿವಾಗಿ ಸಂಕ್ರಮಣಾವಸ್ಥೆಯಲ್ಲಿತ್ತು. ಮುಂದೆ ಕರ್ನಾಟಕದ ಆಡಳಿತಕ್ಕೆ ಒಳಗಾಗಿದ್ದ ಧಾರವಾಡವು ಅಂದು ಮೇಲಿನ ಚಳುವಳಿಗೆ ಕೇಂದ್ರವಾಗಿತ್ತು. ರೊದ್ದ ಶ್ರೀನಿವಾಸರಾಯರು, ಡೆಪ್ಯೂಟಿ ಚೆನ್ನಬಸಪ್ಪನವರು, ಗರೂಡ ಸದಾಶಿವರಾಯರು, ಶಾಂತಕವಿಗಳು ಈ ಕ್ಷೇತ್ರದಲ್ಲಿ ಮುಂದಾಳುಗಳಾಗಿ ಕರ್ನಾಟಕದ ಏಕೀಕರಣಕ್ಕೆ ಕನ್ನಡಾಭಿಮಾನಕ್ಕೆ ಕನ್ನಡದ ನಾಟಕಗಳಿಗಾಗಿ ದುಡಿಯುತ್ತಿದ್ದರು. ಈ ಎಲ್ಲದರ ಪರಿಣಾಮ ಹುಯಿಲಗೋಳ ನಾರಾಯಣರಾಯರ ಮೇಲೆ ಆಯಿತು .

ಗದುಗಿನ ವೀರನಾರಾಯಣನ ಭಕ್ತರಾದ ಇವರು ಸಹಜವಾಗಿಯೇ ಕುಮಾರವ್ಯಾಸ [ಗದುಗಿನ] ಭಾರತದಿಂದ, ಅವನ ಭಾಮಿನಿ ಷಟ್ಪದಿಯಿಂದ ಗಾಢವಾಗಿ ಪ್ರಭಾವಿತರಾದರು. ಅಂತೆಯೇ ಅವರ ಅನೇಕ ಕವಿತೆಗಳು ಷಟ್ಪದಿಯಲ್ಲಿಯೇ ಬರೆಯಲ್ಪಟ್ಟಿವೆ. ಆದರೆ ಅವುಗಳ ವಸ್ತು ಮಾತ್ರ ಸಮಕಾಲೀನವಾದುವು. ನಾಡು ನುಡಿಗಳ ಕುರಿತ ಅಭಿಮಾನ್ನು ಅವು ವ್ಯಕ್ತಪಡಿಸುತ್ತವೆ.ಹೀಗೆ ಮಾಡುವಾಗ ಅವು ಸಮಕಾಲೀನವಾದ ಕಾವ್ಯ ಪ್ರಯೋಗಗಳಿಂದ ಪ್ರಭಾವ ಹೊಂದಿವೆಯೇ ಇಲ್ಲವೆ

ಎಂಬ ಪ್ರಶ್ನೆ ಮೂಡುತ್ತದೆ ಆದರೆನಾರಾಯಣರಾಯರ ಪರಂಪರೆಯಲ್ಲಿ ಪ್ರೀತಿ ಅವರಿಗೆ ಹೊಸ ಪ್ರಯೋಗಗಳಿಗೆ ತಮ್ಮನ್ನು ತೆರೆದುಕೊಳ್ಳದಂತೆ ಮಾಡಿರಬೇಕು. ಷಟ್ಪದಿಗಳನ್ನಲ್ಲದೇ ಬಿಡಿ ಹಾಡುಗಳನ್ನೂ ಹಾಗೂ ಸ್ವಾಗತ ಗೀತೆಗಳನ್ನೂ ಬರೆದಿದ್ದಾರೆ. ಅದರಲ್ಲಿ ಅತ್ಯಂತ ಪ್ರಸಿದ್ಧವಾದುದೆಂದರೆ ೧೯೨೪ ರಲ್ಲಿ ಅವರು ಬರೆದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಸ್ವಾಗತ ಗೀತೆ. ಇದು ನಾಡಗೀತೆಯನ್ನು ಗೌರವವನ್ನು ಪಡೆದ ಒಂದು ಬಗೆ ಕರ್ನಾಟಕದ ಏಕೀಕರಣ ಚಳುವಳಿಗೆ ಇದು ಕೊಟ್ಟ ಸ್ಫೂರ್ತಿ ಮರೆಯಲಾಗದು. ಇದರ ವಿಸ್ತಾರವಾದ ವಿವೇಚನೆಯನ್ನು ಕಾವ್ಯದ ಅಧ್ಯಯದಲ್ಲಿ ಮಾಡಲಾಗಿದೆ. ಮೂರನೇಯದಾಗಿ ಅವರ ೮೫ ಕೀರ್ತನೆಗಳೂ ಲಭ್ಯವಾಗಿವೆ. ದಾಸ ಸಾಹಿತ್ಯದಿಂದ ಆದ ಪ್ರಭಾವ ಇವುಗಳ ಮೇಲೆ ಸ್ಪಷ್ಟವಾಗಿ ಕಾಣಿಸುತ್ತದೆ. ಆರ್ದ್ರ ಭಕ್ತಿ ಇವುಗಳ ಮೂಲ ದ್ರವ್ಯವಾಗಿದೆ ಒಟ್ಟು ಕನ್ನಡದ ಕಾವ್ಯ ಪರಂಪರೆಯನ್ನು ಹೊಸಗನ್ನಡದಲ್ಲಿ ಮುಂದುವರೆಸುವ ಕೊಂಡಿಗಳಾಗಿ ಇವುಗಳ ಸ್ಥಾನವನ್ನು ನಿರ್ದೇಶಿಸಬಹುದು .

ಹೊಸಗನ್ನಡ ನಾಟಕ ಪರಂಪರೆಯ ಹಿನ್ನೆಲೆಯಲ್ಲಿ ಇವರ ನಾಟಕಗಳನ್ನು ಅಭ್ಯಾಸ ಮಾಡಿದಾಗ ಅದಕ್ಕಿರುವ ಸ್ಥಾನ ಮಹತ್ವದ್ದು. ವೃತ್ತಿ ರಂಗಭೂಮಿಯ ಅವನತಿಯ ಪಥದಲ್ಲಿದ್ದಾಗ ತಮ್ಮ ನಾಟಕಗಳನ್ನು ರಂಗಭೂಮಿಗಾಗಿ ಬರೆದು ಕನ್ನಡ ರಂಗಭೂಮಿಯನ್ನು ಉತ್ಕರ್ಷಗೊಳಸಿದ ಯಶಸ್ಸು ಇವರ ನಾಟಕಗಳಿಗೆ ಸಲ್ಲಬೇಕು. ಕನ್ನಡ ವೃತ್ತಿರಂಗಭೂಮಿಯಲ್ಲಿದ್ದ ಅತಿರೇಕಗಳನ್ನು ಬಿಟ್ಟುಕೊಟ್ಟು ಮರಾಠಿ ರಂಗಭೂಮಿಯ ಉತ್ತಮಾಂಶಗಳನ್ನು ಅಳವಡಿಸಿಕೊಂಡು ಮೊದಲ ಬಾರಿಗೆನ್ನುವಂತೆ ಸಾಮಾಜಿಕ ನಾಟಕಗಳನ್ನು ಬರೆದು ಪ್ರಯತ್ನ ಮಾಡಿದರು ಅದರಲ್ಲಿ ತಕ್ಕಮಟ್ಟಿನ ಯಶಸ್ಸನು ಪಡೆದರು ಇದಕ್ಕೆ ಅವರ ನಾಲ್ಕು ಸಾಮಾಜಿಕ ನಾಡಿನ ಪುನರುಜ್ಜೀವನದ ಪ್ರಯತ್ನದ ಅಂಗವಾಗಿಯೇ ಮೈದಳೆದಿವೆ ಆ ದೃಷ್ಟಿಯಿಂದ ಮುಂದೆ ಬಂದ ಐತಿಹಾಸಿಕ ನಾಟಕಗಳಿಗೆ ಇವು ಸ್ಫೂರ್ತಿಯನ್ನು ಒದಗಿಸಿದವು. ವೃತ್ತಿ ರಂಗಭೂಮಿಯು ಎಲ್ಲ ಗದ್ಯ ನಾಟಕಗಳೆಡೆಗೆ ಸಂಕ್ರಮಣಾವಸ್ಥೆಯನಾಟಕಗಳ ಸಾಲಿಗೆ ಇವು ಸೇರುತ್ತವೆ ಅವರ ಸಂಗೀತ' ಪುನರಾಗಮನ' ನಾಟಕವನ್ನು ಮೊದಲ ಬಾರಿಗೆ ಉಲ್ಲೇಖಿಸಿ ಇಲ್ಲಿ ಸಂಪಾದಿಸಿ ಅಭ್ಯಾಸ ಮಾಡಲಾಗಿದೆ.

ಅವರ ಇತರ ಗದ್ಯ ಬರಹಗಳು ಅವರ ವೈವಿಧ್ಯಮಯವಾದ ಆಸಕ್ತಿಗೆ ನಿದರ್ಶನಗಳಾಗಿವೆ. ಇಲ್ಲಿ ಲಭ್ಯವಾಗಿರುವ ೧೮ ಲೇಖನಗಳು ಅದಕ್ಕೆ ಸಾಕ್ಷಿ. ಅವುಗಳಲ್ಲಿ ಬಹುಮಟ್ಟಿಗೆ ರಂಗಭೂಮಿ ಬಗೆಗಿನ ಚಿಂತನೆಗಳು ವ್ಯಕ್ತಗೊಂಡಿವೆ. ಉತ್ತರ ಕರ್ನಾಟಕ ರಂಗಭೂಮಿ ಬಗ್ಗೆ ಅಂದಿನ ರಂಗಭೂಮಿಯ ಚಟುವಟಿಕೆಗಳ ದಾಖಲೆಗಳಾಗಿಯೂ ಮಹತ್ವವಿದೆ. ಕುಮಾರವ್ಯಾಸನ ಮತ ಮತ್ತು ಪುರಂದರದಾಸರ

ಬಗೆಗೆಗಿನ ಲೇಖನಗಳು ಅವರ ಸಂಶೋಧನಾ ಪ್ರವೃತ್ತಿಗೆ ಸಾಧನಗಳಾಗಿವೆ. ದೊರಕಿರುವ ಒಂದು ಕಥೆ ವಿಜಯನಗರದ ಇತಿಹಾಸವನ್ನು ಆಧರಿಸಿದೆ. ಇವುಗಳ ಆಧಾರದಿಂದ ಖಚಿತವಾಗಿ ಅವರ ಗದ್ಯ ಕೃತಿಗಳ ಮೌಲ್ಯವನ್ನು ನಿರ್ಣಯಿಸಲು ಸಾಧ್ಯವಿಲ್ಲವಾದರೂ ಅವರ ಬಹುಮುಖ ಆಸಕ್ತಿಯನ್ನು ಅವು ಸ್ಥಾಪಿಸುತ್ತವೆ.

ಒಟ್ಟಾರೆ ಹೊಸಗನ್ನಡ ಸಾಹಿತ್ಯದ ಈ ಘಟ್ಟದಲ್ಲಿ ನಿಂತು ನೋಡಿದಾಗ ಅವರ ಸ್ಥಾನ ನವೋದಯ ಪೂರ್ವ ಸಾಹಿತ್ಯ ಉಷಃಕಾಲದಲ್ಲಿ ಅಂದಿನ ರಾಷ್ಟ್ರೀಯ ಚಳುವಳಿಯಿಂದ ನಮ್ಮ ನಾಡಿನ ಪರಂಪರೆಯಿಂದ ಸ್ಫೂರ್ತಿಯನ್ನು ಪಡೆದು ಅದಕ್ಕೆ ಕಾವ್ಯ ನಾಟಕಗಳ ಮೂಲಕ ಅಭಿವ್ಯಕ್ತಿಯನ್ನು ಕೊಟ್ಟ ಹಿರಿಯ ಲೇಖಕರಲ್ಲಿ ಅವರಿಗೆ ಐತಿಹಾಸಿಕ ಸ್ಥಾನವಿದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಅವರು ಕಾವ್ಯದಲ್ಲಿ ಪರಂಪರೆಯ ಛಂದೋಮಾರ್ಗವನ್ನು ಅನುಸರಿಸಿದರೂ ನಾಟಕದಲ್ಲಿ ಸಮಕಾಲೀನ ಕಾಳಜಿಗಳಿಗೆ ತಕ್ಕ ಅಭಿವ್ಯಕ್ತಿಯನ್ನು ಸಾಧಿಸಿದ್ದಾರೆ. ಒಂದು ರೀತಿಯಲ್ಲಿ ಪರಂಪರೆ ಸಮರ್ಥನೆಯಲ್ಲಿ ಅಂದಿನ ವಸಾಹತೀರಣ ಹಿನ್ನೆಲೆಯಲ್ಲಿ ನೊಡಿದಾಗ ಅದರ ಸೂಕ್ಷ್ಮ ರೀತಿಯ ಪ್ರತಿಭಟನೆಯೇ ಆಗಿತ್ತು ಎನ್ನುವುದರಲ್ಲಿ ಅನುಮಾನವಿಲ್ಲ ಆ ಕಾಲದ ಮಧ್ಯಮ ವರ್ಗದ ದ್ವಂದ್ವಗಳನ್ನು ಅವರು ತಮ್ಮ ನಾಟಕಗಳಲ್ಲಿ ಸಮರ್ಥವಾಗಿ ಮೂಡಿಸಿದ್ದಾರೆ ಇಂದಿಗೂ ನಮ್ಮ ಯುವ ಜನಾಂಗ ಆ ದ್ವಂದ್ವಗಳಿಂದ ಮುಕ್ತವಾಗಿಲ್ಲ ಅದಕ್ಕಾಗಿ ಅವರು ನಡೆಸುತ್ತಿದ್ದ ಹೋರಾಟವೇ ಅವರ ನಾಟಕಗಳ ಪ್ರಸ್ತುತಿಯನ್ನು ಎತ್ತಿ ಹಿಡಿಯುತ್ತವೆ. ಟಿ. ಪಿ. ಕೈಲಾಸಂ ಅವರ 'ಟೊಳ್ಳುಗಟ್ಟಿ'ಯನ್ನು ಇವರ ಸ್ತ್ರೀ ಧರ್ಮರಹಸ್ಯವನ್ನು ಕುರಿತು ಮರುಳಸಿದ್ದಪ್ಪನವರು ಆಡಿರುವ ಮಾತುಗಳಿವು .ಆ ಕಾಲದಲ್ಲಲಿ [೧೯೧೯] ಅವು ಕೈಲಾಸಂ "ಟೊಳ್ಳುಗಟ್ಟಿ" ಮೈಸೂರಿನ ಕಡೆ ಒಂದು ಹೊಸ ನಾಟಕ ಪರಂಪರೆಗೆ ಕಾರಣದಂತೆ ಹುಯಿಲಗೋಳ ನಾರಾಯಣರಾಯರ 'ಸ್ತ್ರೀ ಧರ್ಮರಹಸ್ಯ' ಉತ್ತರ ಕರ್ನಾಟಕದ ರಂಗಭೂಮಿಯಲ್ಲಿ ಅದೇ ಬಗೆಯ ಪರಿಣಾಮಕನ್ನುಂಟು ಮಾಡಿತು. ಈ ಬಗೆಯ ಹೆಚ್ಚು ತೌಲನಿಕ ಅಭ್ಯಾಸವು ಹೊಸ ಹೊಳಹುಗಳಿಗೆ ಕಾರಣವಾಗಬಹುದು. ಮೊದಲ ಬಾರಿಗೆ ಈ ಮಹಾಪ್ರಬಂಧದಲ್ಲಿ ಹುಯಿಲಗೋಳ ನಾರಾಯಣರಾಯರ ಲಭ್ಯವಾದ ಎಲ್ಲ ಮಾಹಿತಿಗಳನ್ನೂ ಒಂದುಗೂಡಿಸಿ ವ್ಯವಸ್ಥಿತವಾಗಿ ವರ್ಗಿಕರಿಸಿ ಅವುಗಳನ್ನು ವಸ್ತುನಿಷ್ಠ ಅಭ್ಯಾಸಕ್ಕೆ ಗುರಿ ಮಾಡಲಾಗಿದೆ. ಅದರ ಆಧರದ ಮೇಲೆ ಹೊಸಗನ್ನಡ ಸಾಹಿತ್ಯದಲ್ಲೂ ಅವರ ಸ್ಥಾನವನ್ನು ಮೇಲೆ ನಿರ್ದೇಶಿಸಲಾಗಿದೆ. ಅದರಂತೆ ಈ ಪ್ರಬಂಧದ ಮಿತಿಗಳನ್ನು ಇಲ್ಲಿ ಹೇಳುವುದು ಅವಶ್ಯ. ಮೊದಲನೇಯದಾಗಿ ಇದು ಅವರ ಸಮಗ್ರ ಅಧ್ಯಯನವಾದ್ದರಿಂದ ತೌಲನಿಕ ಅಭ್ಯಾಸಕ್ಕೆ ಇಲ್ಲಿ ಎಡೆಯಿಲ್ಲ ಅದು ಈ ಅಧ್ಯಯನದ ಉದ್ದೇಶವೂ ಅಲ್ಲ. ಆದರೆ ಆ ಬಗೆಯ ಅಧ್ಯಯನ

ಅವರ ಕೃತಿಗಳನ್ನು ಸರಿಯಾಗಿ ಬೆಲೆಗಟ್ಟಲು ಸಹಾಯಕವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಎರಡನೇಯದಾಗಿ ಅವರ ಅಲಭ್ಯ ಕೃತಿಗಳು ಇನ್ನೂ ಹಲವೆಡೆ ಹಂಚಿಹೋಗಿವೆ. ಅವುಗಳಲ್ಲಿ ಸಂಶೋಧನೆ ಮಾಡಿ ಪ್ರಕಟಮಾಡಿ ಅವುಗಳನ್ನು ಅಭ್ಯಾಸ ಮಾಡುವುದರಿಂದ ಸಮಗ್ರ ಅಧ್ಯಯನವೊಂದು ಸಾಧ್ಯವಾಗುವುದಲ್ಲದೇ ಅವರ ಪುನರ್ ಮೌಲ್ಯಮಾಪನ ಸಾಧ್ಯವಾಗುತ್ತದೆ.

■

## ಚಳುವಳಿ ಹಾಗೂ ಹೋರಾಟ

ಕನ್ನಡ ಕುಲಕೋಟಿಯನ್ನು "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಎಂಬ ಕಾವ್ಯ ಕಹಳೆಯಿಂದ ಕೂಗಿ ಜಾಗೃತ ಮಾಡಿದ ಕವಿಪುಂಗವ ಹುಯಿಲಗೋಳ ನಾರಾಯಣರಾಯರು. ಈ ಹಾಡನ್ನು ಕೇಳಿದಾಗ ಇಂದಿಗೂ ತುಂಬಾ ಜನ ರೋಮಾಂಚನಗೊಳ್ಳುತ್ತಾರೆ. ಹರಿದು ಹಂಚಿಹೋಗಿದ್ದ ಕರ್ನಾಟಕ ರಾಜ್ಯವನ್ನು ಒಂದುಗೂಡಿಸಿದಾಗ ಈ ಹಾಡು ಅತ್ಯಂತ ಮಹತ್ವದ ಭೂಮಿಕೆ ವಹಿಸಿತು. ಕನ್ನಡ ನಾಡಿನ ಭವ್ಯ ಪರಂಪರೆ, ಸಮಸ್ಕೃತಿ ಸ್ವರೂಪವನ್ನು ಅಪ್ಪಟವಾಗಿ ತೋರಿಸುವ ಈ ಹಾಡನ್ನು ಹಾಡದೇ ಉತ್ತರ ಕರ್ನಾಟಕದಲ್ಲಿ ಯಾವ ಸಾರ್ವಜನಿಕ ಸಮಾರಂಭಗಳು ಆರಂಭವಾಗುತ್ತಿರಲಿಲ್ಲ. ಏಕೀಕರಣಕ್ಕೆ ಹೋರಾಟ ನಡೆದಾಗ ಕನ್ನಡಿಗರಲ್ಲಿ ಸದಭಿಮಾನದ ಕಾವು ತುಂಬಿದ ಈ ಹಾಡು ಅಂದಿನ ತಾರಕಮಂತ್ರವಾಗಿತ್ತು. "ಬಂಕಿಮಚಂದ್ರ ಚಟರ್ಜಿಯವರ ವಂದೇ ಮಾತರಂ ಗೀತೆಯೆಷ್ಟೇ ಪರಿಣಾಮವನ್ನು ಈ ಗೀತೆ ಕನ್ನಡಿಗರ ಮೇಲೆ ಮಾಡಿತೆಂದರೆ ಅತಿಶಯೋಕ್ತಿಯಲ್ಲ" ಎನ್ನುತ್ತಾರೆ ಪ್ರಸಿದ್ಧ ಲೇಖಕ ಇತಿಹಾಸಕಾರರಾದ ಗೋವಿಂದಮೂರ್ತಿ ದೇಸಾಯಿ. " ಕನ್ನಡಿಗರನ್ನು ಬಡಿದೆಬ್ಬಿಸಿದ ಪ್ರಭಾವಿ ವೀರಗೀತೆ" ಎನ್ನುತ್ತಾರೆ ಪ್ರೊ. ವಸಂತ ಕುಷ್ಟಗಿ."ಹರಿದು ಹಂಚಿಹೋದ ಕರ್ನಾಟಕವನ್ನು ಒಂದೆಡೆ ತರಲು ಅಸಂಖ್ಯಾತ ಕನ್ನಡಿಗರಿಗೆ ಪ್ರೇರಣೆ ಕೊಟ್ಟ ಹಾಡಿದು" ಎನ್ನುತ್ತಾರೆ ಪ್ರಸಿದ್ಧ ಲೇಖಕ ವರದರಾಜ ಹುಯಿಲಗೋಳ.

ಕನ್ನಡ ನಾಡು ನುಡಿಯ ಧೀಮಂತ ಸೇವೆಯ ಪ್ರವೃತ್ತಿ ನಾರಾಯಣರಾಯರಲ್ಲಿ ಬೆಳೆದುಬರಲು ಅವರಲ್ಲಿಯ ಅನುವಂಶಿಕ ಗುಣವೇ ಕಾರಣವಿರಬೇಕು. ಇವರ ಪೂರ್ವಜರಾದ ಹುಯಿಲಗೋಳ ಭುಜಂಗರಾಯರು [೧೮೩೧ – ೧೮೮೫] ೧೮೬೭ರಲ್ಲಿ ಬೆಳಗಾವಿ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲ್‌ರಾಗಿ ನೇಮಕವಾಗಿ, ಟ್ರೇನಿಂಗ್ ಕಾಲೇಜು ಕನ್ನಡ ವಾಙ್ಮಯದ ಮಾತೃಸ್ಥಾನ ಎಂಬುದನ್ನು ಕಂಡುಹಿಡಿದು, ಅದನ್ನು ಕಾರ್ಯರೂಪಕ್ಕೆ ತಂದ ಮೊದಲಿಗರೆಂಬುದನ್ನು ಇಲ್ಲಿ ನೆನೆಸಿಕೊಂಡರೆ ಮೇಲಿನ ಮಾತಿಗೆ ಪುಷ್ಟಿ ದೊರೆಯುತ್ತದೆ. ಇದೇ ಪರಂಪರೆಯಲ್ಲಿ ಇವರಿಗಿಂತ ಸ್ವಲ್ಪ ಕಿರಿಯವರಾದ ಅಚ್ಯುತರಾವ್ ಹುಯಿಲಗೋಳ ಅವರೂ ಕೂಡಾ ಕನ್ನಡ

ನಾಡ ನುಡಿಯ ಸೇವೆ ಪರಂಪರೆಯನ್ನು ಮುಂದುವರಿಸುತ್ತ "ನರಗುಂದದ ಬಂಡಾಯ" ಎಂಬ ಐತಿಹಾಸಿಕ ಬರೆದು ಪ್ರಸಿದ್ಧಿ ಪಡೆದರು. ಹೀಗೆ ನಾರಾಯಣರಾಯರು ಬೆಳೆದು ಬಂದ ಪರಂಪರೆ, ಬೆಳೆಸಿ ಉಳಿಸಿದ ಪರಂಪರೆ ಕನ್ನಡದ ಅಪಾರ ಸೊತ್ತು ಎನ್ನವಲ್ಲಿ ಸಂದೇಹವಿಲ್ಲ

ನಾರಾಯಣರಾಯರು ತಮ್ಮ ಉಚ್ಚ ಶಿಕ್ಷಣಕ್ಕಾಗಿ ಪುಣೆಯಲ್ಲಿರುವಾಗ ಮರಾಠಿ ನಾಟಕಗಳನ್ನು ನೋಡಿ ಕೆಲವರು ಮರಾಠಿಯನ್ನು ಹೊಗಳುವ ಆವೇಶದಲ್ಲಿ ಕನ್ನಡವನ್ನು ತೆಗಳಿ ಮಾತನಾಡಿ ಬಿಟ್ಟರು ಇದನ್ನು ಕೇಳದ ನಾರಾಯಣರಾಯರಿಗೆ ತುಂಬಾ ಸಂಕಟವಾಯಿತು ಭಾಷಾ ವ್ಯಾಮೋಹಕ್ಕೆರವಾಗದೇ ವಿಶಾಲ ಹೃದಯದಿಂದ, " ಭಾಷಾ ಯಾವುದಾದರೇನು ಭಾವ ಮುಖ್ಯ" ಎಂಬ ನಿಲುವನ್ನಿಟ್ಟುಕೊಂಡು ಅವರಿಗೆ ಕಸಿವಿಸಿಯಾಯಿತು. ಅಂದೇ ಅವರ ಮನದಲ್ಲಿ ಕನ್ನಡಕ್ಕಾಗಿ ದುಡಿಯಬೇಕು ಎಂಬ ಭಾಷಾಭಿಮಾನ ಅಲಂಕರಿಸಿತು "ಕನ್ನಡ ಭಾಷಾಭಿವೃದ್ಧಿಗಾಗಿ ನಾನೂ ಏನಾದರೂ ಸೇವೆ ಮಾಡಲೇಬೇಕು ಯೋಜನೆಗಳನ್ನು ರೂಪಿಸತೊಡಗಿದರು. ಒಂದು ಸಲ ಕಾಲೇಜು ವಿದ್ಯಾರ್ಥಿನಿಲಯದ ಅಲ್ಲಿಯೇ ಬಂದಿದ್ದ ಪ್ರಿನ್ಸಿಪಾಲ್‌ರು ನೋಡಿದರು. ಮಾರನೆಯ ದಿನ ಪ್ರಿನ್ಸಿಪಾಲ್‌ರು ಇವರ ಮಿತ್ರರನ್ನು ತರಾಟೆಗೆ ತೆಗೆದುಕೊಂಡರಲ್ಲದೇ ಹೀಯಾಳಿಸಿ ಮಾತನಾಡಿದರು. "ನಿಮ್ಮ ಕನ್ನಡ ನಾಟಕ ಹೀಗಿರುತ್ತವೆಯೇ ? ಏನು ನಿಮ್ಮ ಕನ್ನಡ ?"ಎಂದಾಗ ಮೊದಲೇ ಹತ್ತಿದ ಉರಿಗೆ ತುಪ್ಪ ಸುರಿದಂತಾಯಿತು. ಕೂಡಲೇ ಅವರು ಕಾರ್ಯೋನ್ಮುಖರಾದರು. ಆ ಕಾಲೇಜಿನಲ್ಲಿ ಕಲಿಯುತ್ತಿದ್ದ ಕನ್ನಡ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿದರು. ಯಾರಿಗೂ ನೋವಾಗದಂತೆ ಕನ್ನಡ ಭಾಷಾಭಿಮಾನದ ಬಗ್ಗೆ ಯಾವಾಗಲೂ ಜಾಗೃತರಾಗಿರಲು ಕರೆ ನೀಡಿದರು.

ಆಗ ಆ ಕಾಲೇಜಿನ ವಾಚನಾಲಯದಲ್ಲಿ ಕನ್ನಡ ಭಾಷಾ ಪುಸ್ತಕಗಳು ಇರಲಿಲ್ಲ. ಪ್ರಿನ್ಸಿಪಾಲರಿಗೆ ಈ ಸಂಗತಿಯನ್ನು ಮನವರಿಕೆ ಮಾಡಿಕೊಟ್ಟು ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳು ಬರುವಂತೆ ಈ ರೀತಿ ಕಾರ್ಯಾರಂಭವಾಯಿತು. ಕನ್ನಡ ಪುಸ್ತಕಗಳೇನೋ ಬಂದವು. ಆದರೆ ಕನ್ನಡ ವಿದ್ಯಾರ್ಥಿಗಳು ಅವನ್ನು ಆಸಕ್ತಿಯಿಂಧ ಓದದಿದ್ದಾಗ ನಾರಾಯಣರಾಯರು ತಾವೇ ತಮ್ಮ ಸಹಪಾಠಿಗಳ ಹೆಸರಿನಲ್ಲಿ ಕನ್ನಡ ಪುಸ್ತಕಗಳನ್ನು ವಾಚನಾಲಯದಿಂದ ತಂದು ಅವರವರ ಕೋಣೆಗೆ ತಲುಪಿಸಿ ಬರಹತ್ತಿದರು.

ಅವಧಿ ಮುಗಿದ ಮೇಲೆ ತಾವೇ ಅವುಗಳನ್ನು ಪುನಃ ವಾಚನಾಲಯಕ್ಕೆ ತಿರುಗಿಸಿಯೂ ಬರುತ್ತಿದ್ದರು. ಕನ್ನಡ ಭಾಷೆಗೆ ಪುಸ್ತಕಗಳಿಗೆ ಯಾರೂ ಯಾವುದೇ ಅಪಶಬ್ದ ಆಡಬಾರದೆಂದು ನಾರಾಯಣರಾಯರ ಅಂತಃಕರಣದ ಅನಿಸಿಕೆಯಾಗಿತ್ತು.

ಅದಕ್ಕಾಗಿ ಅವರು ಏನು ಮಾಡಲೂ ಸಿದ್ಧರಾದರು. ಇವರ ಪ್ರಯತ್ನಕ್ಕೆ ಮಿತ್ರರು ಪ್ರತಿಕ್ರಿಯಿಸದಿರಲಿಲ್ಲ. ಮುಂದೆ ಬಹಳಷ್ಟು ಸಹಪಾಠಿಗಳು ಕನ್ನಡ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಂಡರು.

ಕರ್ನಾಟಕದ ಇತಿಹಾಸವೆಂದರೆ ನಾರಾಯಣರಾಯರಿಗೆ ಎಲ್ಲಿಲ್ಲದ ಆಸ್ಥೆ, ಅಚ್ಚುಮೆಚ್ಚು. ಕರ್ನಾಟಕದ ಎಷ್ಟು ಕೊಂಡಾಡಿ ಹಾಡಿದರೂ ಅವರಿಗೆ ತೃಪ್ತಿ ತೋರದು ಅಂತೆಯೇ ಅವರ ಅನೇಕ ಕಾವ್ಯಗಳಲ್ಲಿ ಕನ್ನಡದ ವೈಭವದ ವರ್ಣನೆ ಕಾಣಸಿಗುತ್ತದೆ. ಹಾಗೆಯೇ ಹರಿದು ಹೋದ ಕನ್ನಡಕ್ಕಾಗಿ, ಕನ್ನಡದ ಹೀನ ಸ್ಥಿತಿಗಾಗಿ ಅವರ ಮನ ಮಿಡುಕುತ್ತದೆ; ಸಂವೇದನೆ ತಳಮಳಗೊಳ್ಳುತ್ತದೆ. ಅವರು ಬರೆದ ಅನೇಕ ಹೃದಯ ಮಿಡಿಯುವ ಹಾಡುಗಳು ಕನ್ನಡದ ಜನರಲ್ಲಿ ಅಭಿಮಾನದ ಕಿಡಿಯೆಬ್ಬಿಸಿ ಕನ್ನಡದ ಏಕೀಕರಣಕ್ಕೆ ಹೋರಾಡುವ ಮನೋಸ್ಥೈರ್ಯವನ್ನು, ಛಲವನ್ನು ನೀಡಿರಬೇಕು. ಅವರು ಧಾರವಾಡದಲ್ಲಿರುವಾಗ ಮುದವೀಡು ಕೃಷ್ಣರಾಯರ ಧೈಯಧೋರಣೆಗಳಿಂದ ವಿಶೇಷವಾಗಿ ಪ್ರಭಾವಿತರಾದರು. ಕನ್ನಡ ನಾಡು, ನುಡಿತ ಜಾಗೃತಿಗೆ ಪ್ರಯತ್ನಿಸಲು ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಸೆಣಸಲು ಶಕ್ತಿ ಹಾಗೂ ಚೈತನ್ಯಗಳು ದೊರೆತವು.

೧೯೬೭ರಲ್ಲಿ ನಾರಾಯಣರಾಯರು ರಾಯಚೂರಿನಲ್ಲಿ ತಮ್ಮ ಕಿರಿಯ ಮಗನ ಮನೆಯಲ್ಲಿದ್ದಾಗ ಸಂಯುಕ್ತ ಕರ್ನಾಟಕದ ಪತ್ರಿಕೆಗೆ ರಾಜ್ಯೋತ್ಸವಕ್ಕಾಗಿ ಸಂದೇಶ ಪಡೆಯಲೆಂದು ಶ್ರೀ ರಾ. ಗು. ಜೋಷಿ [ಪತ್ರಿಕಾ – ಪ್ರತಿನಿಧಿ] ಬಂದರಂತೆ ಆಗ ನಾರಾಯಣರಾಯರು ಕೊಟ್ಟ ಸಂದೇಶ ಅವರ ಕನ್ನಡತನದ ಪ್ರೇಮಕ್ಕೆ ದ್ಯೋತಕವಾಗಿದೆ."ಕನ್ನಡ ನಾಡೇನೋ ಆಯಿತು. ಆದರೆ ಕನ್ನಡ ನಾಡಿನಲ್ಲಿ ಕನ್ನಡದ ಅಂಕಿ ಸಂಖ್ಯೆಗಳು ಮರೆತು ಹೋಗುತ್ತಿವೆ ಯಾರೂ ಇದರ ಕಡೆಗೆ ಲಕ್ಷ್ಯ ಹಾಕಿಲ್ಲ ಇದನ್ನು ನೋಡಿ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗಿದೆ ಇನ್ನು ಮುಂದಾದರೂ ಸಂಬಂಧಪಟ್ಟವರು ಕನ್ನಡ ಅಂಕಿಗಳನ್ನು ಬಳಕೆಯಲ್ಲಿ ತರಲು ಪ್ರಯತ್ನಿಸಬೇಕು."

### ಕೃತಿಗಳ ಮೂಲಕ ಕನ್ನಡದ ಪ್ರೇಮ

೧. "ಕನ್ನಡಮ್ಮನ ಸ್ಥಿತಿ" [ಕನ್ನಡಿಗರ ಸಾಹಿತ್ಯ ಸಮ್ಮೇಳನ] ಈ ಕವನದಲ್ಲಿ ಬೆಂಗಳೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ವಿವರದೊಂದಿಗೆ ಹಿಂದೊಮ್ಮೆ ವೈಭವದ ಶಿಖರಕ್ಕೇರಿದ ಕನ್ನಡದ ವೈಭವದ ಹೀನ ಸ್ಥಿತಿಗೆ ಬಂದುದನ್ನು ಕಂಡು ಮರಗುತ್ತಾನೆ. ಸಂಸ್ಕೃತ, ಇಂಗ್ಲೀಷ್, ತೆಲಗು, ಮರಾಠಿ ಪ್ರಭಾವದಿಂದ ಕನ್ನಡದ ಅಲಕ್ಷ್ಯವಾಗುತ್ತದೆ ಅವನತಿಯಾಗುತ್ತದೆ. ಇದನ್ನು ವಿಡಂಬಿಸಿ ಬರೆದ ಸಾಲುಗಳಂತಿವೆ.

"ಸಭೆಯೊಳು ಮುದ್ದು ನುಡಿಯೊಳು ತಿದ್ದಿ ಪೇಳಿದರಿದ್ದ ನುಡಿ ಕೆಟ್ಟಿದ್ದ ಸ್ಥಿತಿಯನ್ನಾಂಗ್ಲ ಭಾಷೆಯಿಂ. " ಕನ್ನಡದ ನುಡಿಯನ್ನು ಮೇಲ್ತರು ಉದ್ದೇಶದಿಂದ ಸಂಸ್ಥೆಯೊಂದನ್ನು ಅವರು ರಚಿಸಿದವರು ಅದೇ ಮುಂದೆ 'ಕನ್ನಡ ಸಾಹಿತ್ಯ ಪರಿಷತ್ತು' ಆಗಿ ಕನ್ನಡದ ಏಳ್ಗೆಯನ್ನು ಸಾಧಿಸುತ್ತದೆ. ಅದು ಅವರ ಹಿರಿಯ ಸಾಧನೆ.

೨. "ಕನಸು" ಕವನದಲ್ಲಿಯೂ ಕನ್ನಡಾಂಬೆಯ ಹೀನ ಸ್ಥಿತಿಯ ವರ್ಣನೆಯಿದೆ.

"ಅಗರುಗಾಣುವ ಮುರುಕು ಮನೆಯೊಳು
ಪಗರುವಿಲ್ಲದೆ ಪೊಗೆಯು ತುಂಬಿದೆ
ಜಿಗುಡು ಹರಿಡಿಹ ಕರಡು ನೆಲದೊಳು ಬರದು ಕಾಲಿಡಲು
ಮಗನೆ ಕರ್ನಾಟಕದ ದೊರೆಗಳ
ಜಗುಲಿಯದು ವೆಳಗಣ
ಬಗೆಯ ಪೇಳಲು ಬಗೆಯ ಕಾಣೆನು ಮಾಡಲಿನ್ನೇನು ॥

ಹೀಗೆ ಹಾಳಾಗುತ್ತಿರುವ ಮಂದಿರವನ್ನು ಬೀಳದಂತೆ ಒಂಥು ಕಡೆಯಿಂದ ಎತ್ತಿ ಹಿಡಿದ ಮಹನೀಯರು ಇವರು.

ಜನ್ನ ಪಂಪನು ರುದ್ರಭಟ್ಟನು ।
ಪನ್ನತರ ವರಕವಿ ಕುಮಾರವ್ಯಾಸ ಸರ್ವಜ್ಞ॥
ಹೊನ್ನ ನುಡಿತ ಕೇಶೀರಾಜನು । ಪುನ್ನ ಮಹಿಮನಿ ನಾಗವರ್ಮನು
ಸನ್ನಿಯೋ ಚಪ್ಪರದ ತುದಿಗಳನೆರಡು ಪಿಡಿದಹರು.

ಈ ಮಂದಿರವು ಕುಸಿದುಬೀಳದಂತೆ ಎಲ್ಲರೂ ಸೇರಿ ಕನ್ನಡದ ವೈಭವ ಕಾಪಾಡಬೇಕೆಂದು ಕನ್ನಡ ಮಾತೆಯ ಕೋರಿಕೆ

೩. "ಕರ್ನಾಟಕದ ಮಿಡುಕು" – ಇಲ್ಲಿ ನಾರಾಯಣರಾಯರ ಕನ್ನಡದ ಕುರಿತಾದ ಕಳಕಳಿ ಸ್ಪಷ್ಟವಾಗಿ ಮೂಡಿವೆ. ಕರ್ನಾಟಕಕ್ಕೆ ಒದಗಿಸಿದ ಸ್ಥಿತಿಯನ್ನು ನೋಡಲಾಗದೆ ಕಿವಿ ಕಣ್ಣು ಮುಚ್ಚಿ ಕುಳಿತಿದ್ದಾನೆ ಕನ್ನಡದ ಸ್ಥಿತಿಯನ್ನು ಹೀಗೆ ಬಣ್ಣಿಸಿದ್ದಾರೆ.

"ಅಣ್ಣಾಗಳಿರಾ ನನ್ನ ವಿಭವವ । ಬಣ್ಣಿಸಲು ಪಲವು ನಾಲಗೆ
ಯಣ್ಣನಿಗೆ ಸಹ ಬಾರದೈ ಗಡ ಅದೊಡೀ ದಿನಕೆ
ಕರ್ಣದಿರ್ಪಾ ಸಕಲ ಭಾಗ್ಯವು । ಮಣ್ಣುಗೂಡಿದುದನು ನೋಡಲು।
ಕಣ್ಣು ತೆರೆಯುವುದೆಂದು ಪೇಳೀರಿ ಮಂದ ಭಾಗ್ಯನು ನಾಂ ॥"

"ಒಬ್ಬೊಬ್ಬರ ನಂಬದಲೆ ಕಾರ್ಯ ಮಾಡುವಿರಿ
ಲಕ್ಷ್ಯಗಟ್ಟಲೆ ಕಬ್ಬ ಬರೆಯುವರೆಂಬ ಪುರುಳಿರದ ಅಬ್ಬರಂ
ಒಬ್ಬನು ಯಾವುದಾದರೊಂದು ಕಾರ್ಯ ಮಾಡಿದರೆ
ಇನ್ನೊಬ್ಬನು ಅದನು ಸಹಿಸದೆ ದಬ್ಬಿ ತೊಂದರೆ ಕೊಡುವನು"

"ಪುರುಳಿಲ್ಲದ ಕಾವ್ಯ ಬರೆದು ನಿಮ್ಮಮ್ಮು ಹೊಗಳಿದರೆ ಅವನನ್ನು ಗೌರವಿಸುವಿರಿ
ಶುದ್ಧ ನನ್ನಯ ಮುದ್ದ ನುಡಿಯಭಿಮಾನವಿಲ್ಲೇನ್ನೈ
ತಿದ್ದಿರೆಲ್ಲರ ಬಿದ್ದ ಕಾರ್ಯದ ಸಿದ್ಧಿ ಗೈಯಲು । ಕಂಕಣ
ಬದ್ಧರಿದ್ದ ಮಾನವರೆದ್ದು ಬಮದೊಡೆ ಗೆದ್ದ ನಾನೆಂದೆ ॥"

೪. "ರಥೋತ್ಸವ" – ಪಂಪ, ರನ್ನ, ಪೊನ್ನ ಮೊದಲಾದವರಿಂದ ರಚಿತವಾದ ರಥವನ್ನು ಈಗ ಕನ್ನಡಿಗರು ಒಂದಾಗಿ ಎಳೆಯದೇ ಹೋದರೆ ರಥ ತಗ್ಗಿನಿಂದ ಮೇಲೆ ಬರಲಾರದು. ಅವಳ ಕೊರಗನ್ನು ತೋರುವ ಸಾಲುಗಳಾದವು.

"ನೋಡು ತಾಯ್ ಮಿಡುಕಿದಳು ಮಕ್ಕಳಿ
ಕೂಡಿ ನಡೆಯದೇ ಕೆಲಸವಪ್ಪುದೆ
ಬೇಡ ಬಿಡಿರಿ ಬಾಹ್ಯಾಡಂಭವ ಮನದೊಳೊಂದಾಗೀ ।
ಹೂಡಿ ಕಾರ್ಯವನಿರದೆ ನಿಮ್ಮೊಡ
ನುಡಿಗಳನೊಡಗೂಡಿಗೆಯ್ಯಲೋ
ದಾಡುತಾಡುತೆ ಸಾಧ್ಯವಪ್ಪುದು ನಿಮ್ಮ ಹೊರಗಿಲ್ಲ ॥"

೫. "ಒಂದಾದ ಕನ್ನಡ ನಾಡು" – ೧೯೫೬ರ ರಾಜ್ಯೋತ್ಸವದ ಸಂದರ್ಭದಲ್ಲಿ ಈ ಆಶಯ ಗೀತೆ ಬರೆದಿದ್ದಾರೆ. ಹಂಚಿ ಹೋಗಿದ್ದ ಕನ್ನಡ ನಾಡಿನ ಒಂದೇ ತಾಯಿ ಮಕ್ಕಳನ್ನು ದೇವರು ರಕ್ಷಿಸಲು, ಪ್ರೀತಿ ವಿಶ್ವಾಸದಿಂದ ಸಹಕರಿಸಿ ಕನ್ನಡ ನಾಡಿನ ಏಳ್ಗೆಯನ್ನು ಸಾಧಿಸಲು ಎಂದು ನಾರಾಯಣರಾಯರು ಆಶಿಸುತ್ತಾರೆ.

"ಒಳಜಗಳದೊಡಲುರಿಯ ನಂದಿಸಿ
ಬೆಳಸುತೊಳಗಿನ ನಲುಮೆ ನಂಬಿಗೆ
ಗಳಲಿ ನಡೆವುದು ಮತ್ತೆ ತನುಮನದಿಂದ ದುಡಿಯುವುದು ।
ಗಳಿಸುವುದು ಬೇಸಾಯದುದ್ದಿಮೆ
ಬೆಳೆಸಿ ನಾಡಿನ ಮೇಲ್ಮೆಯೇಳ್ಗೆಯ
ಬಳಸಿ ಭಾರತಕಿಂಬು ಕೊಡುವುದು ನಿಷ್ಠೆ ನಡತೆಯಲಿ ॥"

ಮುಂದೆ ಕವಿ ನಮ್ಮ ನಾಡು ಭಾರತಕ್ಕೆ ಭೂಷಣವಾಗಲಿ ಎಂದು ಹಾರೈಸುತ್ತಾರೆ.

"ಉದಿಸಿ ಬಂದೀ ನಾಡು ವಿಭವದ
ಕುದಿಯನೇರಲಿ ಮತ್ತಯಲ್ಲಿಂ
ದುದರದಿರಲದು ಭಾರತಕ್ಕೆ ಘನ ಭೂಷಣವಾಗುತಲಿ ॥"

ಒಂದಾದ ಕನ್ನಡ ನಾಡನ್ನು ನೋಡಿ ಹೀಗೆ ಹಿಗ್ಗುತ್ತಾಳೆಂದು ಕವಿ ಕಲ್ಪನೆ.

"ಹಲವು ದಿನಗಳಲಿ ಕೂಡಿದ
ನಲಿವ ಮಕ್ಕಳ ಕಂಡು ಕನ್ನಡ
ಲಲನೆ ಸಂತಸಪಟ್ಟು ಹರುಷದೊಳುಬ್ಬಿ ಕಂಗಳಲಿ ॥
ಆಲವ ಸುರಿಸುವ ಭಾಗ್ಯ ನೋಡುವ
ಚೆಲುವ ಕಾಲವು ಬಂದಿತಿಂದಿಗೆ
ಬಲಿತ ಸಂಭ್ರಮದಿಂದ ಪಿಡಿವುದು ದೇಶದಭಿಮಾನ ॥"

೬. "ಬೆಳಗಲೆಂದಿಗೂ ನಮ್ಮ ಚೆಲುವ ಕನ್ನಡ ನಾಡು" ರಾಜ್ಯ ಏಕೀಕರಣದ ಸಂತಸದಲ್ಲಿ ಕನ್ನಡಾಭಿಮಾನಿ ಕವಿಯ ಹೃದಯ ಹಿರಿಯ ಚೇತನ ನಾಡಿನ ಒಳಿತನ್ನು ಬಯುಸುವದಿಂತು.

"ಬೆಳಗಲೆಂದಿಗೂ ನಮ್ಮ ಚೆಲುವ ಕನ್ನಡ ನಾಡು
ಇಳೆಯೊಳಗೆ ಗೆಲು ಪಡೆದ ಭಾರತದ ಒಳ ನಾಡು"

ಕನ್ನಡದಲ್ಲಿ ಜನರಲ್ಲಿ ಒಕ್ಕಟ್ಟು, ವಿಶ್ವಾಸ ಬರಲಿ ಒಳಜಗಳಗಳು ಅಳಿಯಲಿ, ಚಿಕ್ಕತನ ಬಿಟ್ಟು ಐಕ್ಯ ಶಾಂತಿಗಳನ್ನು ಸಾಧಿಸಲಿ," ಸಕ್ಕರೆಯು ಬೆರೆ ಸವಿ ಹಾಲಿನೊಳು ಸಮರಸದಿ । ಕಕ್ಕುಲತೆ ಸ್ಮರಣೆಗಳೊಳೆಲ್ಲರಿರಲೊಮ್ಮತದಿ" ಗದುಗಿನ ವೀರನಾರಾಯಣದಯೆ ತೋರಲಿ" ಎಂದು ಆಶಿಸಿದ್ದಾರೆ.

೭. "ಮೂಡಿದುದು ಮೂಡಿದುದು ಕನ್ನಡದ ರವಿಬಿಂಬ" ಈ ಹಾಡನ್ನು ಅವರು ಬರೆದದ್ದು ಕರ್ನಾಟಕದ ಏಕೀಕರಣದ ನಂತರವೇ.

"ನಾಡಿಡಿದ ನಿಶೆ ಹರಿದು ಬೆಳೆಕಾಯ್ತು ಜಗದುಂಬ"
ಹೊತ್ತಿ ನೊಳಗೆಚ್ಚರಿಸಿ ಕವಿಕೋಳಿ ಕರೆಯುತಿರೆ ।
ಬಿತ್ತರಿಪ ಜಾತಿಭೇದಗಳ ಚುಕ್ಕೆ ಸರಿಯುತಿರೆ ।
ಮತ್ತೆ ನಾಗವೊಂದೆಂಬುದು ತಿಳಿಗಾಳಿ ತೀಡುತಿರೆ ॥"

"ಬಯಕೆ ಕೈಗೂಡಿತೆಂದೊರೆದು ಜನಗಳು ಸಾರೆ ।
ನಯ ಪ್ರೇಮ ಕನ್ನಡಿಗರೊಬ್ಬೊಬ್ಬರೊಳು ತೋರೆ ॥
ಜಯ ಜಯ ಕರ್ನಾಟಕವೆಂಬ ಧ್ವನಿ ನಭಕೇರೆ
ದಯವ ಗದುಗಿನ ವೀರನಾರಾಯಣರು ಬೀರೆ ॥"

■

# ಗಣ್ಯ ವ್ಯಕ್ತಿಗಳ ಒಡನಾಟ

ಕನ್ನಡ ನಾಡು ನುಡಿಯನ್ನು ಬೆಳೆಸುವಲ್ಲಿ ಹುಯಿಲಗೋಳ ಸದಾ ಸ್ಫೂರ್ತಿ ನೀಡುತ್ತಾ ಬಂದಿರುವವರೆಂದರೆ ಅನೇಕ ಗಣ್ಯ ಮಹನೀಯರುಗಳು. ಇವರ ಒಡನಾಟದಿಂದ ಅವರಲ್ಲಿ ರಾಷ್ಟ್ರಭಿಮಾನ, ಸಂವೇದನಾಶೀಲ, ದೇಶಪ್ರೇಮ ಬೆಳೆಯುವಲ್ಲಿ ಮತ್ತು ಸಾಹಿತ್ಯಲೋಕವನ್ನು ಪ್ರತಿಬಿಂಬಿಸುವಲ್ಲಿ ಸಹಕಾರವಾದವು. ಅನೇಕ ಗಣ್ಯರು ಅವರ ನಿಕರ ಸಂಪರ್ಕದಲ್ಲಿದ್ದರು. ಅವರ ನುಡಿಗಳು ಮತ್ತು ಕೆಲವರ ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

**೧. ಗಾಂಧೀಜಿ**

ಅಖಿಲ ಭಾರತ ಕಾಂಗ್ರೆಸನ ೩೯ನೇ ಅಧಿವೇಶನವು ಬೆಳಗಾವಿಯಲ್ಲಿ ೧೯೨೪-೩ ರಂದು ನಡೆಯಿತು. ಹುಯಿಲಗೋಳ ನಾರಾಯಣರಾಯರು ಬರೆದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯನ್ನು ಸ್ವಾಗತ ಗೀತೆಯಾಗಿ ಸ್ವೀಕರಿಸಲಾಯಿತು. ಗಾಂಧೀಜಿಯವರು ಮೆಚ್ಚಿಕೊಂಡು ಆ ಹಾಡಿನ ಭಾವಾರ್ಥ ಕೇಳಿ ಹೂವಿನಹಾರವನ್ನು ಹಾಕಿ ಗೌರವಿಸಿದಂತೆ ನಂತರ ಗಾಂಧೀಜಿಯವರನ್ನು ಕಂಡದ್ದು ಲಖನೌ ಅಧಿವೇಶನದಲ್ಲಿ ಹಾಗೂ ಗದುಗಿಗೆ ಆಗಮಿಸಿದಾಗ

**೨. ಬಾಲಗಂಗಾಧರ ತಿಲಕ**

೧೯೧೦ರಲ್ಲಿ ಕಾನೂನು ಅಭ್ಯಾಸ ಮಾಡಲು ಮುಂಬೈಗೆ ಹೋದರು. ಬಾಲಗಂಗಾಧರ ತಿಲಕರು ಭೇಟಿಯಾಗಿ ಅವರೊಡನೆ ರಾಷ್ಟ್ರದ ಹಿತಚಿಂತನೆಯ ಬಗ್ಗೆ ಸಂಭಾಷಿಸುವ ಅವಕಾಶ ದೊರೆಯಿತು. ಪುಣೆಯಲ್ಲಿದ್ದಾಗ ಮನೆಗೆ ಹೋಗಿದ್ದರಂತೆ. ಮತ್ತೊಮ್ಮೆ ತಿಲಕರನ್ನು ಕಾಣಲು ಗೆಳೆಯರೊಂದಿಗೆ ಹೋದಾಗ, 'ಚೆನ್ನಾಗಿ ಅಭ್ಯಾಸ ಮಾಡಿರಿ,ನಿಮ್ಮ ಆರೋಗ್ಯವನ್ನು ಚೆನ್ನಾಗಿ ಕಾಯ್ದು ಕೊಳ್ಳಿರಿ' ಎಂದು ಹೇಳಿದರಂತೆ.

**೩. ಗೋಪಾಲಕೃಷ್ಣ ಗೋಖಲೆ**

ಮುಂಬೈಯಲ್ಲಿದ್ದಾಗ ಶ್ರೇಷ್ಠ ಶಿಕ್ಷಣ ತಜ್ಞ ಗೋಪಾಲಕೃಷ್ಣ ಗೋಖಲೆಯವರನ್ನು ಭೇಟಿಯಾಗುವ ಸುಯೋಗ ಸಿಕ್ಕಿತು. ಆಗ ಗೋಖಲೆಯವರು ಹೇಳಿದರಂತೆ.

"ವ್ಯಕ್ತಿ, ಸಮಾಜ ಮತ್ತು ರಾಷ್ಟ್ರ ಇವು ಪ್ರಗತಿ ಸಾಧಿಸಬೇಕಾದರೆ ವಿದ್ಯೆಯೊಂದೇ ಸರ್ವಶ್ರೇಷ್ಠ ಸಾಧನ. ಆದುದರಿಂದ ಎಲ್ಲರೂ ಕಾಯಾವಾಚಾಮನಸಾದಿಂದ ಶಿಕ್ಷಣ ಪ್ರಚಾರ ಕಾರ್ಯ ಕೈಕೊಳ್ಳಬೇಕು" ಎಂದರು. ದಾನಗಳಲ್ಲೆ ವಿದ್ಯಾದಾನ ಶ್ರೇಷ್ಠವೆಂದು ಅರಿತ ನಾರಾಯಣರಾಯರು ೧೯೨೦ನೇ ಇಸವಿಯಲ್ಲಿ 'ವಿದ್ಯಾದಾನ ಸಮಿತಿ' ಎಂಬ ಬಹುದೊಡ್ಡ ವಿದ್ಯಾಕೇಂದ್ರವನ್ನು ಉತ್ತರ ಕರ್ನಾಟಕದ ಮಕ್ಕಳಿಗಾಗಿ ಗದಗದಲ್ಲಿ ಸ್ಥಾಪಿಸಿದರು.

### ೪. ಗರೂಡ ಸದಾಶಿವರಾಯರು [ನಾಟ್ಯ ಕೇಸರಿ]

ಗರೂಡ ಸದಾಶಿವರಾಯರು ಮತ್ತು ನಾರಾಯಣರಾಯರು ಆತ್ಮೀಯ ಸ್ನೇಹಿತರು. ದತ್ತಾತ್ರೇಯ ನಾಟಕ ಕಂಪನಿಯ ಮಾಲೀಕರಾದ ಸದಾಶಿವರಾಯರು ತಮ್ಮ ಎಲ್ಲ ಕಾರ್ಯಗಳಲ್ಲೂ ಹುಯಿಲಗೋಳರ ಸಲಹೆಯಂತೆ ಮುನ್ನಡೆಯುತ್ತಿದ್ದರು ಇದು ಅವರ ಮೇಲಿರುವ ವಿಶ್ವಾಸ, ಅಭಿಮಾನವನ್ನು ತಿಳಿಸಿಕೊಡುತ್ತದೆ. ಗರೂಡರು ತಮ್ಮ ಕಂಪನಿಯಿಂದ ಹುಯಿಲಗೋಳರು ಬರೆದ "ಶಿಕ್ಷಣ ಸಂಭ್ರಮ" ಮತ್ತು ಸ್ತ್ರೀ ಧರ್ಮರಹಸ್ಯ" ನಾಟಕಗಳನ್ನು ಪುಣೆ, ಮುಂಬೈವರೆಗೂ ಪ್ರಯೋಗ ಮಾಡಿದರು. ಸದಾಶಿವರಾಯರು ತಮ್ಮ ಮನೆಯ ವಿಷಯವಾಗಲಿ, ಕಂಪನಿಯ ವಿಷಯವಾಗಲಿ, ನಾಟಕ ಪ್ರಯೋಗದಲ್ಲಿ ಏನಾದರೂ ಗೊಂದಲಗಳುಂಟಾದಾಗ ನಾರಾಯಣರಾಯರ ಜೊತೆ ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರು. ಹೀಗಾಗಿ ಇಬ್ಬರಲ್ಲೂ ಪ್ರೀತಿ ವಿಶ್ವಾಸಗಳಿದ್ದದು ಕಂಡುಬರುತ್ತದೆ.

### ೫. ವೀರಸಾವರಕರ

ನಾರಾಯಣರಾಯರು ಪುಣೆಯಲ್ಲಿ ಕಲಿಯುತ್ತಿದ್ದಾಗ ಅದೇ ಫರ್ಗ್ಯುಸನ್ ಕಾಲೇಜಿನಲ್ಲಿ ವೀರ ಸಾವರಕರರವರು ಓದುತ್ತಿದ್ದರು. ಒಂದು ಸಲ ಬಟ್ಟೆ ಅಂಗಡಿಗೆ ಹೋದಾಗ ಮರಾಠಿ ಭಾಷೆ ಬಾರದೇ ತೊಂದರೆಯಾದಾಗ ಅದೇ ಸಮಯದಲ್ಲಿ ಅಲ್ಲಿಗೆ ಬಂದಿದ್ದ ವೀರ ಸಾವರಕರರವರು ಸಮಸ್ಯೆಯನ್ನು ತಿಳಿದು ಸ್ವದೇಶಿ ಬಟ್ಟೆಯ ಅಂಗಡಿಗೆ ಕರೆದುಕೊಂಡು ಹೋಗಿ ಖಾದಿ ಬಟ್ಟೆಗಳನ್ನು ಕೊಳ್ಳಲು ಸಲಹೆ ನೀಡಿದರಂತೆ. ಅಷ್ಟೇ ಅಲ್ಲದೇ ದೇಶೀಯ ವಸ್ತುಗಳನ್ನು ಬಳಸಿ ಸ್ವದೇಶಿ ಚಳುವಳಿಗೆ ಬೆಂಬಲಿಸಲು ಪ್ರೇರೇಪಿಸಿದರು. ಅಂದಿನಿಂದ ನಾರಾಯಣರು ಖಾದಿ ಬಟ್ಟೆಗಳನ್ನು ಕೊನೆಯವರೆಗೂ ಧರಿಸಿದರು .

### ೬. ಆಲೂರು ವೆಂಕಟರಾಯರು

ಆಲೂರು ವೆಂಕಟರಾಯರು ಗದಗಿಗೆ ಬಂದರೆಂದರೆ ನಾರಾಯಣರಾಯರ ಮನೆಗೆ ಹೋಗಿ ಅವರ ಆತಿಥ್ಯವನ್ನು ಸ್ವೀಕರಿಸುವುದು ವಾಡಿಕೆಯಾಗಿತ್ತು. ಒಂದೇ ವೃಕ್ಷದ ಟೊಂಗೆಗಳಂತೆ ಇಬ್ಬರೂ ನಾಡು ನುಡಿಗಾಗಿ ಹೋರಾಟ ಮಾಡಿದರು.

ಹೀಗಾಗಿ ಇಬರಿಬ್ಬರ ವಿಚಾರಧಾರೆಗಳು ಒಂದಾಗಿದ್ದವು. ಅನೇಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು ಅವರಿಬ್ಬರೂ ಒಂದು ಆತ್ಮ ಎರಡು ದೇಹದಂತಿದ್ದರು .

೭. ಕೆರೂರು ವಾಸುದೇವಾಚಾರ್ಯರು

"ಶುಭೋದಯ" ಮಾಸಪತ್ರಿಕೆ ಎಂದಾಕ್ಷಣ ನೆನಪಿಗೆ ಬರುವವರೆಂದರೆ ಆ ಕಾಲದ ಪ್ರಮುಖ ನಾಟಕಕರರಲ್ಲಿ ಒಬ್ಬರಾದ

ಕೆರೂರು ಆಸಕ್ತಿ ಕ್ಷೇತ್ರ ಒಂದೇಯಾಗಿದ್ದರಿಂದ ರಂಗಭೂಮಿಯ ತಂತ್ರಗಳನ್ನು ಚರ್ಚೆ ಮಾಡುತ್ತಿದ್ದರಂತೆ ಹುಬ್ಬಳಿಯಿಂದ ತಮ್ಮ ಊರು ಬಾಗಲಕೋಟೆಗೆ ಹೋಗುವಾಗ ಮಧ್ಯದಲ್ಲಿ ಗದುಗಿಗೆ ಬಂದು ನಾರಾಯಣರಾಯರನ್ನು ಮಾತನಾಡಿಸಿ ಹೋಗುವುದು ಅವರ ಪರಿಪಾಠವಾಗಿತ್ತು ಇಬ್ಬರೂ ಸೇರಿದಾಗ ನಾಡು ನುಡಿಯ ಚಿಂತನೆ ಮಾಡುತ್ತಿದ್ದರು.

೮. ಪಂಜೆ ಮಂಗೇಶರಾಯರು

ನಾರಾಯಣರಾಯರಿಗೆ ಪಂಜೆ ಮಂಗೇಶರಾಯರೊಡನೆ ಒಳ್ಳೆಯ ಬಾಂಧವ್ಯವಿತ್ತು. ಒಂದು ದಿನ ಗದುಗಿನ ಭಾರತದ ಸಂಶೋಧನೆ ಮಾಡುತ್ತಿರುವಾಗ ಪಂಜೆ ಮಂಗೇಶರಾಯರು ಅವರ ಮನೆಗೆ ಬಂದರು. ಆಗ ಅವರ ಕೈಗೆ ಗದುಗಿನ ಭಾರತದ ತಾಡಯೋಲೆ ಗ್ರಂಥವನ್ನು ನೀಡಿದರಂತೆ ಅದನ್ನು ಓದಿ ಹರ್ಷಗೊಂಡು ಮನೆಗೆ ಬಂದುದು ಸಾರ್ಥಕವಾಯಿತು ಎಂದರಂತೆ.

೯. ಗಳಗನಾಥರು

ಹೊಸಗನ್ನಡ ಸಾರಸ್ವತ ಪ್ರಪಂಚದ ಕೆಲವೇ ಚಿರಸ್ಮರಣೀಯ ವ್ಯಕ್ತಿಗಳಲ್ಲಿ ಗಳಗನಾಥರಿಗೆ ಅಗ್ರಸ್ಥಾನ. ಇವರು ಕನ್ನಡಕ್ಕೆ ಸುಮಾರು ೫೦ ಕೃತಿಗಳನ್ನು ನೀಡಿ ಕನ್ನಡಕ್ಕೆ ಏಕರೂಪತೆಯನ್ನು ನೀಡಿದವರಲ್ಲಿ ಆದ್ಯರು. ನಾರಾಯಣರಾಯರಿಗೆ ಇವರ ಜನ್ಮ ಶತಾಬ್ದಿ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದರು. ಆಗ ಭಾಷಣದಲ್ಲಿ ಗಳಗನಾಥರನ್ನು ಅಭಿನಂದಿಸಿದರು.

೧೦. ದ. ರಾ. ಬೇಂದ್ರೆ

ಬೇಂದ್ರೆಯವರು ಹುಯಿಲಗೋಳ ನಾರಾಯಣರಾಯರ ಶಿಷ್ಯರಾಗಿದ್ದರು ಅವರ ಪ್ರತಿಭೆ ಜಾಣ್ಮೆಯನ್ನೂ ಅರಿತಿದ್ದರು. ಬೇಂದ್ರೆಯವರ ಎಪ್ಪತ್ತನೆಯ ಹುಟ್ಟುಹಬ್ಬವನ್ನು ಶಿರಹಟ್ಟಿಯಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಆಸಂದರ್ಭದಲ್ಲಿ ನಾರಾಯಣರಾಯರು, "ಎಪ್ಪತ್ತರ ವಯಸ್ಸಿನಲ್ಲಿಯೂ ಹುರುಪಿನ

ಹುಡುಗ ಅಂದಿನಂತೆಯೇ ಮುನ್ನುಗ್ಗುತ್ತಿದ್ದಾನೆ, ಸಂತೋಷ" ಎಂದು ಅಭಿಮಾನದಿಂದ ನುಡಿದರು.

### ೧೧. ಬಿ. ಎಂ. ಶ್ರೀಕಂಠಯ್ಯ

ಬಿ.ಎಂ. ಶ್ರೀಕಂಠಯ್ಯನವರು ನಾರಾಯಣರಾಯರನ್ನು ಭೇಟಿಯಾಗಲಿಕ್ಕೆ ಮನೆಗೆ ಬರುತ್ತಿರುವಾಗ ಬಾಗಿಲಿನಲ್ಲೇ, " ಸತತ ಕಲ್ಯಾಣಮಚ್ಯುತನ ಭಕ್ತರಿಗೆ" ಎಂಬ ಹಾಡನ್ನು ಯಾವಾಗಲೂ ಹಾಡುತ್ತಲೇ ಪ್ರವೇಶಿಸುತ್ತಿದ್ದರಂತೆ.

### ೧೨. ಡಾ|| ಆರ್. ಡಿ. ರಾನಡೆ

ಡಾ|| ರಾನಡೆಯವರು ಬಿಜಾಪೂರದ ಹತ್ತಿರದಲ್ಲಿರುವ ನಿಂಬಾಳದಲ್ಲಿ ಆಶ್ರಯವನ್ನು ನಡೆಸುತ್ತಿದ್ದರು. ನಾರಾಯಣರಾಯರು ತಮ್ಮ ಮಗಳನ್ನು ಭೇಟಿಯಾಗಲು ಬಿಜಾಪುರಕ್ಕೆ ಹೋದಾಗಲೆಲ್ಲ ರಾನಡೆಯವರ ಆಶ್ರಮಕ್ಕೆ ಹೋಗುತ್ತಿದ್ದರು. ಆಶ್ರಮದಲ್ಲಿದ್ದ ಸಮಯದಲ್ಲಿ ಆಶ್ರಮದ ಎಲ್ಲ ಕಾರ್ಯ ಕ್ರಮಗಳಲ್ಲಿ ಸ್ವತಃ ನಾರಾಯಣರಾಯರೇ "ಉದಯವಾಗಲಿ" ಹಾಡನ್ನು ಹಾಡಬೇಕೆಂದು ಕೇಳಿಕೊಂಡಾಗ, ನಾರಾಯಣರಾಯರು ಹಾಡು ಹೇಳುತ್ತಿದ್ದರಂತೆ.

■

# ಉಪಸಂಹಾರ

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಗೀತೆಯೊಂದಿಗೆ ಕನ್ನಡ ನಾಡಿನ ಜನಮನವನ್ನು ಎಚ್ಚರಿಸಿ, ಜಾಗ್ರತಗೊಳಿಸಿದವರು ಹುಯಿಲುಗೋಳ ನಾರಾಯಣರಾಯರು, ಸರಳ ವ್ಯಕ್ತಿತ್ವ ಸಾತ್ವಿಕ ಜೀವನ, ನಿರಾಡಂಬರ ದೇಶಭಕ್ತಿ ಮತ್ತು ಕನ್ನಡ ಭಾಷಾ ಪ್ರೇಮ ಇವುಗಳಿಗೆ ಹೆಸರಾದವರು. "ವಂದೇ ಮಾತರಂ" ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಸ್ಫೂರ್ತಿ ಗೀತೆಯ ಪಾತ್ರವನ್ನೇ ಕರ್ನಾಟಕದ ಏಕೀಕರಣದ ಹೋರಾಟದಲ್ಲಿ ನಾರಾಯಣರಾಯರ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆ ವಹಿಸಿತು. ಕನ್ನಡ ನಾಡಿನ ಸ್ವಾಭಿಮಾನದ ಕೆಚ್ಚನ್ನು ಪ್ರತಿಯೊಬ್ಬರ ಹೃದಯದಲ್ಲಿ ಅಚ್ಚಳಿಯದೇ ನಿಚ್ಚಳವಾಗಿ ಉಳಿಯುವಂತೆ ಮಾಡಿದ ಕೀರ್ತಿ ಹುಯಿಲುಗೋಳ ನಾರಾಯಣರಾಯರದು.

**೧) ನಾಡಗೀತೆಯ ರಚನೆ :**

ಕನ್ನಡ ಕಟ್ಟುವಲ್ಲಿ ಹುಯಿಲಗೋಳ ನಾರಾಯಣರಾಯರ ಬಹುದೊಡ್ಡ ಕೊಡುಗೆಯೆಂದರೆ, " ಉದಯವಾಗಲಿ" ಗೀತೆ ರಚನೆ ನಾರಾಯಣರಾಯರು ಮುಖ್ಯವಾಗಿ ಸ್ಮರಣೆ ಮಾಡಲ್ಪಡುವುದೆ ಇದಕ್ಕಾಗಿಯೇ ೧೯೨೪ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕಾಗಿ ಸ್ವಾಗತಗೀತೆಯನ್ನು ರಚಿಸಿ ಕಳಿಸಲು ವೃತ್ತಪತ್ರಿಕೆಗಳ ಮುಖಾಂತರ ವಿನಂತಿಸಿಕೊಂಡಾಗ ನಾರಾಯಣರಾಯರ ನಾಡ ಪ್ರೇಮಗೀತೆಯ ರೂಪದಲ್ಲಿ ಓತಪ್ರೋತವಾಗಿ ಹೊರಹೊಮ್ಮಿ ಕವನ ರೂಪ ತಾಳಿತು. ಮುಂದ ಎಸ್ವಾಗತ ಸಮಿತಿ ಅದನ್ನೇ ಸ್ವಾಗತ ಗೀತೆಯನ್ನಾಗಿ ಆಯ್ಕೆ ಮಾಡಿತು. ಅಧಿವೇಶನದಲ್ಲಿ ಧಾರವಾಡದ ಗವಯಿಸುಬ್ಬರಾಯರು ಹಾಡತೊಡಗಿದಾಗ ನೆರೆದ ಜನರೆಲ್ಲಾ ಪುಳಕಿತರಾದರು. ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದೊಂದಿಗೆ ಈ ಗೀತೆ ಕರ್ನಾಟದ ಏಕೀಕರಣಕ್ಕೆ ಸ್ಫೂರ್ತಿ ನೀಡಿದ್ದು ಇದರ ಮಹತ್ವವಾಗಿದೆ. ಮುಂದೆ ಕರ್ನಾಟಕದ ತುಂಬೆಲ್ಲಾ ಝೇಂಕರಿಸಿದ ಈ ಗೀತೆ ಕನ್ನಡ ನಾಡು ನುಡಿಗಳ ಏಳ್ಗೆಗೆ ಕಂಕಣ ಕಟ್ಟಿಸಿತು. ನಾಡಿನ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿಗೊಂಡಿತು. ಕನ್ನಡ ಚೇತನವನ್ನು ಉದ್ದೀಪನಗೊಳಿಸಿತು. ಅಂದಿನಿಂದಾ ಶ್ರೀ ಹುಯಿಲಗೋಳ ನಾರಾಯಣರಾಯರು "ನಾಡಗೀತೆ ನೀಡಿದ

ನಾರಾಯಣರಾಯರು" ಎಂದೇ ನಾಡಿನಾದ್ಯಂತ ಪರಿಚಿತರಾದರು. ಕರ್ನಾಟಕ ಏಕೀಕರಣ ಮಂತ್ರವಾದ ಈ ಗೀತೆ ಬಹು ವಿಶಿಷ್ಟವಾದ ಆಶಯವನ್ನು ಹೊಂದಿತ್ತು. ಹರಿದು ಹಂಚಿಹೋಗಿದ್ದ ಕನ್ನಡನಾಡು ಒಂದಾಗಬೇಕು ಎಂಬ ಆಶಯದೊಂದಿಗೆ ಕನ್ನಡ ನಾಡಿನ ಮಹತಿಯ್ನನು ಹೇಳುತ್ತದೆ. ಸವದತ್ತಿಯ ರೇಣುಕಾಂಬೆ, ಹನುಮಂತ, ರಾಜಮಹಾರಾಜರು, ಕವಿಪುಂಗವರು, ವಿಜ್ಞಾನಿಗಳು, ಶಿಲ್ಪಿಕಾರರು, ಧಾರ್ಮಿಕ ಪುರುಷರು ಹಾಗೂ ಇಲ್ಲಿನ ನೆಲಜಲದ ವರ್ಣನೆ ಈ ಗೀತೆಯಲ್ಲಿ ಮಡುವುಗಟ್ಟಿದೆ.

ಹೀಗೆ ಕನ್ನಡ ಕುಲಕೋಟಿಯನ್ನು ಜಾಗೃತಗೊಳಿಸಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಹಾಡು ಇಂದಿಗೂ ಕನ್ನಡಿಗರನ್ನು ರೋಮಾಂಚನಗೊಳಿಸುತ್ತದೆ. ನಂತರದಲ್ಲೂ ಈ ಗೀತೆ ಕನ್ನಡ ನಾಡಿನಲ್ಲಿ ಬೀರಿದ ಪ್ರಭಾವದ ಕುರಿತು ನರಾಯಣರಾಯತು ಮೇಲೆ ಪಿ.ಎಚ್.ಡಿ. ಪ್ರಬಂಧ ರಚಿಸಿದ ಡಾ. ಜಿ.ಡಿ.ಜೋಶಿ ಹೀಗೆ ಹೇಳುತ್ತಾರೆ – "ಉದಯವಾಗಲಿ ನಾಡಗೀತೆಯನ್ನು ಮದ್ರಾಸ (ತಮಿಳುನಾಡು) ಸರಕಾರದ ಪಠ್ಯ ಪುಸ್ತಕದಲ್ಲಿ ಸೇರಿಸಲಾಗಿತ್ತು. ಅನಂತರ ೧೯೩೮ರಲ್ಲಿ ಬಿ.ಎಂ.ಶ್ರೀಕಂಠಯ್ಯನವರು ಸಂಪಾದನೆ ಮಾಡಿದ "ಕನ್ನಡ ಬಾವುಟ ಕಾವ್ಯ ಸಂಗ್ರಹದಲ್ಲಿ 'ನಾಡ ಪದಗಳು' ಎಂಬ ವಿಭಾಗದಲ್ಲಿ ಆಯ್ದುಕೊಂಡಿದ್ದು, ಕಾವ್ಯದ ಸತ್ವದ ದೃಷ್ಟಿಯಿಂದಾ ಗಮನಾರ್ಹವಾದ್ದು, ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಉರ್ದುವಿಗೆ ತರ್ಜುಮೆ ಹೊಂದಿತು, ಅತ್ತ ಕಾಳಿಂಗರಾಯರು ಇತ್ತ ಭೀಮಸೇನ ಜೋಶಿ 'ಉದಯವಾಗಲಿ' ನಾಡಗೀತೆಯನ್ನು ತಮ್ಮ ಸುಮಧುರ ಕಂಠಗಳಿಂದಾ ಹಾಡಿ ಜನರನ್ನು ನಲಿಸಿದರು. ಭಾಷಾವಾರು ಪ್ರಾಂತರಚನೆಯ ಸಂದರ್ಭದಲ್ಲಿ (೧ ನವೆಂಬರ ೧೯೫೬) ಕರ್ನಾಟಕ ಸರಕಾರವು ಡಾ॥ ಬಾಬು ರಾಜೇಂದ್ರ ಪ್ರಸಾದ ಅವರ ಹಸ್ತದಿಂದಾ ನಾಡಗೀತೆಯನ್ನು ರಚಿಸಿದ ನಾರಾಯಣರರನ್ನು, ಸುಶ್ರಾವ್ಯವಾಗಿ ಹಾಡಿ ಜನಮನ ಸೇಳೆದ ಕಾಳಿಂಗರಾಯರನನು ವಿಶೇಷವಾಗಿ ಸನ್ಮಾನಿಸಿತು.

ಉದಯವಾಗಲಿ ಗೀತೆಯನ್ನೊಳಗೊಂಡಂತೆ ನಾರಾಯಣರಾಯರು ಕನ್ನಡದ ಬೇರಾವ ಸಾಹಿತಿಯು ರಚಿಸಲಾರದಷ್ಟು ಉತ್ತಮವಾದ "ಸ್ವಾಗತಗೀತೆ"ಗಳನ್ನು ರಚಿಸಿದ್ದರೆ. ಅವುಗಳಲ್ಲಿ ಏಳು ಸ್ವಾಗತಗೀತೆಗಳು ನಮಗೆ ದೊರಕಿವೆ. ಅವು "ಗೆಲು ಬರಲಿ ಭಾರತ ರಾಷ್ಟ್ರೀಯ ಮಹಾಸಭೆಗೆ." "ಬನ್ನಿ ಬನ್ನಿ ದಯಮಾಡಿಸಿ." "ಸ್ವಾಗತವು ಸ್ವಗತವು ಸಕಲರ್ಗೆ" "ದಯಮಾಡಿ ದಯಮಾಡಿ ಕನ್ನಡದ ಮನ್ನೆಯರೆ" " ಸ್ವಾಗತವು ಸ್ವಾಗತವು ಶ್ರೀಗಳ ವೃಂದಕ್ಕೆ" ಮುಂತಾದವುಗಳು

**೨) ಕನ್ನಡ ನಾಟಕ ಸಾಹಿತ್ಯ ಹಾಗೂ ರಂಗಭೂಮಿಗೆ ಕೊಡುಗೆ :**

ನಾರಾಂಯಣರಾಂಯರಿಗೆ ಬಾಲ್ಯದಿಂದಲೂ ನಾಟಕ ಹಾಗೂ

ರಂಗಭೂಮಿಯೆಂದರೆ ಅಪಾರ ಆಸಕ್ತಿ. ಅಂದಿನ ಮರಾಠಿ ನಾಟಕಗಳ ಪ್ರಾಬಲ್ಯ ಹಾಗೂ ಕನ್ನಡ ನಾಟಕಗಳ ಕೊರತೆಯನ್ನು ಮನಗಂಡು ನಾರಾಯಣರಾಯರು ನಾಟಕಗಳ ರಚನೆಯತ್ತ ಮನಸ್ಸು ಮಾಡಿದರು. "ನಾಟಕಗಳಲಿ ಅಭಿರುಚಿಯನ್ನು ನಮ್ಮ ಜನಕ್ಕೆ ಒಳ್ಳೆಯ ಕನ್ನಡ ನಾಟಕಗಳನ್ನು ಕೊಟ್ಟರೆ ಈಗ ಮರಾಠಿ ನಾಟಕಗಳಲ್ಲಿ ಹೋಗುತ್ತಿರುವ ಹಣ ಕನ್ನಡದವರಿಗೆ ಬಂದೀತು ಹಾಗೇ ಇವುಗಳ ಗುಣಮಟ್ಟ ಸುಧಾರಿಸಲು ಸಹಾಯಕವಾಗಬಹುದು" ಎಂದು ನಾರಾಯಣರಾಯರು ಹೇಳುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಸಾಮಾಜಿಕ ನಾಟಕಗಳ ರಚನೆಯನ್ನು ಆರಂಭಿಸಿದವರಲ್ಲಿ ನಾರಾಯಣರಾಯರ ಕೊಡುಗೆ ಬಹು ದೊಡ್ಡದು. ನಾಟಕಗಳ ಅದರಲ್ಲೂ ವೈಚಾರಿಕ ಕ್ರಾಂತಿಯನ್ನು ಬೀರುವ ಸಾಮಾಜಿಕ ನಾಟಕಗಳ ರಚನೆ ಇಲ್ಲವೇ ಇಲ್ಲ ಎನ್ನುವ ಸಮಯದಲ್ಲಿ ಅಂದರೆ ಸರಿ ಸುಮಾರು ೧೯೦೨ರಲ್ಲಿ ನಾರಾಯಣರಾಯರು ಸಹೋದರ ಹಾಗೂ ಅವರ ಸ್ನೇಹಿತರು ಸೇರಿ ಆರಂಭಿಸಿದ್ದ "ಯಂಗ್ ಮೆನ್ಸ್ ಫೂಟ್‌ಬಾಲ್ ಕ್ಲಬ್" ಎಂಬ ತರುಣ ಆಟಗಾರರ ಸಂಘ ಪ್ರತಿವರ್ಷ ಕ್ಲಬ್ಬಿನ ವಾರ್ಷಿಕೋತ್ಸವವನ್ನು ಆಚರಿಸುತ್ತಿತ್ತು. ಅವರೆಲ್ಲಾ ಸೇರಿ "ವಜ್ರಮುಕುಟ"ವನ್ನು ಕ್ಲಬ್ಬಿನ ವಾರ್ಷಿಕೋತ್ಸವದಲ್ಲಿ ಪ್ರಯೋಗಿಸಿದರು. ಈ ರೀತಿ ನಾರಾಯಣರಾಯರ ಮನೋಭಿಲಾಷೆ ನಾಟಕ ಸೇವೆಯ ಮುಖಾಂತರ ಕನ್ನಡ ನಾಡಿನ ಸೇವೆ ಆರಂಭವಾಯಿತು. ಉತ್ತರ ಕರ್ನಾಟಕದಲ್ಲಿ ಸದಭಿರುಚಿಯ ನಾಟಕಗಳನ್ನು ರಚಿಸಿ, ಆಡಿಸುವಲ್ಲಿ ನಾರಾಯಣರಾಯರು ಬಹು ಮುಖ್ಯ ಪಾತ್ರ ವಹಿಸಿದ್ದಾರೆಂದೇ ಹೇಳಬಹುದು.

ವಜ್ರಮುಕುಟದ ಪ್ರಯೋಗದ ಯಶಸ್ಸು ಹಾಗೂ ಅಂದಿನ ಕ್ರಿಯಾಶೀಲ ರಂಗಕರ್ಮಿ ಸಕ್ಕರಿ ಬಾಳಾಚಾರ್ಯರ ಪ್ರೋತ್ಸಾಹದಿಂದಾಗಿ ನಾರಾಯಣರಾಯರು ಹಲವಾರು ನಾಟಕಗಳನ್ನು ರಚಿಸಿ ಕನ್ನಡ ನಾಟಕ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು. "ಪ್ರೇಮಾರ್ಜುನ", "ಕನಕದಾಸ", "ಸ್ತ್ರೀ ಧರ್ಮ ರಹಸ್ಯ", " ಶಿಕ್ಷಣ ಸಂಭ್ರಮ", "ಪತಿತೋದ್ಧಾರ", "ಪುನರ್ಮಿಲನ", ಎಂಬ ಸಾಮಾಜಿಕ ನಾಟಕಗಳನ್ನು "ಇಂದ್ರಜಿತು ವಧೆ", "ಗರುಡ ಗರ್ವಭಂಗ", "ಭಾರತ ಸಂಧಾನ", "ಉತ್ತರ ಗೋಗ್ರಹಣ" ಎಂಬ ನಾಟಕಗಳನ್ನು ರಚಿಸಿದರು. ಅಂದಿನ ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಅವರ ಸಾಮಾಜಿಕ ನಾಟಕಗಳು ವಿಡಂಬಿಸಿದರು. ಐತಿಹಾಸಿಕ ನಾಟಕಗಳು ನಮ್ಮ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸಿ ಕನ್ನಡಿಗರಲ್ಲಿ ಭಾಷಾಭಿಮಾನ ಹಾಗೂ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿದವು. ಅವರ ಪೌರಾಣಿಕ ನಾಟಕಗಳು ನಮ್ಮ ಧಾರ್ಮಿಕ ಪರಂಪರೆ ಹಾಗೂ ಆಧ್ಯಾತ್ಮಿಕ

ಮೌಲ್ಯಗಳನ್ನು ಆಸ್ತಿಕರಿಗೆ ನೆನಪಿಸಿಕೊಟ್ಟವು. ಅವರ 'ಸ್ತ್ರೀ ಧರ್ಮ ರಹಸ್ಯ', 'ಪತಿತೊದ್ಧಾರ', 'ಶಿಕ್ಷಣ ಸಂಭ್ರಮ' ಮುಂತಾದ ನಾಟಕಗಳಿಂದಾಗಿ ಅವರನ್ನು "ಆದ್ಯ ಸಾಮಾಜಿಕ ನಾಟಕಕಾರರೆಂದು ಕರೆಯಲಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಪ್ರಪ್ರಥಮಬಾರಿಗೆ ಸಾಮಾಜಿಕ ನಾಟಕಗಳನ್ನು ರಚಿಸಿ, ಮಾಡುವುದರ ಮೂಲಕ ಕನ್ನಡ ಕಟ್ಟುವ ಕಾಯಕದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿದ ನಾರಾಯಣರಾಯರ ಅಂದಿನ ಕಾಲದ ರಂಗಭೂಮಿಯ ಹೊಳೆಯಲ್ಲಿ ಕೊಚ್ಚಿ ಹೋಗುತ್ತಿದ್ದ ಕನ್ನಡಿಗರ ಸ್ವಾಭಿಮಾನವನ್ನು ಎಚ್ಚರಿಸಿದರು. ಅವರ ಪ್ರಮುಖ ನಾಟಕಗಳಾದ 'ಸ್ತ್ರೀ ಧರ್ಮ ರಹಸ್ಯ', ಶಿಕ್ಷಣ ಸಂಭ್ರಮ', 'ಪತಿತೋದ್ಧಾರ' ನಾಟಕಗಳ ಮೂಲಕ ಅಂದಿನ ಜನರಲ್ಲಿ ಸಂಪ್ರದಾಯಕ ಮೌಲ್ಯಗಳೊಂದಿಗೆ ಆಧುನಿಕ ಶಿಕ್ಷಣ ಹಾಗೂ ವೈಚಾರಿಕತೆಯನ್ನು ಅಳವಡಿಸಿಕೊಳ್ಳಲು ಕರೆ ನೀಡಿದರು. ಗದುಗಿನ ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ ಹಾಗೂ ಧಾರವಾಡದ ಕಲೋದ್ಧಾರಕ ಸಂಘ ಮುಂತಾದ ನಾಟಕ ಮಂಡಳಿಗಳು ನಾರಾಯಣರಾಯರ ನಾಟಕಗಳನ್ನು ಭಾವಪೂರ್ಣವಾಗಿ ಅಭಿನಯಿಸಿ ಜನಮನ ಸೂರೆಗೊಂಡರು.

ಈ ನಿಟ್ಟಿನಲ್ಲಿ ನಾರಾಯಣರಾಯರ ನಾಟಕಗಳು ಸಮಕಾಲೀನರಾದ ಕೆರೂರ ವಾಸುದೇವಾಚಾರ್ಯ, ಬಿ.ಎಂ.ಶ್ರೀ, ಮಾಸ್ತಿ, ಕೈಲಾಸಂ ಮುಂತಾದವರು ಸೇರಿಕೊಂಡು ಕನ್ನಡ ಸಾಹಿತ್ಯದಲ್ಲಿ ವಿಲಾಸಿ ರಂಗಭೂಮಿಯ ಸಾಮಾಜಿಕ ನಾಟಕಗಳ ಯುಗವನ್ನೇ ಪ್ರಾರಂಭಿಸಿದರು. ಈ ನಿಟ್ಟಿನಲ್ಲಿ ಕನ್ನಡ ರಂಗಭೂಮಿಯನ್ನು ಕಟ್ಟುವ ಕಾಯಕಕ್ಕೆ ಭದ್ರ ತಳಪಾಯವನ್ನು ಒದಗಿಸಿದ ನಾರಾಯಣರಾಯರು ರಂಗಭೂಮಿಗೆ ನೀಡಿದ್ದ ಕೊಡುಗೆಯನ್ನು ಡಾ. ಜಿ.ಡಿ. ಜೋಶಿ ಹೀಗೆ ವಿಶ್ಲೇಷಿಸುತ್ತಾರೆ. ನಾರಾಯಣರಾಯರ ಕನ್ನಡ ನಾಟಕಗಳಿಗೆ ಕನ್ನಡ ರಂಗಭೂಮಿಯು ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. ಅದೆಂದರೆ ಅವು ನವೋದಯ ಪೂರ್ವ ನಾಟಕಗಳ ಸಾಲಿಗೆ ಸೇರಿದ ವೃತ್ತಿ ರಂಗಭೂಮಿಯಿಂದಾ ಆಧುನಿಕ ರಂಗಭೂಮಿಗೆ ಹೊರಳಿಕೊಳ್ಳುವ ಹಂತದಲ್ಲಿನ ಸಂಧಿಕಾಲದ ನಾಟಕಗಳೆಂದು ಖಚಿತವಾಗಿ ಹೇಳಬಹುದು. ಅಂತೆಯೇ ಇವುಗಳಿಗೆ ಐತಿಹಾಸಿಕ ಮಹತ್ವವಿದೆ. ಉದಯಕಾಲದ ಬೀಜಗಳನ್ನು ಗರ್ಭೀಕರಿಸಿಕೊಂಡು ನವೋದಯ ಆಶೋತ್ತರಗಳನ್ನು ತನ್ನನ್ನು ತೆರೆದುಕೊಂಡ ಮಹತ್ವ ಈ ನಾಟಕಗಳಿಗಿದೆ.

**೩) ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ :**

ಹುಯಿಲಗೋಳ ನಾರಾಯಣರಾಯರ ನಾಟಕಗಳು ಜನಪ್ರಿಯತೆ ಗಳಸಿ ಸಾಕಷ್ಟು ಹಣವನ್ನು ಗಳಿಸಿಕೊಟ್ಟವು. ಬಂದ ಹಣವನ್ನು ಸಮಾಜದ ಋಣ ತೀರಿಸುವುದಕ್ಕಾಗಿ ಬಳಸಬೇಕೆಂದು ನಿರ್ಧರಿಸಿದ ನಾರಾಯಣರಾಯರು ತಮ್ಮ

ಕ್ಲಬ್ಬಿನ ಸದಸ್ಯರ ಸಹಾಯದಿಂದಾಗಿ "ವಿದ್ಯಾದಾನ ಸಮಿತಿ" ಎಂಬ ಆದರ್ಶ ಶಿಕ್ಷಣ ಸಂಸ್ಥೆ ೧೯೨೦ ನೇ ಇಸ್ವಿಯಲ್ಲಿ ಗದುಗಿನಲ್ಲಿ ಸ್ಥಾಪಿತವಾಯಿತು. ಈ ರೀತಿ ನಾರಾಯಣರಾಯರ ಸಾಹಿತ್ಯ ಸೇವೆ ವಿದ್ಯಾದಾನಕ್ಕೆ ಮೀಸಲಾದ ಇಡಗಂಟಾಯಿತು. ಅವರ ಸಹವರ್ತಿಗಳಾದ ಸಾಲಿನಾರಾಂಸುಣರಾಂಸುರು, ಗುಡಿನಾರಾಯಣಾಚಾರ್ಯರು, ಡಾ. ಜಿ.ಜಿ. ಪಾಗೆಯವರು, ತಮ್ಮ ಶ್ರೀನಿವಾಸರಾಯರು ಪವಿತ್ರ ಯೋಜನೆಗೆ ಬೆಂಬಲವಾಗಿ ನಿಂತು ತಮ್ಮ ಸಂಪೂರ್ಣ ಸಹಾಯ, ಸಹಕಾರ ನೀಡಿದರು. ನಾರಾಯಣರಾಯರು ವಿದ್ಯಾದಾನ ಸಮಿತಿ ಸ್ಥಾಪನೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದರು. ಅವರೆಂದೂ ಸಮಿತಿಯ ಅಧ್ಯಕ್ಷರಾಗದೇ ಸದಾ ಸಮಿತಿಯ ಕ್ರಿಯಾಶೀಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಕೇವಲ ಮೂವತ್ತು ವಿದ್ಯಾರ್ಥಿಗಳಿಂದ ಆರಂಭಗೊಂಡ ವಿದ್ಯಾದಾನ ಸಮಿತಿ ಇಂದು ಮೂರು ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾ "ದಾನ"ವನ್ನು ಗೈಯುತ್ತಾ ನೂರಾರು ಶಿಕ್ಷಕರಿಗೆ ಜೀವನೋಪಾಯಕ್ಕೆ ಆಶ್ರಯ ನೀಡಿದೆಯೆಂದರೆ ಅದಕ್ಕೆ ನಾರಾಯಣರಾಯರಂಥಹ ನಿಸ್ವಾರ್ಥ ವಿದ್ಯಾಪ್ರೇಮಿಗಳ ಸೇವಾ ಮನೋಭಾವನೆಯೇ ಮೂಲ ಕಾರಣವಾಗಿದೆ. ನಾರಾಯಣರಾಯರ ಜನ್ಮ ಶತಾಬ್ದಿಯಂದು ವಿದ್ಯಾದನ ಸಮಿತಿ (೧೯೮೪) ಅವರ ಕುರಿತು ಒಂದು ಸ್ಮರಣ ಸಂಚಿಕೆಯನ್ನು ಹೊರ ತಂದು ಅದರಲ್ಲಿ ಅವರ ಸಾಧನೆಗಳನ್ನು ಸ್ಮರಿಸಿ, ಅವರು ರಚಿಸಿದ ಭಕ್ತಿ ಗೀತೆಗಳನ್ನು ಅದರಲ್ಲಿ ಸಂಗ್ರಹಿಸಿ ಅವರನ್ನು ಕೃತಜ್ಞತಾ ಪೂರ್ವಕವಾಗಿ ನೆನೆಯಲಾಯಿತು.

ಇವರು ಸ್ಥಾಪಿಸಿದ ಗದುಗಿನ ವಿದ್ಯಾದಾನ ಶಿಕ್ಷಣ ಸಮಿತಿಯ ಮೈದಾನದಲ್ಲಿ ಅಖಿಲ ಭಾರತ ೭೬ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಬಹು ಅದ್ದೂರಿಯಾಗಿ ದಿನಾಂಕ ೧೯- ೨೦, ಹಾಗೂ ೨೧ನೆಯ ಫೆಬ್ರುವರಿ ೨೦೧೦ರಂದು ಜರುಗಿರುವದೊಂದು ಐತಿಹಾಸಿಕ ದಾಖಲಾಗಿದೆ.

**೪) ರಾಷ್ಟ್ರೀಯ ಚಳುವಳಿಯಲ್ಲಿ ಉಜ್ವಲ ಸೇವೆ:**

ಪ್ರತ್ಯಕ್ಷವಾಗಿ ಅಲ್ಲದಿದ್ದರೂ ನಾರಾಯಣರಾಯರು ಪರೋಕ್ಷವಾಗಿ ಅಂದು ನಡೆಯುತ್ತಿದ್ದ ರಾಷ್ಟ್ರೀಯ ಚಳುವಳಿಯಯಲ್ಲಿ ಭಾಗವಹಿಸಿ ತನ್ಮೂಲಕ ಕನ್ನಡ ನಾಡು-ನುಡಿ ಕಟ್ಟುವ ಕಾಯಕದಲ್ಲಿ ತೊಡಗಿಕೊಂಡಿದ್ದರು.

ತಮ್ಮ ಯೌವನದ ದಿನಗಳಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ನಾರಾಯಣರಾಯರು ಪುಣೆಗೆ ಬಂದು ಅಲ್ಲಿನ ಫರ್ಗ್ಯೂಸನ್ ಕಾಲೇಜಿಗೆ ಸೇರಿ ಬಿ.ಎ. ಅಭ್ಯಾಸವನ್ನು ಆರಂಭೀಸಿದರು ಆಗ ವಂಗಭಂಗ ಕಾವು ನಾರಾಯಣರಾಯರ ಹೃದಯದಲ್ಲಿ

ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿತು. ಅಲ್ಲಿ ರಾಷ್ಟ್ರಪ್ರೇಮ ಸಂಘಟನೆಗಳ ಸಂಪರ್ಕವನ್ನಿರಿಸಿಕೊಂಡು ಅವರು ಆ ಜನರ ದೇಶಾಭಿಮಾನ, ಸಂಘಟನಾ ಶಕ್ತಿ ಸಾಹಿತ್ಯಭಿಮಾನವನ್ನು ಮೈಗೂಡಿಸಿಕೊಂಡರು. ಅದೇ ಸಮಯದಲ್ಲಿ ಅವರಿಗೆ ವೀರಸಾವಕರ ಹಾಗೂ ರಾನಡೆಯವರ ಸಂಪರ್ಕ ಬಂಧಿತು. ಗೋಪಾಲಕೃಷ್ಣ ಗೋಖಲೆಯವರ ಭಾಷಣ ಕೇಳುವ ಸುಯೀಗ ದೊರಕಿತಲ್ಲದೇ ಅವರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂತು. ಮುಂದೆ ೧೯೦೯ರಲ್ಲಿ ಕಾಯಿದೆ ಅಭ್ಯಾಸ ಮಾಡಲು ಮುಂಬೈಗೆ ಹೋದಾಗ ಕೋಲಮಾನ್ಯ ಬಾಲಗಂಗಾಧರ ತಿಲಕರ ಸಂಪರ್ಕದ ಸಹವಾಸವೂ ಅವರಿಗೆ ದೊರಕಿತು. ಇನ್ನುಳೀದ ಅನೇಕ ರಾಷ್ಟ್ರನಾಯಕರನ್ನು ಕಾಣೂವುದರ ಮೂಲಕ ಅವರ ತಮ್ಮಲ್ಲಿನ ರಾಷ್ಟ್ರಾಭಿಮಾನವನ್ನು ಉಜ್ವಲವಾಗಿ ಬೆಳಸಿಕೊಂಡರು.

ನಾರಾಯಣರು ಕಾಂಗ್ರೆಸ್ಸಿನ ಸಾಮಾನ್ಯ ಸದಸ್ಯರಾಗಿ ನಿಷ್ಠೆಯ ಅನುಯಾಯಿಗಳಾಗಿ ಲಖನೌ, ಕಲಕತ್ತಾ, ಕಾಕಿನಾಡು ಬೆಳಗಾವಿ ಎಲ್ಲ ಕಾಂಗ್ರೆಸ್ ಅಧಿವೇಶನಗಳಿಗೆ ಭೇಟಿ ಕೊಟ್ಟಿದ್ದಾರೆ. ಅದಲ್ಲದೇ ಗಾಂಧೀಜಿಯಾವರಿಂದಾ ಪ್ರಭಾವಿತರಾಗಿ ನಾರಾಯಣರಾಯರು ಜೀವನ ಪರ್ಯಂತ ಖಾದಿಯನ್ನು ತೊಟ್ಟರಲ್ಲದೇ ಜೀವನಪರ್ಯಂತ ಖಾದಿ ಪ್ರಚಾರ ಮಾಡಿದರು.

ನಾರಾಯಣರಾಯರು ತಮ್ಮ ಣಾಟಕಗಳಲ್ಲಿ ರಾಷ್ಟ್ರಪ್ರೇಮವನ್ನು ಸೂಚ್ಯವಾಗಿ ವ್ಯಕ್ತಪಡಿಸಿದಾರೆ. 'ವಜ್ರಮುಕುಟ' ನಾಟಕದಲ್ಲಿ ಆಡಳಿತವನ್ನು ವಿರೋಧಿಸಿದ್ದಾರೆ. ಶಿಕ್ಷಣ ಸಂಭ್ರಮ ನಾಟಕದಲ್ಲಿ ವ್ಯಕ್ತಿ ಶಿಕ್ಷಣಕ್ಕೆ ಆದ್ಯತೆ ಕೊಟ್ಟಂತೆ ಕೈನೂಲು, ಖಾದಿ ಬಟ್ಟೆಯ ಬಳಖೆ ಮುಂತಾದವುಗಳನ್ನು ಪ್ರೋತ್ಸಾಹಿಸಿ ಸ್ವದೇಶಿ ಚಳುವಳಿಯಯ ಪೋಷಣೆ, ಪ್ರಚಾರ ಮಾಡಿದ್ದಾರೆ. ಸ್ತ್ರೀಧರ್ಮ ರಹಸ್ಯ, ಶಿಕ್ಷಣ ಸಂಭ್ರಮ, ಪತಿತೋದ್ಧಾರ ನಾಟಕಗಳಲ್ಲಿಯೂ ಬ್ರಿಟಿಷರ ದಬ್ಬಾಳಿಕೆಯನ್ನು ಖಂಡಿಸಿ ಸಾಮಾನ್ಯ ಜನತೆಯಲ್ಲಿ ನಾಟಕಗಳ ಸಂಭಾಷಣೆಯ ಮೂಲಕ ರಾಷ್ಟ್ರಕಟ್ಟುವ ಕಾಯಕವನ್ನು ಕೈಗೊಂಡಿದ್ದಾರೆ.

ನಾಟಕಗಳಂತೆ ನಾರಾಯಣರಾಯರ ಕಾವ್ಯಗಳಲ್ಲಿಯೂ ಅವರ ರಾಷ್ಟ್ರಾಭೀಮಾನ ಕಂಡು ಬರುತ್ತದೆ. ಅವರ "ಭಾರತ ಭೂವನ" (ನಾಡತೋಟ) ಹಾಗೂ "ಆಗುಂಬೆಯ ಸೂರ್ಯಾಸ್ತ" ಕವನಗಳಲ್ಲಿ ಅವರ ರಾಷ್ಟ್ರಾಭಿಮಾನ ವ್ಯಕ್ತವಾಗಿದೆ. ಹಲವಾರು ಸ್ವಾಗತಗೀತೆಗಳಲ್ಲಿ ಅವರ ರಾಷ್ಟ್ರಭಕ್ತಿ ಪ್ರಕಟಗೊಂಡಿದೆ.

"ಭಾರತ ಮಾತೆ ಜಯ ಜಯ ಸನ್ನತೆ
ಭಾರತ ಮಾತೆ ಜಯ ಜಯ ಸನ್ನತೆ
ಚಾರು ಪದಕೆ ನಮಿಸುವೆ ತಲೆಬಾಗುತೆ"

ಎನ್ನುವಲ್ಲಿ ಭಾರತ ತಾಯಿಗಾಗಿ ಭಾರತೀಯರೆಲ್ಲರೂ ಸಮರ್ಪಣಾ ಮನೋಭಾವದಿಂದಾ ಸೇವೆ ಸಲ್ಲಿಸಬೇಕೆಂಬ ಆಶಯ ವ್ಯಕ್ತವಾಗಿದೆ.

**ಕನ್ನಡ ನಾಡು ನುಡಿ ಕಟ್ಟುವಲ್ಲಿ ನಾರಾಯಣರಯರ ಪಾತ್ರ :**

ಕರ್ನಾಟಕ ಏಕೀಕೆರಣ ಹಾಗೂ ಕನ್ನಡ ನಾಡನು ಕಟ್ಟುವಲ್ಲಿ ಸಾಮಾನ್ಯವಾಗಿ ಣಾವು ಎರಡುಇ ರೀತಿಯ ಮಹಾನ್ ವ್ಯಕ್ತಿಗಳನ್ನು ಗುರುತಿಸುತ್ತೇವೆ. ಮೊದಲನೆಯವರು ತಮ್ಮ ನಾಡು ನುಡಿಗೆ ತಮ್ಮ ಜೀವನದುದ್ದಕ್ಕೂ ದೈಹಿಕವಾಗಿ , ಮಾನಸಿಕವಾಗಿ ಹೋರಾಟ ಮಾಡಿದವರು. ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರು. ಎರಡನೆಯವರು ತಮ್ಮ ಭಾಷಣ, ಬರಹ ಸಾಹಿತ್ಯದ ಮೂಲಕ ನಿರಂತರವಾಗಿ ಕರ್ನಾಟಕ ಏಕೀಕರಣ ಹಾಗೂ ನಾಡು ನುಡಿಗೆ ಸೇವೆ ಸಲ್ಲಿಸಿದವರು. ಹೋರಾಟಗಾರರಿಗೆ ಸ್ಫೂರ್ತಿಯಾದವರು. ಈ ಎರಡನೆ ಸಾಲಿಗೆ ಸೇರಿದ ಣಾರಾಯಣರಾಯರು ತಮ್ಮ "ಉದಯವಾಗಲಿ" ಗೀತೆಯಲ್ಲಿ ಪ್ರಾರಂಭೀಸಿ, ಸ್ವಾಗತಗೀತೆಗಳೂ, ಲೇಖನಗಳು, ನಾಟಕ ಸಾಹಿತ್ಯದ ಮೂಲಕ ಕನ್ನಡ ಸೇವೆಗೆ ಕಂಕಣಬದ್ಧರಾಗಿ ನಿಂತಿದ್ದಾರೆ.

ಹರಿದು ಹಂಚಿಹೋಗಿದ್ದ ಕನ್ನಡ ನಾಡು ಏಕೀಕೃತವಾಗಬೇಕೆಂದು ನಾರಾಯಣರಾಯರ ಮನದಾಳದ ಬಯಕೆಯಾಗಿತ್ತು. ಅವರು ರಚಿಸಿದ "ಉದಯವಾಗಲಿ" ರಾಷ್ಟ್ರಈಯ ಚಳುವಳೀಯಲ್ಲಿ "ವಂದೇ ಮಾತರಂ" ವಹಿಸಿದ ಪಾತ್ರವನ್ನೇ ಕರ್ನಾಟಕ ಏಕೀಕರಣದಲ್ಲಿ ವಹಿಸಿತೆಂದರೆ ಅದು ಅತಿಶಯೋಕ್ತಿಯೇನಲ್ಲ "ಕನ್ನಡಿಗರನ್ನು ಬಡಿದೆಬ್ಬಿಸಿದ ಪ್ರಾಭಾವಿ ವೀರಗೀತೆ" ಎನ್ನತಾರೆ. ಪ್ರೊ. ವಸಂತ ಕುಷ್ಟಗಿ ಉದಯವಾಗಲಿ ಗೀತೆಯ ಕುರಿತಾಗಿ,

ನಾರಾಯಣರಾಯರ ಬಹುತೇಕ ಕಾವ್ಯಗಳಲ್ಲಿ ಕನ್ನಡ ಪ್ರೇಮ ಹಾಸು ಹೊಕ್ಕಾಗಿದೆ. ಕರ್ನಾಟಕ ಐತಿಹಾಸವೆಂದರೆ ನಾರಾಯಣರಾಯರಿಗೆ ಅಪಾರ ಆಸ್ಥೆ. ಕನ್ನಡ ನಾಡಿನ ಗತ ವೈಭವದ ವರ್ಣನೆ ಅವರ ಕಾವ್ಯಗಳಲ್ಲಿ ಕಂಡು ಬರುತ್ತದೆ. ತಮ್ಮ ಮತ್ತೊಂದು ಪ್ರಸಿದ್ಧ ಕವನ "ಬೆಳಗಲೆಂದಿಗೂ ನಮ್ಮ ಚೆಲುವ ಕನ್ನಡ ನಾಡು" ಕವನದಲ್ಲಿ ಹೀಗೆ ಹೇಳುತ್ತಾರೆ

"ಬೆಳಗಲೆಂದಿಗೂ ನಮ್ಮ ಚೆಲವು ಕನ್ನಡ ನಾಡು,
"ಬೆಳಗಲೆಂದಿಗೂ ನಮ್ಮ ಚೆಲವು ಕನ್ನಡ ನಾಡು,
ಇಳೆಯೊಳಗೆ ಗೆಲು ಪಡೆದ ಭಾರತದ ಒಳ ನಾಡು"

ಇನ್ನುಳಿದಂತೆ 'ಕನ್ನಡಮ್ಮನ ಸ್ಥಿತಿ' , 'ಕನಸು' , "ಕರ್ನಾಟಕದ ಮಿಡುಕು" , " ರಥೋತ್ಸವ" , "ಒಂದಾದ ಕನ್ನಡ ನಾಡು" , " ಮೂಡಿದುದು ಮೂಡಿದುದು ಕನ್ನಡದ ರವಿ ಬಿಂಬ " ಮುಂತಾದ ಕಾವ್ಯಗಳಲ್ಲಿ ಅವರ ಕನ್ನಡ ಪ್ರೇಮ, ಕಳಕಳಿ ಹೃದಯ ಸ್ಪರ್ಶಿಯಾಗಿ ಅಭಿವ್ಯಕ್ತಗೊಂಡಿದೆ.

**ಕನ್ನಡ ಭಾಷೆ ಕಟ್ಟುವಲ್ಲಿ ನಾರಾಯಣರಾಯರ ಪಾತ್ರ :**

ನಾರಾಯಣರಾಯರು ಕನ್ನಡ ಸಾಹಿತ್ಯದೊಂದಿಗೆ ಕನ್ನಡ ಭಾಷೆಯ ಬೆಳವಣಿಗೆಯಲ್ಲೂ ಬಹು ಮುಖ್ಯ ಪಾತ್ರವಹಿಸಿದ್ದಾರೆ. ಅವರ ಕಾವ್ಯ ಶೈಲಿಯಲ್ಲಿ ಎದ್ದು ಕಾಣುವ ಸಂಗತಿ ಎಂದರೆ ಅವರ ವಿಶಿಷ್ಟ ಪದ ಪ್ರಯೋಗ ಸಾಮರ್ಥ್ಯ ಅವರ ಭಾಷೆಯ ಬಳಕೆಯಲ್ಲಿ ಗದುಗಿನ ಉತ್ತರ ಕರ್ನಾಟಕದ ಗಂಡು ಭಾಷೆಯ ಬಳಕೆಯಲ್ಲಿ ಅದರಲ್ಲೂ ಗದುಗಿನ ಉತ್ತರ ಕರ್ನಾಟಕದ ಗಂಡು ಮೆಟ್ಟಿನ ಭಾಷೆಯ ಪ್ರಯೋಗ ಕಂಡು ಬರುತ್ತದೆ. ದೇಶೀಯ ಪದ ಪಂಜುಗಳ ಬಳಖೆ ಪ್ರಾದೇಶಿಕ ಆಡುನುಡಿಯ ಬಳಕೆ, ನುಡಿಕಟ್ಟುಗಳು, ಗಾದೆಮಾತುಗಳು, ಕುಮಾರವ್ಯಾಸನಂತೆ ಶಬ್ದಗಳನ್ನು ಒಡೆಯುವುದು, ಬದಲಿಸುವುದು, ಹೊಸ ಶಬ್ದಗಳನ್ನು ರಚಿಸಿ ಪ್ರಯೋಗಿಸುವದು ಕಂಡು ಬರುತ್ತದೆ. ಸಂಸ್ಕೃತ ಪದಗಳ ಬಳಕೆಯೂ ಕೆಲವೆಡೆ ಕಂಡು ಬರುತ್ತದೆ.

ವೀರನಾರಾಯಣರ ಪರಮಭಕ್ತರಾದ ನಾರಾಯಣರಾಯರ ಕಾವ್ಯದ ಮೇಲೆ ಕುಮಾರವ್ಯಾಸರ ಪ್ರಭಾವ ಅಪಾರವಾಗಿ ಕಂಢು ಬರುತ್ತದೆ.

ಒಟ್ಟಾರೆಯಾಗಿ ನಾರಾಯಣರಾಯರ ಪಾತ್ರ ಕನ್ನಡ ಕಟ್ಟುವಲ್ಲಿ ಬಹು ಮುಖ್ಯವಾಗಿದೆ ಏಕೀಕರಣಕ್ಕೆ ಪ್ರೇರಣೆ ನೀಡಿದ ನಾರಾಯಣರಾಯರು ಸಾಹಿತ್ಯ, ಸ್ವಾಗತಗೀತೆಗಳು ಹಾಗೂ ಕನ್ನಡ ರಂಗಭೂಮಿಗೆ ಪುನಶ್ಚೇತನ ನೀಡುವುದು ಮೂಲಕ ಕನ್ನಡ ಕಟ್ಟುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದಾರೆ. "ಕನ್ನಡದ ಆದ್ಯ ಸಾಮಾಜಿಕ ನಾಟಕಕಾರರೆಂದೇ ಗುರುತಿಸಲ್ಪಡುವ ಇವರು ಅಂದಿನ ಕರ್ನಾಟಕ ಸಮಕಾಲೀನ ಜೀವನದಲ್ಲಿ ಕನ್ನಡದ ಸ್ವಾಭಿಮಾನವನ್ನು ಅಂಕುರಿಸಿದವರು ಕನ್ನಡ ನಾಡಿಗೆ ನಿತ್ಯ ಸ್ಮರಣೀಯರಾದ ನಾರಾಯಣರಾಯರು ನಾಡ ಗೀತೆಯ ನಾದ ನಾಡಿನ ಜನಸಾಮಾನಸದಲ್ಲಿ ನಿತ್ಯ ಮೀಡುಯುತ್ತಲೇ ಇರುತ್ತದೆ. ಕನ್ನಡಿಗರಿಗೆ ಚಿರಂತನ ಸ್ಫೂರ್ತಿಯ ಚೇತನವಾಗಿದ್ದಾರೆ.

■

# ಹುಯಿಲಗೋಳ ನಾರಾಯಣರಾಯರು ಜೀವನ ಸಾಧನೆ

| | | |
|---|---|---|
| ಜನನ | : | ೦೪- ೧೦- ೧೮೮೪. ಗದಗದಲ್ಲಿ. |
| ತಂದೆ-ತಾಯಿ | : | ಕೃಷ್ಣರಾಯರು - ರಾಧಾಬಾಯಿ [ಬಹಿಣಕ್ಕ] |
| ಶಾಲಾ ಶಿಕ್ಷಣ | : | ಗದಗ, ಗೋಕಾಕ, ಧಾರವಾಡಗಳಲ್ಲಿ. |
| ಮೆಟ್ರಿಕ್ಯುಲೇಷನ್ | : | ೧೯೦೨ [ಕೇಂದ್ರ - ಬೆಳಗಾವಿ] |
| ಮದುವೆ | : | ೧೯೦೫,೧೯೦೯ |
| ಬಿ.ಎ. | : | ೧೯೦೭ ಫರ್ಗ್ಯುಸನ್ ಕಾಲೇಜ್, ಪುಣೆ [ಮುಂಬಯಿ ವಿಶ್ವವಿದ್ಯಾಲಯ] |
| ಶಿಕ್ಷಕ | : | ೧೯೦೮ ೧೯೧೦ಧಾರವಾಡದವಿಕ್ಟೋರಿಯಾ ಹೈಸ್ಕೂಲ್‌ನಲ್ಲಿ. ಕವಿವರ್ಮ ದ.ರಾ. ಬೇಂದ್ರೆ ಇವರ ಶಿಷ್ಯರು. |
| ಪ್ರಥಮ ನಾಟಕ | : | ೧೯೧೦ರಲ್ಲಿ ರಚನೆ. |
| ಎಲ್.ಎಲ್.ಬಿ. | : | ಮುಂಬಯಿಯಲ್ಲಿ. |
| ವಕೀಲ ವೃತ್ತಿ | : | ಗದಗದಲ್ಲಿ ೧೯೧೧ರಲ್ಲಿ ಪ್ರಾರಂಭ. |
| ಪ್ರಥಮ ಮುದ್ರಿತ ನಾಟಕ | : | ಸ್ತ್ರೀ ಧರ್ಮ ರಹಸ್ಯ [ಸಾಮಾಜಿಕ, ಸಂಗೀತ ನಾಟಕ] |
| 'ಉದಯವಾಗಲಿ ನಾಡಗೀತೆ | : | ೧೯೨೫. ಸ್ವಾಗತ ಗೀತೆಯಾಗಿ ರಚನೆ. ಬೆಳಗಾವಿ ಕಾಂಗ್ರೆಸ್ನಲ್ಲಿ ಮನ್ನಣೆ. |
| ಸತ್ಕಾರ | : | ೧೯೫೨ ಕಲೋಪಾಸಕ ಮಂಡಲದಿಂದ.<br>೧೯೬೫ ಗದಗ - ಬೆಟಗೇರಿ ನಾಗರಿಕರಿಂದ.<br>೧೯೫೫ ಗದಗದ ವಕೀಲರ ಸಂಘದಿಂದ. |

| | | |
|---|---|---|
| | | ೧೯೫೬ ಕರ್ನಾಟಕ ಸರಕಾರದಿಂದ ಪ್ರಥಮ ರಾಜ್ಯೋತ್ಸವ ಸಮಾರಂಭದಲ್ಲಿ. ಡಾ॥ ಬಾಬು ರಾಜೇಂದ್ರ ಪ್ರಸಾದ ಅವರಿಂದ |
| ಬಹುಮಾನ | : | ೧೯೫೬'ಪತಿತೋದ್ಧಾರ' ನಾಟಕಕ್ಕೆಮುಂಬಯಿ ಸರಕಾರದಿಂದ. |
| ಸನ್ಮಾನ | : | ಕನ್ನಡ ಸಾಹಿತ್ಯ ಪರಿಷತ್ತಿನಿಂದ [ಗದಗದಲ್ಲಿ] ೧೯೬೧. |
| ಮರಣ | : | ೦೪ - ೦೭ - ೧೯೭೧ [ಹುಬ್ಬಳ್ಳಿಯಲ್ಲಿ] |
| ಮನ್ನಣೆ | : | ಗದಗನಲ್ಲಿ [ಟಾಂಗಾ ಕೂಟಕ್ಕೆ] 'ಹುಯಿಲಗೋಳ ನಾರಾಯಣರಾಯರ ವೃತ' ಎಂದು ನಾಮಕರಣ. ೧೯೭೪ |
| ಜನ್ಮ ಶತಾಬ್ದಿ ಆಚರಣೆ | : | ಮುಂಬಯಿಯ ವಿಶ್ವವಿದ್ಯಾಲಯ ಕನ್ನಡ ವಿಭಾಗದಿಂದ, ೧೯೮೪ ಗದಗ - ಬೆಟಗೇರಿ ನಗರಪಾಲಿಕೆ ಹಾಗೂ ಸಾಹಿತ್ಯ ಕುಟೀರ ಬೆಂಗಳೂರು ಇವುಗಳ ಸಂಯುಕ್ತ ಆಶ್ರಯದಲ್ಲಿ [೧೯೮೫]. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಸಂಸ್ಥೆಯಿಂದ, [೧೯೮೫] |

## ಗ್ರಂಥ ಋಣ

| | | |
|---|---|---|
| ೧ | ಹುಯಿಲಗೋಳ ನಾರಾಯಣರಾಯರು : ಜೀವನ ಹಾಗೂ ಸಾಹಿತ್ಯ | ಡಾ॥ ಜಿ.ಡಿ. ಜೋಶಿ |
| ೨ | ಹುಯಿಲಗೋಳ ನಾರಾಯಣರಾಯರು : ಜೀವನ - ಸಾಧನೆ, ೨೦೦೭ | ಶ್ರೀಮತಿ ರಾಧಾ ಕುಲಕರ್ಣಿ |
| ೩ | ಹುಯಿಲಗೋಳ ನಾರಾಯಣರಾಯರು : ಸಮಗ್ರ ಸಾಹಿತ್ಯ ಸಂಪುಟ ೧,೨,೩ | ಸಂ: ಡಾ॥ ಜಿ.ಎಸ್. ಆಮೂರ್ ಡಾ॥ ಜಿ.ಡಿ. ಜೋಶಿ |
| ೪ | ಕನ್ನಡ ಸಾಹಿತ್ಯ ಚರಿತ್ರೆ : | ರಂ.ಶ್ರೀ. ಮುಗಳಿ |

■■■